ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಉಮೇಶ ಬಸಪ್ಪ ಕಾತರಕಿ

ಮಾರ್ಗದರ್ಶಕರು

ಡಾ.ಶಿವಾನಂದ ವಿರಕ್ತಮಠ

ಪ್ರವಾಚಕರು, ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಉಮೇಶ ಬಸಪ್ಪ ಕಾತರಕಿ

ಮಾರ್ಗದರ್ಶಕರು

ಡಾ.ಶಿವಾನಂದ ವಿರಕ್ತಮಠ

ಪ್ರವಾಚಕರು, ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

ಮಾರ್ಗದರ್ಶಕರ ದೃಢೀಕರಣ ಪತ್ರ

ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಉಮೇಶ ಬಸಪ್ಪ ಕಾತರಕಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಶಿವಾನಂದ ವಿರಕ್ತಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 30/7/07

ಸಂಶೋಧಕರ ಪ್ರಮಾಣ ಪತ್ರ

ಬಿಸರಳ್ಳಿಯ ದೇವದಾಸಿ ಪದ್ಧತಿ : ಒಂದು ಅಧ್ಯಯನ ಎಂಬ ಸಂಪ್ರಬಂಧವನ್ನು ಡಾ. ಶಿವಾನಂದ ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಉಮೇಶ ಬಸಪ್ಪ ಕಾತರಕಿ
ಸಂಶೋಧಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 30-07-2007

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವೈಧಾನಿಕತೆ

೧. ಕ್ಷೇತ್ರಕಾರ್ಯ ವಿಧಾನದ ಮೂಲಕ ಮಾಹಿತಿ ಸಂಗ್ರಹಣೆ

೨. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ದೃಷ್ಟಿಕೋನ

೩. ಪ್ರಶ್ನಾವಳಿ ಮತ್ತು ಸಂದರ್ಶನಗಳ ವಿಧಾನಗಳ ಅಳವಡಿಕೆ

೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧. ಅಧ್ಯಯನದ ಉದ್ದೇಶ

ಇಂದು ಮಹಿಳಾ ಅಧ್ಯಯನವು ಹೆಚ್ಚು ವಿಶಾಲವೂ ಜನಪ್ರಿಯವೂ ಆಗುತ್ತಿದೆ. ಮೌಖಿಕ ಪರಂಪರೆಯಲ್ಲಿ ಬೆಳೆದು ಬಂದಿರುವ ಮಹಿಳಾ ಸಾಹಿತ್ಯ, ಕಲೆ, ಆಚರಣೆ, ನಂಬಿಕೆ, ಸಂಪ್ರದಾಯಗಳು ಅನಾದಿ ಕಾಲದಿಂದಲೂ ತುಂಬಾ ವಿಶಿಷ್ಟವಾಗಿ ಬೆಳೆದು ಬಂದವುಗಳಾಗಿದ್ದು, ಇವೆಲ್ಲ ಅಂದಂದಿನ ಸಮಾಜದ ಇಣುಕು ನೋಟಗಳನ್ನು ಒದಗಿಸಿಕೊಡುತ್ತವೆ. ಆದ್ದರಿಂದ ಮಹಿಳಾ ಸಾಹಿತ್ಯ, ಕಲೆ, ಆಚರಣೆಗಳು ಮಾನವನ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವಲ್ಲಿ ಮುಖ್ಯ ಸಾಧನಗಳಾಗಿವೆ. ಮಹಿಳಾ ಅಧ್ಯಯನವು ಈ ಎಲ್ಲ ಹಿಂದಿನ ಚಾರಿತ್ರಿಕ ಪರಂಪರೆಯನ್ನು ಇಂದಿಗೆ ತಲುಪಿಸುವ ಮುಖ್ಯ ಕಾರ್ಯವನ್ನು ಮಾಡುವುದಲ್ಲದೆ ಅದರೊಳಗಿನ ಪಿತೃಪ್ರಧಾನ ವ್ಯವಸ್ಥೆಯ ಮೂಲಭೂತವಾದೀ ಧೋರಣೆಗಳನ್ನು ಕೂಡಾ ಬಯಲು ಮಾಡುತ್ತದೆ.

ಒಂದೊಂದು ಜನಾಂಗದ ಮಹಿಳೆಯರು ಅವರ ವೃತ್ತಿ, ಪರಿಸರ, ಜೀವನ ವಿಧಾನದ ಹಿನ್ನೆಲೆಯಲ್ಲಿ ಹಲವಾರು ವೈಶಿಷ್ಟ್ಯತೆಗಳನ್ನು ಹೊಂದಿದ್ದಾರೆ. ಬದುಕಿನ ಕ್ಷೇತ್ರಗಳು ಭಿನ್ನವಾದಂತೆ· ಜೀವನದ ಅನುಭವಗಳು ಭಿನ್ನವಾಗಿರುತ್ತವೆ. ಆದಿ ಮಾನವನ ದೈವ ಪರಿಕಲ್ಪನೆಯೇ ಆತನ ಎಲ್ಲ ಕಲೆ ಸಾಹಿತ್ಯಗಳಿಗೂ ಮೂಲವಾಗಿದೆ. ಏಕೆಂದರೆ ಆತನು ಆನಾದಿ ಕಾಲದಿಂದಲೂ ಪೋಷಿಸಿಕೊಂಡು ಬಂದ ಕಲೆಗಳೆಲ್ಲ ಆರಾಧನಾ ಸಂದರ್ಭಗಳಲ್ಲಿಯೇ ಹುಟ್ಟಿದವುಗಳು. ಆತ ದೈವದ ಬಗ್ಗೆ ಚಿಂತನೆ ನಡೆಸಿದ್ದು ಸಾಹಿತ್ಯಕ್ಕೆ ಮೂಲವಾದಂತೆ ದೈವದ ಮುಂದೆ ಹಾಡಿನಲಿದದ್ದು ಸಂಗೀತ, ನೃತ್ಯಗಳಿಗೆ ಮೂಲವಾಯಿತು. ಹೀಗೆ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದುಬಂದಿರುವ ಸಂಪ್ರದಾಯವೊಂದರ ಔಚಿತ್ಯವನ್ನು ಇಲ್ಲಿ ವಿವೇಚಿಸಲಾಗಿದೆ.

ಒಂದು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅತ್ಯಂತ ಉಪಯುಕ್ತ ಮಾಹಿತಿಯನ್ನು ಮಹಿಳಾ ಅಧ್ಯಯನವು ಒದಗಿಸುತ್ತದೆ. ಅನಕ್ಷರತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದ ಕಾರಣವಾಗಿ ಹೆಣ್ಣಿನ ಸ್ಥಿತಿಗತಿ ಮತ್ತು ಸ್ಥಾನಮಾನಗಳ ಬಗ್ಗೆ ಒಂದು ಬಗೆಯ ಅನಾದರ ಮತ್ತು ನಿರಾಕರಣೆ ಸೃಷ್ಟಿಯಾಗಿದೆ. ಮಹಿಳೆಯರ ಬಗೆಗಿನ ಅಧ್ಯಯನ ಶಾಖೆ ಬೆಳೆದಂತೆ ವಿವಿಧ ಅಧ್ಯಯನ ಕ್ಷೇತ್ರಗಳಲ್ಲೂ ಸಂಚಲನ ಉಂಟಾಗುತ್ತಿದೆ. ಸಮಾಜ ಶಾಸ್ತ್ರಜ್ಞರು 'ದೇವದಾಸಿ'ಯರನ್ನು ಸಮಾಜ

[illegible]

[illegible]

[illegible]

[illegible]

[illegible]

ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಆದರೆ ಮಹಿಳಾ ಅಧ್ಯಯನದ ನೆಲೆಯಲ್ಲಿ 'ಬಿಸರಳ್ಳಿಯ ದೇವದಾಸಿ ಪದ್ಧತಿ'ಯ ಅಧ್ಯಯನವನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ. ದೇವದಾಸಿಯರ ಗತಕಾಲದ ಸಾಮಾಜಿಕ ವಿಷಮ ಸಂಸ್ಕೃತಿಯನ್ನು ಮತ್ತು ಪಿತೃಪ್ರಧಾನ ಸಮಾಜದಲ್ಲಿ ಅವರಿಗಿದ್ದ ಸ್ಥಾನಮಾನವನ್ನು ಜನತೆಗೆ ಪರಿಚಯ ಮಾಡಿಸುವುದು ಈ ಅಧ್ಯಯನದ ಆಶಯವಾಗಿದೆ.

ಜೀವನದ ಪ್ರತಿಯೊಂದು ರಂಗದಲ್ಲಿ ಪುರುಷನಿಗಿರುವಷ್ಟು ಸ್ಥಾನಮಾನಗಳು ಸ್ತ್ರೀಗೆ ಇರಬೇಕಾದುದು ಸಹಜ. ಆದರೆ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಇಚ್ಛೆಯಂತೆ ಬಳಸಿಕೊಂಡಿದೆ. ಧರ್ಮದ ಮುಖವಾಡದಲ್ಲಿ ಅವರನ್ನು ಹೆದರಿಸುತ್ತ ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಸ್ವಾರ್ಥ ಸಾಧಿಸಿದೆ. ಹೆಣ್ಣಿನ ಬದುಕಿನಲ್ಲಿ ಶೋಷಣೆ ಎನ್ನುವುದು ಚಾರಿತ್ರಿಕವಾಗಿ ಬೆಳೆದು ಬಂದು ಅವಳ ಜೀವನದ ಪ್ರತಿ ಹಂತವನ್ನು ಸುತ್ತುವರಿದಿದೆ. ಹೆಣ್ಣನ್ನು ಸವಿಯಾದ ಮಾತುಗಳಿಂದ ನಂಬಿಸಿ ವಂಚಿಸಲಾಗಿದೆ. ಹೆಂಗಸರು ತಾವು ಗಂಡಸರ ಗುಲಾಮರೆಂದು ವರ್ತಿಸುವಂತೆ ಅವರನ್ನು ಶೋಷಿಸಲಾಗಿದೆ. ಆರ್ಥಿಕತೆ ಹಾಗೂ ಅಧಿಕಾರ ಬಲಗಳು ಪುರುಷರ ವಶದಲ್ಲಿ ಇರುವಂತಹ ಎಲ್ಲಾ ಕ್ಷೇತ್ರಗಳಲ್ಲಿಯೂ ಹೆಣ್ಣನ್ನು ಪುರುಷರು ಆಸ್ತಿಯಂತೆ ಭಾವಿಸಲಾಗಿದೆ. ಈ ಅಂಶ ಆಯಾ ಸಾಂಸ್ಕೃತಿಕ ಪರಿಸರದಲ್ಲಿ ಬೇರೆಯಾಗಿ ಅಭಿವ್ಯಕ್ತವಾಗಿದೆ. ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಆಯಾ ಧರ್ಮ, ಜಾತಿ, ಉಪಜಾತಿಗಳ ನೆಲೆಯಲ್ಲಿ ಮಹಿಳೆಯರ ಜೀವನ ವಿಧಾನ, ಸಾಮಾಜಿಕ ಸ್ಥಾನಮಾನಗಳು ವಿಭಿನ್ನವಾಗಿದ್ದರೂ ಶೋಷಣೆ ಮಾತ್ರ ಒಂದೇ ಮೂಲದಿಂದ ನಡೆದಿದೆ. ಈ ಅಂಶಗಳನ್ನು ಮೀರಿ ಸಾಮಾಜಿಕ ಜೀವನದ ವ್ಯವಸ್ಥಿತ ನಡೆಗೆ ಒಂದು ನೀತಿ ಸಂಹಿತೆಯ ಆಡಳಿತಾತ್ಮಕ ವಿಧಾನವೊಂದು ಮಹಿಳಾ ಬದುಕಿನ ದೈನಂದಿನ ಜೀವನಕ್ಕೆ ಅವಶ್ಯವೆನಿಸುತ್ತದೆ.

ಲಿಂಗ ತಾರತಮ್ಯ ಹಿನ್ನೆಲೆಯಲ್ಲಿ ಕಾಣಿಸಿಕೊಂಡ ಲೈಂಗಿಕ ಶೋಷಣೆ ಮಾನವ ಚರಿತ್ರೆಯಲ್ಲಿ ಕಾಣಿಸಿಕೊಂಡ ವಿಚಿತ್ರ ಶೋಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಪುರೋಹಿತಶಾಹಿ ಹಾಗೂ ಆಡಳಿತ ಶಾಹಿಗಳು ದೇವದಾಸಿಯರನ್ನು ಸೃಷ್ಟಿಸಿ ಬೆಳೆಸಿದ್ದೊಂದು ಭಾರತದ ಸಾಂಸ್ಕೃತಿಕ ದುರಂತ. ದೇವದಾಸಿ ಸಂಪ್ರದಾಯಕ್ಕೆ ಧಾರ್ಮಿಕ ಮೌಲ್ಯಗಳನ್ನು ಆರೋಪಿಸಿ ಅವರನ್ನು ಕುಲವೃತ್ತಿಯ ಜೊತೆಗೆ ದೇವದಾಸಿಯರಾಗಿ ಮುಂದುವರೆಯುವಂತೆ ಉತ್ತೇಜಿಸಲಾಯಿತು. ದೇವದಾಸಿಯಾದವಳು ನಿತ್ಯ ಮುತ್ತೈದೆ. ಅವಳು ಶುಭಕರಳು ಆದ್ದರಿಂದ ಶ್ರೇಷ್ಠಳು ಎಂದು ಪುರೋಹಿತಶಾಹಿ ಸಂಸ್ಕೃತಿ ಹೇಳಿರುವುದು ಧಾರ್ಮಿಕ ಶೋಷಣೆ ಅಲ್ಲದೇ ಇನ್ನೇನು ಅಲ್ಲ. ಅವಳ ವೈವಾಹಿಕ ಜೀವನ ಹಾಗೂ ದೇವಾಲಯದಲ್ಲಿಯ ಅವಳ ಮಹತ್ವವು ಸಾಮಾಜಿಕವಾಗಿ, ಧಾರ್ಮಿಕವಾಗಿ ಅವಳಿಗಿರುವ ಕನಿಷ್ಠ ಸ್ಥಾನಮಾನಗಳನ್ನು ಬಹಿರಂಗಪಡಿಸುತ್ತದೆ.

'ಗೆಜ್ಜೆಕಟ್ಟ'ದ ದೇವದಾಸಿಯರನ್ನು ಸಮಾಜವು ಬಸವಿಯರು, ಸೂಳೆಯರು ಎಂದು ತಪ್ಪಾಗಿ ಗ್ರಹಿಸಿದೆ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗೆಜ್ಜೆ ಕಟ್ಟಿದವರು ಇವರೆಲ್ಲರಿಗಿಂತ ಭಿನ್ನರಾಗಿ ಕಾಣುತ್ತಾರೆ. ಅವರ ಕೌಟುಂಬಿಕ ಜೀವನದಲ್ಲಿ ಅತ್ಯಂತ ಮುಖ್ಯವಾಗಿರುವ ಹೆಣ್ಣು ಮಗುವಿನ ಜನನ, ಋತುಮತಿ ಆಚರಣೆ,

[illegible]

ಪ್ರಸ್ಥ, ಮುಂತಾದವುಗಳನ್ನು ವಿಶ್ಲೇಷಣೆಗೆ ಗುರಿಪಡಿಸುವುದರೊಂದಿಗೆ ಅವರ ಮಾತೃಮೌಲೀಯ ಪದ್ಧತಿಯ ಔಚಿತ್ಯವು ಗೊತ್ತಾಗುತ್ತದೆ. ಉನ್ನತ ವರ್ಗದವರು ದೇವದಾಸಿಯರೊಂದಿಗೆ ಸಂಪರ್ಕವಿಟ್ಟುಕೊಂಡಿದ್ದರೂ, ಕೌಟುಂಬಿಕ ನೆಲೆಯಲ್ಲಿ ಅವರು ಕಾಯ್ದುಕೊಂಡು ಬಂದ ಸಾಮಾಜಿಕ ಅಂತರಗಳನ್ನು ಸೂಕ್ಷ್ಮವಾಗಿ ಗುರುತಿಸುತ್ತ ಅವರ ಸಾಮಾಜಿಕ ಸ್ಥಾನಮಾನಗಳನ್ನು ಗಮನಿಸುತ್ತಾ ಆಧುನಿಕತೆಯಲ್ಲಾದ ಅವರ ಸಾಮಾಜಿಕ ಸ್ಥಿತ್ಯಂತರಗಳನ್ನು ವಿಶ್ಲೇಷಣೆಗೆ ಗುರಿಪಡಿಸುವ ಅಗತ್ಯವಿದೆ.

ಒಂದು ಕಾಲದಲ್ಲಿ ಮಹತ್ವ ಪಡೆದಿರುವ 'ಬಿಸರಳ್ಳಿಯ ದೇವದಾಸಿ ಪದ್ಧತಿ' ಇಂದು ಸಂಪೂರ್ಣ ನಿಂತು ಹೋಗಿದೆ. ಆದರೂ ಈ ಸಮುದಾಯದವರಿಗೆ ತಮ್ಮ ಹಿಂದಿನ ಪರಂಪರೆಯ ಬಗ್ಗೆ ಕೀಳರಿಮೆ ಇದೆ. ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವಂತೆ ಮಾಡಬೇಕಾದ ಅಗತ್ಯವಿದೆ.

ಸಾಮಾಜಿಕವಾಗಿ ಪರಿಧಿಗೆ ತಳ್ಳಲ್ಪಟ್ಟ ಮತ್ತು ಸಾಮಾಜಿಕ ಕೀಳರಿಮೆಗೆ ಗುರಿಯಾದ ಈ ಸಮುದಾಯದ ಸಾಂಸ್ಕೃತಿಕ ಹಿರಿಮೆಯನ್ನು ಪುನರ್ ರಚಿಸುವುದು ಮತ್ತು ಸಮಾಜ ಅವರ ಬಗ್ಗೆ ಗೌರವ ಭಾವನೆಯನ್ನು ತಾಳುವಂತೆ ಮಾಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಸಮುದಾಯದಲ್ಲಿದ್ದ ಒಂದು ಶ್ರೀಮಂತ ಕಲೆಯನ್ನು ಆಧುನಿಕ ಸಂದರ್ಭಕ್ಕೆ ಮರು ರಚಿಸುವ ಅವಶ್ಯಕತೆ ಇದೆ. ಇದರ ಬಗ್ಗೆ ಇರುವ ಜನರ ಅಭಿಪ್ರಾಯವನ್ನು ಪುನರ್ ರೂಪಿಸಬೇಕಾಗಿದೆ. ಇವರ ವ್ಯಕ್ತಿಗತ ಅನುಭವಗಳನ್ನು ಮಹಿಳಾ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಇಟ್ಟು ವಿಶ್ಲೇಷಣೆಗೊಳಪಡಿಸುವ ಅಗತ್ಯವಿದೆ. ಸದ್ಯದ ಒಲವುಗಳೇನು? ಯಾವ ಸಂಗತಿಗಳು ಬದಲಾವಣೆಗೆ ದಾರಿ ಮಾಡಿಕೊಡುತ್ತಿವೆ? ಈ ಗುಂಪಿನ ಜೀವನದಲ್ಲಿ ಏನಾದರೂ ಬದಲಾವಣೆಗಳಾಗುತ್ತಿವೆಯೇ? ಇವರ ಅಭಿವೃದ್ಧಿಯಲ್ಲಿ ಸ್ವಯಂ ಸೇವಾ ಸಂಘಟನೆಗಳ ಪಾತ್ರವೇನು? ಶಾಸನಗಳ ಹಿನ್ನೆಲೆಯಲ್ಲಿ ಸರ್ಕಾರದ ಪುನರ್ವಸತಿ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಹೇಗೆ ಸಾಗಿವೆ? ಇವೆಲ್ಲವುಗಳನ್ನು ಪರಿಶೀಲಿಸುವುದು ಅಧ್ಯಯನದ ಮುಖ್ಯ ಆಶಯವಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕ ಹಿನ್ನೆಲೆಯುಳ್ಳ ರಂಗಭೋಗದಲ್ಲಿ ತೋರಿಕೆಗೆ ಪ್ರಾಧಾನ್ಯತೆಯನ್ನು ಪಡೆದುಕೊಂಡು ಇತ್ತೀಚಿನವರೆಗೂ ಪ್ರಚಲಿತದಲ್ಲಿದ್ದ ದೇವದಾಸಿಯರ ಬದುಕಿನ ವಿವರಗಳು, ಧಾರ್ಮಿಕ ಹಾಗೂ ಸಾಮಾಜಿಕ ಸ್ಥಾನಮಾನಗಳು, ಶೋಷಣೆಗಳು ಇವೆಲ್ಲವುಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕಾದ ತುರ್ತು ಅಗತ್ಯವಿದೆ. ಯಾವುದೇ ಒಂದು ಜಾತಿ ತನ್ನದೇ ಆದ ಆಚಾರ, ವಿಚಾರ, ನಡವಳಿಕೆ, ಸಂಪ್ರದಾಯ, ದೈವ, ದೇವರು ಮುಂತಾಗಿ ರೂಢಿಸಿಕೊಂಡಿರುತ್ತಾರೆ. ಈ ದೃಷ್ಟಿಯಲ್ಲಿ ಕಲಾವಂತರ ಬದುಕಿನ ಹಲವು ಮಜಲುಗಳ ಅಧ್ಯಯನ ನಡೆಸುವ ಮತ್ತು ಒಟ್ಟು ಭಾರತೀಯ ಸಂಸ್ಕೃತಿಗೆ ಇವರ ಕೊಡುಗೆಯನ್ನು ಗಮನಿಸುವುದು ತುಂಬಾ ಅಗತ್ಯವಾಗಿದೆ. ಅಲ್ಲದೇ ಉತ್ತರ ಕರ್ನಾಟಕದ ಇತರ ಭಾಗಗಳಲ್ಲಿ 'ದೇವದಾಸಿ ಪದ್ಧತಿ' ಇಂದಿಗೂ ಜೀವಂತವಾಗಿದೆ. ಲಿಂಗತಾರತಮ್ಯದ ನೆಲೆಯಲ್ಲಿ ರೂಪಗೊಂಡ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಸಂಬಂಧಗಳನ್ನು ದೊಡ್ಡ ಸಮಸ್ಯೆಗಳನ್ನಾಗಿ

ಪರಿಗಣಿಸಬೇಕಾಗಿದೆ. ಅಂದಾಗ ಮಾತ್ರ ಲಿಂಗದ ನೆಲೆಯಲ್ಲಿ ಸಮಾಜವು ಹೇಗೆ ತಾರತಮ್ಯಗಳನ್ನು ನಿಭಾಯಿಸುತ್ತದೆ ಎಂಬುದು ಅರ್ಥವಾಗುತ್ತದೆ. ಅದರ ನಿರ್ಮೂಲನೆಗೆ ಕಾರಣಗಳನ್ನು ಹುಡುಕಲು ಸಾಧ್ಯವೆ? ಎನ್ನುವುದನ್ನು ಪ್ರಶ್ನಿಸಬೇಕಾಗಿದೆ. ಈ ಎಲ್ಲ ಉದ್ದೇಶಗಳ ಹಿನ್ನೆಲೆಯಲ್ಲಿ ಈ ಪ್ರಬಂಧವನ್ನು ರೂಪಿಸಲಾಗುವುದು.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಬಿಸರಳ್ಳಿ ಗ್ರಾಮದ ದೇವದಾಸಿ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ದೇವದಾಸಿಯರು ಹೊರಗಿನವರೊಂದಿಗೆ ಮುಕ್ತವಾಗಿ ಚರ್ಚಿಸಲು ಸಾಮಾನ್ಯವಾಗಿ ಮೊದ ಮೊದಲು ಹಿಂಜರಿಯುತ್ತಾರೆ. ಆದರೂ ಎಷ್ಟು ದೇವದಾಸಿಯರಿಂದ ಸಾಧ್ಯವೋ ಅಷ್ಟು ದೇವದಾಸಿಯರಿಂದ ಆಚರಣೆಗಳ ವಿಚಾರಗಳನ್ನು ದಾಖಲಿಸಿಕೊಳ್ಳಲಾಗಿದೆ. ದೇವದಾಸಿ ಆಚರಣೆಯು ಸೂಳೆಗಾರಿಕೆಯ ಜೊತೆ ಬೆರೆತುಹೋಗಿದೆ. ದೇವತೆಗೆ ಅರ್ಪಿಸಲ್ಪಟ್ಟ ಮೇಲೆ ಹೆಚ್ಚಾಗಿ ದೇವದಾಸಿಯರು ನಗರಗಳ ವೇಶ್ಯಾವಾಟಿಕೆಗಳಿಗೆ, ವೇಶ್ಯಾವೃತ್ತಿಗೆ ಇಳಿಯಲು ಹೋಗುತ್ತಾರೆ. ಆದುದರಿಂದ ಗ್ರಾಮದ ದೇವದಾಸಿ ಮತ್ತು ಊರೊಟ್ಟಿನ ಸಂಬಂಧವನ್ನು ವಿವರಣೆ ನೀಡುವ ಪ್ರಯತ್ನವನ್ನು ಕ್ಷೇತ್ರಕಾರ್ಯ ವಿಧಾನವನ್ನು ಅನುಸರಿಸಿ ಮಾಡಲಾಗುವುದು. ಇದು 'ಬಿಸರಳ್ಳಿ' ವ್ಯಾಪ್ತಿಗೆ ಸೀಮಿತವಾಗಿದ್ದರೂ ಒಟ್ಟು ಕರ್ನಾಟಕ ಹಾಗೂ ಭಾರತೀಯ ಸಂದರ್ಭದಲ್ಲಿ ಪ್ರಚಲಿತದಲ್ಲಿದ್ದ ದೇವದಾಸಿ ಸಂಪ್ರದಾಯದ ವ್ಯಾಪ್ತಿಗೆ ಹರಡಿಕೊಂಡಿದೆ. ಈ ಅಧ್ಯಯನವನ್ನು 'ಮಹಿಳಾ ಅಧ್ಯಯನ'ದ ನೆಲೆಯಲ್ಲಿ ಕೈಗೊಂಡಿದ್ದು ಆ ಮೂಲಕ ದೇವದಾಸಿಯರ ಗತಕಾಲದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕ ಹಿನ್ನೆಲೆಯುಳ್ಳ ರಂಗಭೋಗದಲ್ಲಿ ತೋರಿಕೆಗೆ ಪ್ರಾಧಾನ್ಯತೆ ಪಡೆದುಕೊಂಡು ಇಂದಿಗೂ ಜೀವಂತವಾಗಿರುವ ದೇವದಾಸಿಯರ ಬದುಕಿನ ವಿವರಗಳು ಧಾರ್ಮಿಕ, ರಾಜಕೀಯ, ಸಾಮಾಜಿಕ ಸ್ಥಾನಮಾನಗಳು, ಶೋಷಣೆಗಳು ಇವೆಲ್ಲವುಗಳನ್ನು ವಿಶ್ಲೇಷಣೆಗೊಳಪಡಿಸಬೇಕಾದ ತುರ್ತು ಅವಶ್ಯಕತೆ ಇದ್ದೇ ಇದೆ. ದೇವದಾಸಿಯರ ಪರಂಪರೆ ಇಂದಿಗೂ ಹಲವಾರು ಕಾನೂನು ನಿಷೇಧಗಳ ಮಧ್ಯದಲ್ಲಿ ಅಲ್ಲಲ್ಲಿ ಜೀವಂತವಾಗಿರುವುದು ಸ್ತ್ರೀಯರ ಮೇಲಿನ ಲೈಂಗಿಕ ದೌರ್ಜನ್ಯ ಬೆತ್ತಲೆಗೊಳಿಸುತ್ತದೆ.

ದೇವದಾಸಿ ಸಂಪ್ರದಾಯ ಹಲವಾರು ಕಡೆ ಸಂಪೂರ್ಣವಾಗಿ ನಿಂತುಹೋಗಿದ್ದರೂ ಇನ್ನೂ ಕೆಲವು ಕಡೆ ಬಲವಾಗಿ ಉಳಿದುಕೊಂಡುಬಂದಿದೆ. ಅದಕ್ಕಾಗಿ ದೇವದಾಸಿಯರನ್ನು ಎಚ್ಚರಗೊಳಿಸುವ ಮೂಲಕ ಸ್ತ್ರೀಯರ ಕುರಿತಾಗಿ ಸಾಮಾಜಿಕ ನಿಲುವುಗಳನ್ನು ಬದಲಾಯಿಸುವುದು ನಮ್ಮ ಪ್ರಧಾನ ಕಾಳಜಿಯಾಗಬೇಕು. ಈ ಅಧ್ಯಯನದ ಹೆಚ್ಚಿನ ಭಾಗವನ್ನು ಕ್ಷೇತ್ರ ಕಾರ್ಯವನ್ನು ಆಧರಿಸಿ ವಿಶ್ಲೇಷಿಸಲಾಗಿದೆ. ಜೊತೆಗೆ ವಿದ್ವಾಂಸರೊಂದಿಗಿನ ಚರ್ಚೆ ಮತ್ತು ಸಾಹಿತ್ಯ ಗ್ರಂಥಗಳ ಪರಾಮರ್ಶೆಯ ಮೂಲಕ ಮಾಡಲಾಗಿದೆ.

೧.೩. ಅಧ್ಯಯನದ ವೈಧಾನಿಕತೆ

'ಬಿಸರಳ್ಳಿ ದೇವದಾಸಿ ಪದ್ಧತಿಯ ಅಧ್ಯಯನ' ಎಂಬ ಸಂಪ್ರಬಂಧದ ವೈಧಾನಿಕತೆಯ ಸ್ವರೂಪವನ್ನು ಕುರಿತು ಪ್ರಸ್ತಾಪಿಸುವ ಚೌಕಟ್ಟನ್ನು ಇಲ್ಲಿ ಸ್ಥೂಲವಾಗಿ ರೂಪಿಸಿಕೊಳ್ಳಲಾಗಿದೆ. ಸಾಮಾಜಿಕ ಸಮಸ್ಯೆಯಾಗಿರುವ 'ದೇವದಾಸಿ'ಯಂಥ ಪದ್ಧತಿಗಳನ್ನು ಕುರಿತು ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಅಗತ್ಯವಾಗಿ ಸೈದ್ಧಾಂತಿಕ ಸ್ವರೂಪವನ್ನು ಕುರಿತು ಕೂಡ ಇಲ್ಲಿ ಪ್ರಸ್ತಾಪಿಸಲಾಗುವುದು.

ಪ್ರಸ್ತುತ ಅಧ್ಯಯನವು ಮುಖ್ಯವಾಗಿ ಸ್ತ್ರೀವಾದ, ಮಹಿಳಾ ಅಧ್ಯಯನ ಪರಂಪರೆಗಳ ದೃಷ್ಟಿಕೋನಗಳನ್ನು ತಾತ್ವಿಕ ಹಿನ್ನೆಲೆಯಾಗಿಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗುವುದು. ಮಹಿಳೆಯ ಅಸ್ತಿತ್ವ ಅದನ್ನು ಸಾಮಾಜಿಕ ನೀತಿ ನಿರೂಪಣೆಗಳ ಕಾರಣದಿಂದಾಗಿ ಉಂಟಾಗುವ ಚಹರೆಗಳನ್ನು ಅಧ್ಯಯನ ಮಾಡಲೇಬೇಕಾದಾಗ ಅದರ ಚಾರಿತ್ರಿಕ ಸ್ವರೂಪ ಹಾಗೂ ವಿವಿಧ ಕಾಲಘಟ್ಟಗಳಲ್ಲಿ ಒದಗಿ ಬಂದ ಸ್ಥಿತ್ಯಂತರಗಳನ್ನು ಗ್ರಹಿಸಲೇಬೇಕಾಗುತ್ತದೆ. ಈ ಕಾರಣಗಳಿಗೆ ಇಲ್ಲಿ ಹಲವು ಬಗೆಯ ವೈಧಾನಿಕತೆಗಳ ಬಳಕೆಯನ್ನು ಮಾಡಬೇಕಾಗುತ್ತದೆ. ಉದಾಹರಣೆಗಾಗಿ ಪ್ರಸ್ತಾಪಿಸಬಹುದಾದರೆ ಮೂಲಭೂತವಾಗಿ ಮಾಹಿತಿ ಸಂಗ್ರಹಣೆಯ ಹಂತದಲ್ಲಿ ಕ್ಷೇತ್ರಕಾರ್ಯದ ಚೌಕಟ್ಟನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಪ್ರಶ್ನಾವಳಿಗಳ ಸಿದ್ಧತೆ, ಸಂದರ್ಶನಗಳನ್ನು ನಡೆಸಲೇಬೇಕಾದ ಅಗತ್ಯತೆ, ಮಾಹಿತಿಗಳನ್ನು ವಿಶ್ಲೇಷಣೆಗಾಗಿ ಆಧರಿಸಬೇಕಾದಾಗ ಗುಣಾತ್ಮಕ ವಿಧಾನದ ಗ್ರಹಿಕೆ ಮಹಿಳಾ ವಿಷಯವನ್ನು ವಿಶ್ಲೇಷಿಸಲು ಬೇಕಾದ ವ್ಯಕ್ತಿನಿಷ್ಠ ದೃಷ್ಟಿಕೋನ ಮುಂತಾದವುಗಳ ಬಗೆಗೆ ಒಂದು ಸ್ಥೂಲ ನೋಟವನ್ನು ಇಲ್ಲಿ ಒದಗಿಸಲಾಗಿದೆ. ಆ ಮೂಲಕ ಪ್ರಸ್ತುತ ಸಂಪ್ರಬಂಧದಲ್ಲಿ ಬಳಕೆಯಾದ ವಿಧಾನಗಳ ಒಂದು ಸಾರಭೂತ ವಿವರಣೆಯನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

ಕ್ಷೇತ್ರಕಾರ್ಯದ ವಿಧಾನದ ಮೂಲಕ ಮಾಹಿತಿ ಸಂಗ್ರಹಣೆ

ಬಿಸರಳ್ಳಿ ಗ್ರಾಮದ ಜನತೆಯು ಹೊರಗಿನವರೊಂದಿಗೆ ಮುಕ್ತವಾಗಿ ಚರ್ಚಿಸಲು ವಿಶೇಷವಾಗಿ ಅದರಲ್ಲೂ ಬಿಸರಳ್ಳಿ ದೇವದಾಸಿಯರಂತೂ ಮೊದ ಮೊದಲು ಬಹಳಷ್ಟು ಹಿಂಜರಿಯುತ್ತಾರೆ. ಎಷ್ಟು ದೇವದಾಸಿಯರಿಂದ ಸಾಧ್ಯವೋ ಅಷ್ಟು ದೇವದಾಸಿಯರಿಂದ ಆಚರಣೆಗಳ ವಿವರಗಳನ್ನು ದಾಖಲಿಸಿಕೊಳ್ಳಲಾಗುವುದು. ಸುಮಾರು ೨೪ ದೇವದಾಸಿಯರಿಂದ ಅಂತರ ಮತ್ತು ಅಂತರಜಾತೀಯ ಸಂಬಂಧಗಳು, ಸಮಾರಂಭಗಳ ಜೀವನ ಚಕ್ರ, ಆಚರಣೆಗಳು ದೇವದಾಸಿಯರು ಊರೊಟ್ಟಿನ ಸಂಬಂಧ ಇನ್ನೂ ಮುಂತಾದವುಗಳನ್ನು ಪತ್ತೆ ಹಚ್ಚಲು ಸಹಾಯಕವಾದವು. ಒಟ್ಟಾಗಿ ಅವರ ವಿವಿಧ ಆಚರಣೆಗಳನ್ನು ಹತ್ತಿರದಿಂದ ಗಮನಿಸಲಾಗುವುದು. ರಚಿತ ಮತ್ತು ಅರಚಿತ ಪ್ರಶ್ನೆಗಳ ನೆರವಿನಿಂದ ಸಾಮಾಜಿಕ, ಆರ್ಥಿಕ, ಜನಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಲಾಗುವುದು. ದೇವದಾಸಿಯರೊಂದಿಗೆ ಸಂಬಂಧವನ್ನು ಸ್ಥಾಪಿಸುವುದು ಮತ್ತು ಸಂದರ್ಶಿಸುವುದು, ಕ್ಷೇತ್ರಕಾರ್ಯದ ಮುಖ್ಯ ಉದ್ದೇಶವಾಗಿತ್ತು. ಅವರು ದೇವಸ್ಥಾನ

[illegible]

[illegible]

[illegible]

[illegible]

ನೃತ್ಯದ ಪ್ರತ್ಯಕ್ಷ ಸಾಕ್ಷಿಗಳಾಗಿ ಸೇವಾ ವ್ಯವಸ್ಥೆಯ ಒಂದು ಭಾಗವೇ ಆಗಿದ್ದರೋ ಅಥವಾ ಇಲ್ಲವೋ ಎಂಬುದನ್ನು ತಿಳಿಯಲು ಸಂದರ್ಶನಗಳನ್ನು ಮಾಡಲಾಗುವುದು. ದೇವಸ್ಥಾನದ ಪೂಜಾರಿಗಳು ಮತ್ತು ಬಿಸರಳ್ಳಿ ಗ್ರಾಮದ ಸಮುದಾಯದ ಮುಂದಾಳುಗಳನ್ನು ಸಹ ಸಂಪರ್ಕಿಸಲಾಗುವುದು.

ವಂಶಾವಳಿಯ ದಾಖಲೆಗಳ ಜೊತೆಗೆ ಬಿಸರಳ್ಳಿ ಗ್ರಾಮದ ಪ್ರತಿಯೊಬ್ಬ ದೇವದಾಸಿಯ ವಿವರಣಾತ್ಮಕ ಜೀವನ ಚರಿತ್ರೆಯನ್ನು ಸಂಗ್ರಹಿಸಲಾಗುವುದು. ಪದ್ಧತಿಯಿರುವ ಸಮುದಾಯದ ಜೀವನದ ಮೇಲೆ ಅದರ ಪ್ರಭಾವ, ಪುನರ್ವಸತಿ ಕಾರ್ಯಕ್ರಮದ ಪರಿಣಾಮ ಇವುಗಳ ಸತ್ಯ ಅರಿಯಲು ದೇವದಾಸಿಯರು ಅವರ ತಂದೆ ತಾಯಿಗಳು ಮತ್ತು ಸಮುದಾಯದ ಮುಂದಾಳುಗಳನ್ನೊಳಗೊಂಡಂತೆ ಅನೇಕರ ಅಭಿಪ್ರಾಯಗಳನ್ನು ಸಹ ಸಂಗ್ರಹಣೆ ಮಾಡಲಾಗುವುದು ದೇವದಾಸಿಯ ಬೇಸತ್ತ ಜೀವನ ಇಂತಹ ವೈಪರಿತ್ಯದ ತಿರುವಿನೊಂದಿಗೆ ದೇವದಾಸಿ ಆಚರಣೆಯ ಮಾಮೂಲಿ ಸೊಳೆಗಾರಿಕೆಯ ಜೊತೆ ಬೆರೆತು ಹೋಗಿದೆ.

ಈ ಮೇಲೆ ಸೂಚಿಸಿದ ಆಕರಗಳಿಗೆ ಪೂರಕವಾಗಿ ಜೀವನ ಚರಿತ್ರೆಗಳು, ಗ್ರಾಮದ ದಾಖಲೆಗಳು, ಬಿಸರಳ್ಳಿಯ ಜನಗಣತಿ, ಕೈ ಪುಸ್ತಕಗಳು, ಪ್ರಾಚ್ಯ ದಾಖಲೆಗಳು, ದೇವಸ್ಥಾನ ಮತ್ತು ಮಠದ ದಾಖಲೆಗಳು, ಸರ್ಕಾರಿ ಆಜ್ಞೆಗಳು, ರೇಕಾರ್ಡಿಂಗ್ ಮೂಲಕ ಹಾಗೂ ಭಾವಚಿತ್ರಗಳ ಮೂಲಕವೂ ಸಹ ಮಾಹಿತಿಯನ್ನು ಸಂಗ್ರಹಿಸಲಾಗುವುದು.

ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ದೃಷ್ಟಿಕೋನ

ಇಂತಹ ಸಂದರ್ಭದಲ್ಲಿ ಇದು ಪ್ರಸ್ತುತಪಡಿಸುವ ಮಹಿಳಾ ವಿಚಾರಗಳು ಈಕೆಯ ಪರವಾಗಿವೆಯೇ ಅಥವಾ ವಿರೋಧವಾಗಿವೆಯೇ ಇಲ್ಲವೇ ಲಿಂಗ ತಾರತಮ್ಯ ಮನೋಭಾವವನ್ನೇ ಮುಂದುವರಿಸುತ್ತವೆಯೇ ಎಂಬುದನ್ನು ತಿಳಿಯಲು ಸ್ತ್ರೀವಾದಿ ದೃಷ್ಟಿ ಕೋನವನ್ನು ಪ್ರಸ್ತುತ ಅಧ್ಯಯನಕ್ಕೆ ತಾತ್ವಿಕತೆಯಾಗಿ ಇಟ್ಟುಕೊಳ್ಳಲಾಯಿತು. ಹಾಗೆಯೇ ಮಹಿಳಾ ವಿಚಾರ, ಪ್ರಸ್ತುಪಡಿಸಲು ಇರುವ ಪ್ರಾತಿನಿಧ್ಯ ಎಷ್ಟು ಎಂಬುದನ್ನು ಸ್ಪಷ್ಟಪಡಿಸಲು ಪರಿಮಾಣಾತ್ಮಕ ವಿಧಾನವನ್ನು ವರದಿಯಾಗಿರುವ ಮಹಿಳಾ ವಿಷಯಗಳು ವಸ್ತುನಿಷ್ಠೆ ವಿಶ್ಲೇಷಣೆಗಾಗಿ, ಗುಣಾತ್ಮಕ ವಿಧಾನಗಳೆರಡನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಯಿತು.

ಆಚರಣೆ ಮತ್ತು ನಂಬಿಕೆಗಳ ಮೊತ್ತವೇ ಸಂಪ್ರದಾಯ. ಹೆಣ್ಣಿನ ಬಗ್ಗೆ ಇರುವ ನಂಬಿಕೆಗಳು ಆಕೆಯನ್ನು ಆಚರಣೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತವೆ. ಆಕೆ ಪಡೆಯಬೇಕಾದ ಸ್ಥಾನಕ್ಕಾಗಿ, ರಕ್ಷಿಸಿಕೊಳ್ಳುವ ಕಾರಣಕ್ಕಾಗಿ ಆಕೆ ನಿರಂತರವಾಗಿ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗಬೇಕೆಂಬ ಸಮಾಜದ ಒತ್ತಡ, ಅವಳ ಜೀವನವೇ ಅಭದ್ರತೆಯಿಂದ ಕೂಡಿದೆ ಎಂದು ಹೇಳಬಹುದು.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪ್ರತಿ ಸಂದರ್ಭದಲ್ಲೂ ಹೆಣ್ಣಿನ ಸ್ಥಾನ ನಿರ್ಣಯವಾಗುವುದು ಪುರುಷನ ಮೂಲಕವೇ ಆಗಿರುತ್ತದೆ. ಈ ಕಾರಣಕ್ಕಾಗಿ ಪುರುಷನ ಸಂರಕ್ಷಣೆಯು ಹೆಣ್ಣಿನ ಜವಾಬ್ದಾರಿಯಾಗಿ, ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಉಳಿದುಬಂದಿರುವ ನಂಬಿಕೆಯಾಗಿದೆ. ಇವೇ ನಂಬಿಕೆಯೇ ಹಲವಾರು

ವ್ರತ, ನಿಯಮ, ದೇವದಾಸಿ ಸಂಪ್ರದಾಯ ಹಬ್ಬಗಳ ಹಿಂದೆ ಕೆಲಸ ಮಾಡುವುದನ್ನು ನಾನು ಈ ಅಧ್ಯಯನ ಮೂಲಕ ತಿಳಿಸಬಯಸುತ್ತೇನೆ.

ಪ್ರಶ್ನಾವಳಿ ಮತ್ತು ಸಂದರ್ಶನಗಳ ವಿಧಾನಗಳ ಅಳವಡಿಕೆ

ಸಂಶೋಧನೆಗೆ ಬೇಕಾಗುವ ಮಾಹಿತಿ ಸಂಗ್ರಹಣೆಯ ಒಂದು ಪ್ರಮುಖ ಸಾಧನವಾಗಿರುವ ಪ್ರಶ್ನಾವಳಿಯು ಬಿಸರಳ್ಳಿ ದೇವದಾಸಿ ಪದ್ಧತಿ ಎನ್ನುವ ವಿಷಯಕ್ಕೆ ಸಂಬಂಧಿಸಿದ ರಚಿತ ಮತ್ತು ಅರಚಿತ ಪ್ರಶ್ನೆಗಳನ್ನು ಈ ಅಧ್ಯಯನಕ್ಕೆ ಸಿದ್ಧಪಡಿಸಲಾಯಿತು. ಮಹಿಳೆಯರಿಗೆ ವೈಯಕ್ತಿಕವಾಗಿ ಮತ್ತು ತಾವಾಗಿಯೇ ಈ ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಮನವೊಲಿಸಿ ಮಾಹಿತಿಯನ್ನು ನನ್ನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಆ ಪ್ರಶ್ನಾವಳಿಗಳ ಸಹಾಯದಿಂದ ಹಾಗೂ ಸಾಂದರ್ಭಿಕ ಅಗತ್ಯಕ್ಕೆ ತಕ್ಕಂತೆ ಅಲ್ಲಿಂದಲೇ ಕೆಲ ಮಹತ್ವದ ಅರಚಿತ ಪ್ರಶ್ನಾವಳಿಗಳನ್ನು ಕೇಳಿ ಮಾಹಿತಿ ಸಂಗ್ರಹಿಸಲಾಯಿತು.

ಸಂದರ್ಶನ ವಿಧಾನದಲ್ಲಿ ಸಂಶೋಧನಾ ವಿಷಯದ ಬಗ್ಗೆ ಮಾಹಿತಿಯನ್ನು ಪಡೆಯಲು ದೇವದಾಸಿಯರನ್ನು ಮುಖಾಮುಖಿಯಾಗಿ ಭೇಟಿ ಮಾಡಲಾಯಿತು ಮಹಿಳಾ ಸಲಹಾ ಕೇಂದ್ರ ಮತ್ತು ಜಿಲ್ಲಾ ದೇವದಾಸಿಯರ ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿ ದೇವದಾಸಿಯರಿಗೆ ಸಂಬಂಧಪಟ್ಟ ತರಬೇತಿಗಳು, ಸಾಲಸೌಲಭ್ಯಗಳು, ಆಶ್ರಯ ಮನೆಗಳು ಮುಂತಾದ ಸೌಲಭ್ಯಗಳು ಹಾಗೂ ಪರಿಹಾರದ ಬಗ್ಗೆ ಪ್ರಶ್ನೆಗಳನ್ನು ಕೇಳಿ ಬಹಳಷ್ಟು ಮಾಹಿತಿಯನ್ನು ಪಡೆಯಲಾಯಿತು. ಈ ರೀತಿಯಾಗಿ ಆಯ್ಕೆ ಮಾಡಿಕೊಂಡ ಮಹಿಳೆಯರು ಯಾರಿಂದ ಈ ಸಂಪ್ರದಾಯಕ್ಕೆ ಒಳಗಾಗಿದ್ದಾರೆ. ಅವರಿಂದ ಆ ಮಹಿಳೆಯರಿಗೆ ಮಹಿಳಾ ಸಲಹಾ ಕೇಂದ್ರ ಮತ್ತು ಸರಕಾರ ಕಾನೂನು ಯಾವ ರೀತಿ ರಕ್ಷಣೆ ನೀಡುತ್ತದೆ ಎಂಬ ವಿಷಯವನ್ನು ಸಂದರ್ಶನ ನಡೆಸುವುದರ ಮೂಲಕ ಅಧ್ಯಯನ ಮಾಡಲಾಗುವುದು.

ಅಧ್ಯಾಯ ೨

ದೇವದಾಸಿ ಪದ್ಧತಿಯ ಸ್ತ್ರೀವಾದಿ ನಿರ್ವಚನ

೨.೧. ಪಾತರದವರು, ಬಸವಿಯರು, ಜೋಗತಿಯರು, ವೇಶ್ಯೆಯರು ಮತ್ತು ದೇವದಾಸಿಯರ - ತುಲನಾತ್ಮಕ ವಿವರಣೆ

೨.೨. ಲಿಂಗ ಪಕ್ಷಪಾತ ಮತ್ತು ಪಿತೃ ಪ್ರಧಾನತೆ

೨.೩. ಧಾರ್ಮಿಕ ವ್ಯವಸ್ಥೆ ಮತ್ತು ದೇವದಾಸಿಯರು

೨

ದೇವದಾಸಿ ಪದ್ಧತಿಯ ಸ್ತ್ರೀವಾದಿ ನಿರ್ವಚನ

ಸ್ತ್ರೀವಾದ ಮತ್ತು ಸ್ತ್ರೀಯರ ಹಕ್ಕುಗಳ ಪ್ರತಿಪಾದನೆ

ಪುರುಷನಿಗೆ ಸರಿಸಮಾನವಾದ ಹಕ್ಕುಗಳನ್ನು ಅವಕಾಶಗಳನ್ನು ಹಾಗೂ ಅಂತಸ್ತನ್ನು ಸ್ತ್ರೀಯರಿಗೂ ನೀಡಬೇಕಾದ್ದು ಮಾನವ ಧರ್ಮವಾಗಿದೆ. ಇಂತಹ ವಿಚಾರಗಳ ಪ್ರತಿಪಾದನೆಯನ್ನು 'ಸ್ತ್ರೀ-ವಾದ' ಎಂದು ಪರಿಗಣಿಸಬಹುದಾಗಿದೆ. ಹೆಣ್ಣು ಗಂಡುಗಳ ನಡುವಿನ ವ್ಯತ್ಯಾಸ ಜೈವಿಕವಾದ ನಿಸರ್ಗದತ್ತವಾದ ಲಕ್ಷಣಗಳನ್ನು ಮಾತ್ರ ಒಪ್ಪುವಂತಹದ್ದಾಗಿದ್ದು. ಸಾಮಾಜಿಕವಾದ ಶ್ರೇಷ್ಠ ಕನಿಷ್ಠ ಪಾತಾಳಿಯಲ್ಲಿ ಗ್ರಹಿಸುವಂತಹದ್ದನ್ನು ವಿರೋಧಿಸುವುದಾಗಿದೆ. ಇದನ್ನೇ ಸ್ತ್ರೀಪರ ಆಶಯಗಳಿಂದ ಸೈದ್ಧಾಂತಿಕವಾಗಿ ಮತ್ತು ರಾಜಕೀಯ, ಸಾಮಾಜಿಕ ಹೋರಾಟದ ಭಾಗವಾಗಿ ಮಂಡಿಸುವುದು ಸ್ತ್ರೀವಾದವಾಗಿದೆ. ಒಂದರ್ಥದಲ್ಲಿ ಸ್ತ್ರೀಯರ ಅಸ್ತಿತ್ವವನ್ನು ಮತ್ತೊಮ್ಮೆ ಮನವರಿಕೆ ಮಾಡುವ ಮತ್ತು ಅವರ ಶಕ್ತಿ ಸಾಮರ್ಥ್ಯಗಳನ್ನು ಪುನರ ಸ್ಥಾಪಿಸುವ ಹೋರಾಟವೇ ಸ್ತ್ರೀವಾದದ ಆಶಯವಾಗಿದೆ. ಸ್ತ್ರೀ-ಪುರುಷರ ನಡುವೆ ಲಿಂಗ ತಾರತಮ್ಯ ಮಾಡುವುದು ಸರಿಯಲ್ಲ. ಪುರುಷರ ಎದುರು ಸ್ತ್ರೀಯರನ್ನು ಹೀನ ಸ್ಥಿತಿಯಲ್ಲಿರಿಸುವುದು, ಅವರನ್ನು 'ಎರಡನೇ ಲಿಂಗ'ದವರೆಂಬಂತೆ ಕಾಣುವುದು ಸರಿಯಲ್ಲ. ಇಂತಹ ವಿಚಾರಗಳನ್ನು ಮುಂದಿರಿಸಿಕೊಂಡು ಸ್ತ್ರೀಯರ ನೇತೃತ್ವದಲ್ಲಿ ನಡೆಸಲಾಗುವ ಆಂದೋಲನವನ್ನು 'ಮಹಿಳಾ ಆಂದೋಲನ' ಎಂದು ಕರೆಯಬಹುದಾಗಿದೆ.

ಪುರುಷರಿಗೆ ಸರಿಸಮಾನವಾದ ಹಕ್ಕುಗಳನ್ನು ಮತ್ತು ಭವಿಷ್ಯದ ದಾರಿಯನ್ನು ಹಾಗೂ ಜೀವನದ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವ ನಿರ್ಧಾರದ ಸ್ವಾತಂತ್ರ್ಯವನ್ನು ಸ್ತ್ರೀಯರಿಗೂ ಕಲ್ಪಿಸಿಕೊಡಬೇಕೆಂಬ ಉದ್ದೇಶದೊಂದಿಗೆ ಆರಂಭವಾದ ಸಾಮಾಜಿಕ ಆಂದೋಲನ 'ಸ್ತ್ರೀಯರ ವಿಮೋಚನ ಆಂದೋಲನ'ವಾಗಿದೆ. ಸ್ತ್ರೀ-ಪುರುಷರಿಗೆ ಸರಿಸಮಾನವಾದ ಅವಕಾಶಗಳನ್ನು ನೀಡಬೇಕೆಂಬ ವಿಚಾರವನ್ನು ಪ್ರತಿಪಾದನೆ ಮಾಡುವ ಸಿದ್ಧಾಂತವನ್ನು 'ಸ್ತ್ರೀ-ವಾದ' ಎಂದೆನ್ನಬಹುದಾಗಿದೆ. ಪುರುಷರು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ಕುಟುಂಬದ ಸದಸ್ಯರಾಗಿರುವ ಸ್ತ್ರೀಯರ ಸಾಮಾಜಿಕ ವರ್ಗವನ್ನು ರೂಪಿಸುವ ಪ್ರಯತ್ನವನ್ನು ಮಾಡಲಾಗಿದೆಯೇ ಹೊರತು ಸ್ತ್ರೀಯರ ಅಸ್ತಿತ್ವವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ.

ಸ್ತ್ರೀ-ವಾದಿಗಳು ೧೯೬೦ರಲ್ಲಿ "The national organisation for women" ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಇದರ ಮೂಲಕವಾಗಿ ಪುರುಷರಿಗೆ ಸಮಾನವಾದ ಹಕ್ಕುಗಳನ್ನು,

ಸ್ತ್ರೀಯರಿಗೂ ನೀಡಬೇಕೆಂಬ ಹೋರಾಟವನ್ನು ಆರಂಭಿಸಿದರು. ಕಾನೂನಿನಾತ್ಮಕ ಕರಾರುಗಳು, ಆಸ್ತಿಯ ಹಕ್ಕುಗಳು, ಆರ್ಥಿಕ ಸಂಪಾದನೆಯ ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಈ ಸಂಘಟನೆಯ ಮೂಲಕ ಸ್ತ್ರೀಯರ ಬಗ್ಗೆ ಇದ್ದ ಅಸಮಾನತೆಯನ್ನು ಉಗ್ರವಾಗಿ ಪ್ರತಿಭಟಿಸಲಾಯಿತು. ಅಷ್ಟೇ ಅಲ್ಲದೇ ಲೈಂಗಿಕ ವಿಚಾರಗಳಲ್ಲಿ ಹಾಗೂ ಮಕ್ಕಳನ್ನು ಪ್ರಸವಿಸುವಂತಹ ಜೈವಿಕ ಸಂಗತಿಗಳಲ್ಲಿ, ಇಂತಹ ಅನೇಕ ಒತ್ತಡಗಳ ಬಗ್ಗೆ ಎಲ್ಲಾ ಸ್ತ್ರೀ-ವಾದಿಗಳು ಆಕ್ರೋಶವನ್ನು ವ್ಯಕ್ತಪಡಿಸಿದರು.

ಸ್ತ್ರೀ-ಸ್ವಾತಂತ್ರ್ಯವಾದದ ಅಲೆಯು ಇಂದು ಪಶ್ಚಿಮದ ಸಮಾಜದಲ್ಲಿ ಸಾಕಷ್ಟು ಬಲವಾಗಿದೆ. ಗಣನೀಯ ಸಂಖ್ಯೆಯ ಸ್ತ್ರೀಯರು ಲಿಂಗೀಯ ಮನೋಭಾವನೆಗಳ ಹಾಗೂ ಆಚರಣೆಗಳ ಬಗ್ಗೆ ತಿಳುವಳಿಕೆಯನ್ನು ಪಡೆದುಕೊಂಡಿದ್ದಾರೆ. ಸಾಮಾಜೀಕರಣದ ಮುಖಾಂತರ ಲಿಂಗ ಪಾತ್ರಗಳನ್ನು ತಮ್ಮ ಮೇಲೆ ಒತ್ತಡ ಹಾಗೂ ಪುರುಷರ ಪ್ರಾಬಲ್ಯವನ್ನು ಮೆರೆಯುವ ಪ್ರಯತ್ನಗಳನ್ನು ಅವರು ಬಲವಾಗಿ ಪ್ರತಿಭಟಿಸಿದ್ದಾರೆ. ಸ್ತ್ರೀಯರು ಪುರುಷಾಧೀನವಾಗಿದ್ದುಕೊಂಡು ಮೌನವಾಗಿ ತಮ್ಮ ಪಾಲಿನ ಕಾರ್ಯವನ್ನು ಮಾಡುವಂತಹ ಪರಂಪರಾಗತವಾದ ಪಾತ್ರದ ಬಗ್ಗೆ ಅವರಿಗೆ ಸಾಕಷ್ಟು ಅತೃಪ್ತಿ ಇದೆ. ಇಂತಹ ಅತೃಪ್ತ ಸ್ತ್ರೀಯರು ಇಂದು ಕೇವಲ ವ್ಯಕ್ತಿಗಳಾಗಿ ಉಳಿದಿಲ್ಲ. ಅವರು ಇಂದು ಒಂದು ಶಕ್ತಿಯಾಗಿ, ಹೊರ ಹೊಮ್ಮಿದ್ದಾರೆ. ಮಹಿಳೆಯರಲ್ಲಿ ಹೊಸ ಮಾದರಿಯ ಏಕತೆ, ಸಾಮರಸ್ಯ ಬೆಳೆಯಬೇಕಾದರೆ ಈ ಆಂದೋಲನ ನಿರ್ಮಿಸಿದ ಮಹಿಳಾ ಜಾಗೃತಿಯೇ ಕಾರಣವಾಗಿದೆ.[೧]

೨.೧. ಪಾತರದವರು, ಬಸವಿಯರು, ಜೋಗತಿಯರು, ವೇಶ್ಯೆಯರು ಮತ್ತು ದೇವದಾಸಿಯರ ತುಲನಾತ್ಮಕ ವಿವರಣೆ

ಮಾನವ ಜೀವನದ ಸಮಗ್ರ ಸಂಕೀರ್ಣತೆಯ ಕಲ್ಪನೆಯನ್ನು ಸಂಸ್ಕೃತಿಯು ಮೂಡಿಸುತ್ತದೆ. ಅವನ ಆಂತರಿಕ ಮತ್ತು ಬಾಹ್ಯ ಜೀವನವನ್ನು ಅಭಿವ್ಯಕ್ತಗೊಳಿಸುತ್ತದೆ. ಭಾರತದಾದ್ಯಂತ ನೆಲೆಸಿರುವ ಅನೇಕ ಜನಾಂಗಗಳು ತಮ್ಮದೇ ಆದ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಹೊಂದಿರುವುದು ಕಂಡುಬರುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳಿಗೆ ಮಹತ್ವದ ಸ್ಥಾನವಿದೆ. ಈ ದೇವಾಲಯಗಳು ಗ್ರಾಮದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮೊದಲಾದ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದವು. ದೇವರ ಪೂಜೆ-ಪುನಸ್ಕಾರಗಳಲ್ಲಿ ಅಂಗಭೋಗ ಮತ್ತು ರಂಗಭೋಗ ಎಂಬ ವಿಧಗಳಿದ್ದವು. ಅದರಲ್ಲೂ ದೇವತಾ ಮೂರ್ತಿಯ ಮುಂದೆ ಸುಂದರಿಯರಿಂದ ಪ್ರದರ್ಶಿಸಲ್ಪಡುವ ಪವಿತ್ರ ಶ್ರೇಷ್ಠವಾದ ನೃತ್ಯಕಲೆ ಮಾನ್ಯತೆ ಪಡೆಯಿತು. ಕಾಲಾನಂತರದಲ್ಲಿ ನೃತ್ಯವೇ ಕಾಯಕವಾದ ಸ್ತ್ರೀಯರನ್ನು ದೇವದಾಸಿಯರೆಂದು ಪ್ರತ್ಯೇಕವಾಗಿ ಗುರುತಿಸತೊಡಗಿದರು. ಈ ಕಲೆ ಮೊದಲಿಗೆ ಗೌರವ-ಮನ್ನಣೆ ಪಡೆದಿತ್ತು.

ದೇವದಾಸಿ ಎಂದರೆ ದೇವರಿಗೆ ದಾಸಿ ಅಥವಾ ದೇವರ ಸೇವಕಿ ಎಂದು ಅರ್ಥೈಸಬಹುದಾಗಿದೆ. ಅಲ್ಲದೇ ದೇವಾಲಯದ ನರ್ತಕಿ, ದೇವಾಲಯದ ಕನ್ಯೆ, ದೇವಾಲಯದ ನಾಯಕಸಾನಿ, ಪವಿತ್ರದಾಸಿ,

ಗುಡಿಸೆಟ್ಟಿ ಎಂಬ ಪದಗಳನ್ನು ಬಳಸಲಾಗಿದೆ. ಪ್ರಾಚೀನ ಕಾಲದಿಂದಲೂ ದೇವದಾಸಿ ಪದ್ಧತಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಯಾಗಿ ನಡೆದುಕೊಂಡು ಬಂದಿದೆ. ದೇವರಿಗೆ ಅರ್ಪಣೆಗೊಂಡವರನ್ನು ಜೋಗತಿ, ಬಸವಿ, ಸೂಳೆ, ದಾಸಿ, ಗುಡ್ತಿ, ಪಾತರದವರು, ದೇವದಾಸಿಯರು ಎಂಬ ನಾಮಾಂಕಿತದಿಂದ ಗುರುತಿಸುತ್ತಾರೆ.

೨.೧.೧. ದೇವದಾಸಿ ಪದದ ಅರ್ಥ

ದೇವರ ಸೇವೆಗಾಗಿ ನೇಮಕಗೊಂಡ ಎಲ್ಲ ಹೆಣ್ಣುಗಳನ್ನು ದೇವದಾಸಿಯರೆಂದು ಉಲ್ಲೇಖಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ದೇವದಾಸಿ, ಬಸವಿ, ಸೂಳೆ, ಪಾತರದವಳು, ಜೋಗತಿಯರು, ವೇಶ್ಯೆಯರು, ಮೊದಲಾದ ಈ ಪದಗಳ ಬಗ್ಗೆ ಅನೇಕ ನಿಘಂಟುಗಳಲ್ಲಿ ಸಾಹಿತ್ಯ, ಸಮಾಜಶಾಸ್ತ್ರದಲ್ಲಿ ಹಾಗೂ ಜನಸಾಮಾನ್ಯರಲ್ಲಿ ಭಿನ್ನಾಭಿಪ್ರಾಯಗಳಿವೆ. ನಿಘಂಟುಗಳಲ್ಲಿ ಇವುಗಳನ್ನು ಹೀಗೆ ಅರ್ಥೈಸಲಾಗಿದೆ.[೨]

೧. ಎಫ್.ಕಿಟೆಲ್-ಕನ್ನಡ ಇಂಗ್ಲಿಷಿನ ಡಿಕ್ಷನರಿಯಲ್ಲಿ 'ಪಾತ್ರ' = ಪಾತ್ರ ಮಾಡುವವಳು, ಪಾತ್ರದವಳು, An Actor, dramatis person

'ಪಾತರದವಳು' = ಪಾತ್ರದವಳು = A dancing girl, a horlet (ಗಣಿಕೆ, ವೇಶ್ಯೆ) ಎನ್ನಲಾಗಿದೆ.

'ದೇವದಾಸಿ' = A courtezen, especially one employed as a dancer, in a temple ದೇವಸ್ಥಾನದಲ್ಲಿ ನೃತ್ಯಗಾರ್ತಿ ಎಂದು ನೇಮಿಸಲ್ಪಟ್ಟವಳು.

ಬಸವಿ = ಬಸವಿ, A prostitute in temples or math.

ಸೂಳೆ = ಸೂಳ, ಶೂಲೆ, ಗಣ್ಯಾಂಗನೆ, A Horlot, A prositute - ರೂಪಾ ಜೀವೆ, ವೇಶ್ಯೆ, ಗಣಿಕೆ, ಫುದ್ರೆ ಕಾಮುಕಿ, ಭೋಗ, ಜೋಡೆ, ಅಜ್ಜುಕೆ, ವಾರಸ್ತ್ರೀ, ಚೂಳೆ, ಚೂಳ್ಯೆ.

೨. ಪ್ರೊ.ಜಿ.ವೆಂಕಟಸುಬ್ಬಯ್ಯನವರು ಕನ್ನಡ ನಿಘಂಟು,

ಪಾತರ = ಕುಣಿತ, ನರ್ತನ, ನಾಟ್ಯ

ಪಾತರದವರು = ನಾಟ್ಯ ಮಾಡುವ ವೃತ್ತಿಯವರು

ಪಾತರ ಗಿತ್ತಿ = ನಾ. ನರ್ತಕಿ, ನಟಿ; ಚಿಟ್ಟೆ; ವೇಶ್ಯೆ

ದೇವದಾಸಿ = ದೇವಸ್ಥಾನದ ನರ್ತಕಿ, ನರ್ತನ ಮಾಡುವ ವೃತ್ತಿಯ ವೇಶ್ಯೆ, ದೇವರ ಸೇವೆಗಾಗಿ ತನ್ನ ಜೀವಮಾನವನ್ನು ಮುಡುಪಾಗಿಟ್ಟು, ಸೇವೆ ಸಲ್ಲಿಸುವ ಅವಿವಾಹಿತ ಮಹಿಳೆ.

ಬಸವಿ = ದೇವರ ಹೆಸರಿನಲ್ಲಿ ದೇವಾಲಯದ ಸೇವೆಗಾಗಿ ಮೀಸಲು ಬಿಟ್ಟ ಹುಡುಗಿ. ಕೆಲವೆಡೆ ಇವರನ್ನು ದೇವದಾಸಿ, ಜೋಗತಿಯರೆಂದು ಕರೆಯುತ್ತಾರೆ.

[illegible]

ಸೂಳೆ = ಹಾದರಗಿತ್ತಿ, ವ್ಯಭಿಚಾರದಲ್ಲಿ ನಿರತಳಾದವಳು

೩. ಡಾ. ಶಿವರಾಮಕಾರಂತರವರ 'ಸಿರಿಗನ್ನಡ ಅರ್ಥಕೋಶ'

ಪಾತರ = ನಾಟಕದಲ್ಲಿ ನಾಯಕ ಮೊದಲಾದ ವೇಷದಾರಿ.

ಪಾತರಗಿತ್ತಿ = ಪತಂಗ, ಹಾದರಗಿತ್ತಿ, ಸೂಳೆ

ದೇವದಾಸಿ = ದೇವಾಲಯದ ಪರಿಚಾರಿಕೆ, ಸೂಳೆ, ವೇಶ್ಯೆ, ಪಾತರದವಳು, ಬಸವಿ

ಬಸವಿ = ವೇಶ್ಯೆ, ದೇವರಿಗೆ ಬಿಟ್ಟವಳು, ದೇವರ ಹೆಸರಿನಲ್ಲಿ ಕನ್ಯೆಯನ್ನು ವಿವಾಹ ಮಾಡದೇ ಇರುವುದು.

ಸೂಳೆ = ಹಾದರಗಿತ್ತಿ, ವೇಶ್ಯೆ ಪಾತರದವಳು.

ದೇವದಾಸಿ ಶಬ್ದ ಸಂಸ್ಕೃತ ಭಾಷೆಯಿಂದ ಬಂದದ್ದು ಸ್ಥಳೀಯವಾಗಿ ಇವರನ್ನು ಸೂಳೆ, ಬಸವಿ, ಸಾನಿ, ಕಸಬಿ, ಮುತ್ತು ಕಟ್ಟಿಕೊಂಡವಳು ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಈ ಪದಗಳು ವಿಭಿನ್ನ ಅರ್ಥಗಳನ್ನು ಸೂಚಿಸುವುದಲ್ಲದೇ ಅದರೊಳಗಿನ ವಿಭಿನ್ನತೆಯನ್ನು ಸೂಚಿಸುತ್ತದೆ.

೨.೧.೨. ದೇವದಾಸಿ ಪರಂಪರೆ

"ಭಾರತವು ಧಾರ್ಮಿಕವಾಗಿ ತನ್ನದೇ ಆದ ಪರಂಪರೆಯನ್ನು ಹೊಂದಿದೆ. ಇದರಲ್ಲಿ ದೇವಾಲಯಗಳಿಗೆ ವಿಶಿಷ್ಟವಾದ ಸ್ಥಾನವಿದೆ. ರಾಜಪ್ರಭುತ್ವದ ಕಾಲದಲ್ಲಿ ರಾಜ ಮಹಾರಾಜರು ದೇವಾಲಯಗಳ ಪೋಷಕರಾಗಿದ್ದರು. ರಾಜ ಪ್ರತ್ಯಕ್ಷ ದೇವರೆಂದು, ದೇವಾಲಯದ ದೇವರು 'ಪರೋಕ್ಷ ರಾಜ' ಎಂಬ ನಂಬಿಕೆ ಜನಪದರಲ್ಲಿತ್ತು. ಹೀಗಾಗಿ ರಾಜನ ವೈಭವಗಳೆಲ್ಲವೂ ದೇವಸ್ಥಾನದಲ್ಲಿಯೇ ನಡೆಯತೊಡಗಿದವು. ದೇವರ ಮುಂದೆ ಅನೇಕ ರೀತಿಯ ಸೇವೆಗಳನ್ನು ಮಾಡುತ್ತಿದ್ದರು. ಅವುಗಳಲ್ಲಿ ಪೂರ್ವ ಷೋಡಶೋಪಚಾರ ಮತ್ತು ಉತ್ತರ ಷೋಡಶೋಪಚಾರಗಳು ಪ್ರಮುಖವಾಗಿವೆ. ಉತ್ತರ ಷೋಡಶೋಪಚಾರ ಸೇವೆಯಲ್ಲಿ ನೃತ್ಯವು ಪ್ರಮುಖವಾಗಿದೆ."[೩] ಈ ಹಿನ್ನೆಲೆಯಲ್ಲಿ ಧಾರ್ಮಿಕ ಸಂಸ್ಕಾರವಾಗಿಯೇ ನೃತ್ಯ ಹುಟ್ಟಿತೆಂದು ಹೇಳಬಹುದಾಗಿದೆ.

ಮುನಿಗಳು ನಾಟ್ಯವನ್ನು ದೇವತೆಗಳಿಗೆ ಪ್ರಿಯವಾದ ಚಾಕ್ಷುಷಕ್ರತು ಎಂದು ರುದ್ರನು ಇದನ್ನು ಅರ್ಧನಾರೀಶ್ವರ ರೂಪದಲ್ಲಿ ತಾಂಡವ ಲಾಸ್ಯ ಕರೆದಿರುವುದು ಪುರಾಣಗಳಿಂದ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ನಾಟ್ಯವು ದೈವಿಕ ಹಿನ್ನೆಲೆಯನ್ನು ಹೊಂದಿದ್ದಲ್ಲದೇ, ಶ್ರೇಷ್ಠವಾದ ಕಲೆ ಎಂದು ಪ್ರಸಿದ್ಧಿ ಪಡೆದಿತ್ತು. ಇದರಿಂದಾಗಿ ನಾಟ್ಯವನ್ನು ಉನ್ನತ ಕುಲದವರು ಕಲಿಯುತ್ತಿದ್ದರು. ನೃತ್ಯಕಲಾ ಪರಿಣಿತೆಯರು ದೇವಾಲಯಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಇದರಿಂದ ದೇವರಸೇವೆ ಮತ್ತು ಪ್ರೇಕ್ಷಕರ ಮನೋರಂಜನೆ ನಡೆಯುತ್ತಿತ್ತು.

ಕಾಲಾನಂತರದಲ್ಲಿ ಈ ನೃತ್ಯವನ್ನೇ ಪ್ರಮುಖ ಕಾಯಕವನ್ನಾಗಿಸಿಕೊಂಡ ನೃತ್ಯಗಾರ್ತಿಯನ್ನು ದೇವದಾಸಿಯರೆಂದು ಗುರುತಿಸತೊಡಗಿದರು. ನಂತರ ದೇವದಾಸಿಯರು ಎಂಬ ಪ್ರತ್ಯೇಕ ಜಾತಿ ವ್ಯವಸ್ಥೆ ಸೃಷ್ಟಿಗೊಂಡಿತು. ದೇವದಾಸಿಯರದು ಗೌರವದಾಯಕ ಹಾಗೂ ದೈವ ಕೈಂಕರ್ಯ ವೃತ್ತಿ ಎಂದು ಸಾಮಾಜಿಕತೆ ಪಡೆದಿದ್ದು ವಿಶೇಷವಾಗಿ ಕಂಡುಬರುತ್ತದೆ.

''ದೇವರ ಪೂಜೆ-ಪುನಸ್ಕಾರಗಳಲ್ಲಿ ಅಂಗಭೋಗ ಮತ್ತು ರಂಗಭೋಗ ಎಂಬ ಎರಡು ವಿಧಗಳಿವೆ. ಅವುಗಳನ್ನು ವಿಗ್ರಹದ ದೇಹಕ್ಕೆ ಸಲ್ಲುವ ಭೋಗ ಎಂದರೆ ಸ್ನಾನ, ಗಂಧಲೇಪನ, ಧೂಪ, ಪುಷ್ಪ ಮುಂತಾದವುಗಳು ಅಂಗಭೋಗಗಳು, ಗರ್ಭಗುಡಿಯ ಮುಂದಿನ ರಂಗದ ಮೇಲೆ ಅಂದರೆ ದೇವತಾ ಮೂರ್ತಿಯ ಮುಂದೆ ಸುಂದರಿಯರಿಂದ ನಡೆಯುವ ಗೀತ ನೃತ್ಯಗಳೇ ರಂಗಭೋಗಗಳು ಎನ್ನಲಾಗಿದೆ. ದೇವದಾಸಿಯರು ರಂಗಭೋಗದ ಉಪಕರಣಗಳು'' ಎಂದು ಡಾ. ಚಿದಾನಂದಮೂರ್ತಿಯವರು ಗುರುತಿಸಿದ್ದಾರೆ.[೪] ಹೀಗೆ ರಂಗಭೋಗದ ಉಪಕರಣಗಳಾದ ದೇವದಾಸಿಯರು ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕಲೆಗಳಲ್ಲಿ ಪ್ರವೀಣರಾಗಿದ್ದರು.

ದೇವರೊಂದಿಗೆ ಮದುವೆಯಾಗುವುದರಿಂದ ಇವರು ಯಾವ ಗಂಡಸನ್ನು ಮದುವೆಯಾಗುವಂತಿಲ್ಲ. ದೇವಾಲಯದ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಇವರು ನಿರ್ದಿಷ್ಟಪಡಿಸಿದ ದೇವಾಲಯಕ್ಕೂ ಸೀಮಿತವಾಗಿರುತ್ತಿದ್ದರು. ಈ ದೇವದಾಸಿಯರಾಗಿದ್ದು, ದೇವಾಲಯದಲ್ಲಿ ಸೇವೆ ಸಲ್ಲಿಸುವ ಅಧಿಕಾರವನ್ನು ಪಾರಂಪರಿಕವಾಗಿ ಹೊಂದಿರುತ್ತಿದ್ದರು. ಮದುವೆಯಾಗದೇ ತಮ್ಮನ್ನು ಇಟ್ಟು ಕೊಂಡವನ ಜೊತೆಗೆ ವ್ಯವಸ್ಥಿತವಾದ ಬದುಕನ್ನು ರೂಪಿಸಿಕೊಂಡವರಾಗಿದ್ದರು.

''ದೇವಾಲಯದ ನೃತ್ಯ-ಸಂಗೀತ ಮೊದಲಾದ ಸೇವೆ ಮಾಡುವ ಇವರನ್ನು ನಟುವರು, ಪಾತರದವರು, ಬೋಗಮ್‌ಗಳು, ಕಲಾವಂತರು, ಸಾನಿಯರು, ನಾಯಕ ಸಾನಿಯರು, ನಾಯಕ ಸಾನಿ ಎಂದು ಗುರುತಿಸುವರು.''[೫] ಇವರನ್ನು ವಿಭಿನ್ನ ಹೆಸರುಗಳಿಂದ ಗುರುತಿಸಿದರೂ ಇವರು ವೃತ್ತಿಯಲ್ಲಿ ಒಂದೇ ರೂಪವನ್ನು ಹೊಂದಿದ್ದಾರೆ. ದೇವರ ಸೇವೆಗಾಗಿ ನೇಮಕಗೊಂಡ ದೇವದಾಸಿಯರು ಒಂದುವರ್ಗಕ್ಕೆ ಸೀಮಿತವಾದರೆ, ದೇವರಿಗೆ ಅರ್ಪಣೆಗೊಂಡ ದೇವದಾಸಿಯರದು ಇನ್ನೊಂದು ವರ್ಗವಾಗಿದೆ. ದೇವರಿಗೆ ಅರ್ಪಣೆಗೊಂಡವರನ್ನು ಜೋಗತಿ, ಬಸವಿ, ಸೂಳೆ, ದಾಸಿ, ಗುಡ್ಡಿ ಎಂಬ ನಾಮಾಂಕಿತದಿಂದ ಗುರುತಿಸುತ್ತಾರೆ. ಇವರಿಗೆ ದೇವರು ಗಂಡನಾಗಿರುತ್ತಾನೆ. ಭಾರತದೆಲ್ಲೆಡೇ ಕಂಡುಬಂದರೂ ಕರ್ನಾಟಕದಲ್ಲಿ ಇವರನ್ನು ದುರ್ಗಮ್ಮ ಮಂಟೇಸ್ವಾಮಿ, ನಂಜುಂಡೇಶ್ವರ, ಮರಳಯ್ಯ ಸ್ವಾಮಿ, ಎಲ್ಲಮ್ಮ ಮುಂತಾದ ದೇವಾಲಯಗಳಲ್ಲಿ ಕಾಣಬಹುದಾಗಿದೆ.

೨.೧.೩. ಚಾರಿತ್ರಿಕ ಹಿನ್ನೆಲೆ

ಪ್ರಾಚೀನ ನಾಗರಿಕತೆಗಳಲ್ಲಿ ದೇವದಾಸಿ ಪದ್ಧತಿಯು ಪ್ರಚಲಿತದಲ್ಲಿತ್ತು. ಪ್ರಾಚೀನ ಕಾಲದಲ್ಲಿಯೇ ಇದು ಸೃಷ್ಟಿಗೊಂಡಿತೆಂಬುದಕ್ಕೆ ಅನೇಕ ಆಧಾರಗಳಿವೆ. ಧಾರ್ಮಿಕ ಶ್ರದ್ಧೆ, ಮತ್ತು ಮಾತೃದೇವತಾ

ಆರಾಧನೆಯ ಹಿನ್ನೆಲೆಯಲ್ಲಿ ಮಾತೃಪ್ರಧಾನ ವ್ಯವಸ್ಥೆಯ ಕಾಲದಲ್ಲಿ ಸೃಷ್ಟಿಯಾಗಿರುವ ಸಾಧ್ಯತೆ ಇದೆ. ಫಲವತ್ತತೆಯನ್ನು ನೀಡುವ ಪ್ರಕೃತಿಯನ್ನು ಪೂಜಿಸ ತೊಡಗಿದನಲ್ಲದೇ, ಜನ್ಮ ನೀಡುವ ಹೆಣ್ಣನ್ನು ಶಕ್ತಿಯ ಸ್ವರೂಪ ಎಂದು ಭಾವಿಸಲಾರಂಭಿಸಿದನು. ಭೂಮಿ ಎಲ್ಲ ಸೃಷ್ಟಿ ಕ್ರಿಯೆಗೆ ಮೂಲವಾದಂತೆ, ಹೆಣ್ಣು ಮನುಷ್ಯ ಸಮಾಜದ ಸೃಷ್ಟಿಗೆ ಮೂಲ ಎಂದು ಅರಿತನು.

ಪ್ರಾಚೀನ ಕಾಲದಲ್ಲಿ ಮದುವೆಯ ಆಚರಣೆಯಲ್ಲಿ ಸ್ತ್ರೀಯನ್ನು ಬೀಜ ಬಿತ್ತುವ ಹೊಲವೆಂದು ಕರೆಯಲಾಗುತ್ತಿತ್ತು. ಅರ್ಚಕನು ಮಧುಮಗನಿಗೆ 'ಅವಳ ಮೇಲೆ ನಿನ್ನ ಬೀಜವನ್ನು ಬಿತ್ತು' ಎಂದು ಹಾರೈಸುತ್ತಿದ್ದನು."[೬]

"ನಿಮ್ಮ ಹೆಂಗಸರು ನಿಮ್ಮ ಹೊಲ" ಎಂದು ಖುರಾನ್‌ನಲ್ಲಿ ಹೇಳಲಾಗಿದೆ. ತಾಯಿಯ ಗರ್ಭ ಒಂದು ವಸ್ತುವಿನ ಎರಡು ರೂಪಗಳಾಗಿವೆ. ಬೆತ್ತಲೆಯಾಗಿ ನಾನು ಅದಕ್ಕೆ ಹಿಂದಿರುಗುವೆ" ಹೀಗೆ ಭೂಮಿಯೊಂದಿಗೆ ಹೋಲಿಸಲಾದ[೭] ಹೆಣ್ಣು ಮಾತೃದೇವತೆಯಾಗಿ ಆರಾಧಿಸಲ್ಪಟ್ಟಳು. ಈ ಮಾತೃ ದೇವತೆ ಆರಾಧನೆ ಹಾಗೂ ಫಲವತ್ತತೆಯ ಹಿನ್ನೆಲೆಯಲ್ಲಿಯೇ, ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ದೇವರಿಗೆ ಅರ್ಪಿಸುವ (ದೇವದಾಸಿ) ಪದ್ಧತಿ ಬೆಳೆಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

"ಪ್ರಾಚೀನ ಕಾಲದಲ್ಲಿ ಬ್ಯಾಬಿಲೋಸಿಯಾ, ಸೈಪ್ರಸ್, ಗ್ರೀಸ್, ಮೆಸಪೊಟೋಮಿಯ, ಈಜಿಪ್ಟ, ಸಿರಿಯಾ, ಫೀನೀಷಿಯ, ಅರೇಬಿಯಾ ಮುಂತಾದ ಮಧ್ಯ ಪ್ರಾಚೀನ ದೇಶಗಳಲ್ಲಿ ಹಾಗೇ ಆಗ್ನೇಯ ಏಷ್ಯಾದಲ್ಲಿ ಮಾತೃದೇವತಾ ಕಲ್ಪನೆ ಎಂದು ತಿಳಿಯುತ್ತದೆ. ಮೆಹೊಂಜೋದಾರೋ ಸಂಸ್ಕೃತಿಯಲ್ಲಿ, ಮಾತೃಪ್ರಧಾನ ದೇವತೆಯ ದೇವಾಲಯಗಳಲ್ಲಿ ಪುರುಷರು ಮತ್ತು ಸ್ತ್ರೀಯರು ಗುಲಾಮರಾಗಿರುತ್ತಿದ್ದರು. ಅವರಲ್ಲಿ ಕೆಲವರು ದೇವದಾಸಿಯರಿದ್ದರು. ಸ್ತ್ರೀಯರು ಗೃಹಿಣಿರಾಗುವ ಮೊದಲು ಕೆಲವು ದಿನಗಳ ನಂತರ ಮಾತೃದೇವತಾ ಮಂದಿರದಲ್ಲಿ ದೇವದಾಸಿಯರಾಗಿರುವುದು. ಅಂದಿನ ಸಮಾಜದಲ್ಲಿ ಗೌರವದ ಸಂಕೇತವಾಗಿತ್ತೆಂದು ತಿಳಿಯುತ್ತದೆ. ದೇವದಾಸಿಯರಾಗುವುದು ಒಂದು ಪವಿತ್ರ ಶ್ರೇಷ್ಠ ಕೆಲಸವೆಂದು ಜನರು ನಂಬಿದ್ದರು."[೮]

"ಸಿಂಧೂ ನಾಗರಿಕತೆಯ ಹರಪ್ಪ ಮತ್ತು ಮೆಹಂಜೋದಾರೋ ಹಲವೆಡೆ ಅನೇಕ ಪ್ರತಿಮೆಗಳನ್ನು ಮತ್ತು ಚಿತ್ರಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಕ್ವೆಟ್ಟಾದ ಉತ್ತರದ ಭಾಗಗಳಲ್ಲಿ ಲಿಂಗ ಮುದ್ರೆಗಳು ದೊರೆತಿವೆ. 'ಟೆರ್ರಾಕೊಟ'ದಿಂದ ಮಾಡಿದ ಅನೇಕ ಮಹಿಳೆಯರ ಶಿಲ್ಪಗಳು ದೊರೆತಿವೆ. ಅವು ನೀಳ ಕೇಶ ವಿನ್ಯಾಸದೊಂದಿಗೆ ಬೆತ್ತಲೆ ಅಥವಾ ಅರೆಬೆತ್ತಲೆಯಾಗಿವೆ.

ವೇದಗಳ ಕಾಲದಲ್ಲಿ ದೇವಾಲಯದ ನರ್ತಕಿಯರ ಉಲ್ಲೇಖವಿಲ್ಲ, ಆದರೆ ವೇಶ್ಯಾಗಾರಿಕೆಯ ಬಗ್ಗೆ ಉಲ್ಲೇಖಗಳಿವೆ. ಭರತ ಖಂಡದಲ್ಲಿ ಸ್ತ್ರೀಯರನ್ನು ಸ್ವೀಯ, ಪರಕೀಯ, ಸಾಧಾರಣ ಎಂದು ವಿಭಾಗಿಸಿ, ಸಾಧಾರಣ ಸ್ತ್ರೀಯರೆಲ್ಲ ಗಣಿಕಾ, ವೇಶ್ಯಾ, ಕುಟ್ಟನೀ, ಕುಂಬದಾಸಿ ಮೊದಲಾದ ಭೇದಗಳಿದ್ದವು. ಸಾಧಾರಣಾ, ಚಾರಾ, ನಟೀ ಎಂಬ ಪದಗಳು ಋಗ್ವೇದದಲ್ಲಿಯೇ ಕಂಡುಬರುತ್ತದೆ.[೯]

[illegible]

[illegible]

[illegible]

[illegible]

'ಮೌರ್ಯರ ಕಾಲದಲ್ಲಿದ್ದ ಚಾಣಕ್ಯನಿಂದ ರಚಿಸಲ್ಪಟ್ಟ ಅರ್ಥಶಾಸ್ತ್ರ ಎಂಬ ಕೃತಿಯಲ್ಲಿ ಗಣಿಕೆಯರ ಉಲ್ಲೇಖವಿದೆ. ಪಟ್ಟಣಗಳಲ್ಲಿರುವ ವೇಶ್ಯೆಯರನ್ನು ಗಣಿಕೆಯರೆಂದು ಕರೆಯುತ್ತಿದ್ದರು. ಗಣಿಕೆಯರು ವಿಶೇಷ ಸಂಖ್ಯೆಯಲ್ಲಿ ಪಟ್ಟಣದ ಮುಖ್ಯಭಾಗಗಳಲ್ಲಿಯೇ ಅರಮನೆ, ಅಂತಃಪುರಗಳಲ್ಲಿಯೂ ವಾಸಿಸುತ್ತಿದ್ದರು. ನರ್ತಕಿಯರು ಎಂಟನೆಯ ವರ್ಷದಿಂದಲೇ ನೃತ್ಯಕಲಾಭ್ಯಾಸ ಮಾಡಿ, ರಾಜನ ಮುಂದೆ ಅಭಿನಯಿಸುತ್ತಿದ್ದರೆಂದು ತಿಳಿಯುತ್ತದೆ.

ವಾತ್ಸಾಯನನ ಕಾಮಸೂತ್ರ ವಾರಂಗನೆಯರನ್ನು ಕುರಿತು ತಿಳಿಸುತ್ತದೆ. ನೃತ್ಯ ಮಾಡುವವರನ್ನು, ಹಾಡುವುದನ್ನು ಮತ್ತು ಸಂಗೀತ ವಾದ್ಯಗಳನ್ನು ನುಡಿಸುವುದು ಪ್ರಮುಖವಾಗಿದ್ದವು. ವೇಶ್ಯೆಯರಲ್ಲಿ ಪ್ರಮುಖ ಪಾತ್ರ ಗಣಿಕೆಯರದಾಗಿತ್ತು. ಗಣಿಕಾ ಸ್ತ್ರೀಯು, ರಾಜರಿಂದ, ಗಣ್ಯವ್ಯಕ್ತಿಗಳಿಂದ, ಹೊಗಳಿಕೆಗೆ ಪಾತ್ರವಾಗಿದ್ದಳು. ಶೂದ್ರಕನ 'ಮೃಚ್ಛಕಟಿಕ'ವು (ನಾಟಕ) ಒಬ್ಬ ಬ್ರಾಹ್ಮಣ ಮತ್ತು ಶ್ರೀಮಂತ ಉದಾರಿಯಾದ ವೇಶ್ಯೆ ವಸಂತ ಸೇನೆ ಇವರಿಬ್ಬರ ಸಮಾಗಮ ಮತ್ತು ಮದುವೆಯ ಪ್ರಸ್ತಾಪ ಹೊಂದಿದೆ. ಕಾಳಿದಾಸನ ಮೇಘದೂತದಲ್ಲಿ ದೇವಾಲಯದ ನರ್ತಕಿಯರ ಬಗ್ಗೆ ಉಲ್ಲೇಖವಿದೆ. ಸಾಯಂಕಾಲದ ಪೂಜಾ ಸಮಯದಲ್ಲಿ ಉಜ್ಜಯಿನಿಯ ಮಹಾಕಾಳ ದೇವಾಲಯದಲ್ಲಿ ನರ್ತಕಿಯರು ಹಾಜರಿರಬೇಕೆಂದು ನಿರೀಕ್ಷಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ."[೧೦]

ದೇವದಾಸಿ ಸಂಪ್ರದಾಯವು ೭ನೇ ಶತಮಾನದಲ್ಲಿ ಅಧಿಕವಾಗಿ ಪ್ರಚಾರಗೊಂಡಿರುವ ಸಾಧ್ಯತೆ ಇದೆ. ಹೂ-ಯೆನ್ -ತ್ಸಾಂಗ ಒಬ್ಬ ಚೀನಿ ಯಾತ್ರಿಕನಾಗಿದ್ದು, ಉತ್ತರ ಭಾರತದಲ್ಲಿ ಹರ್ಷವರ್ಧನ ಹಾಗೂ ದಕ್ಷಿಣ ಭಾರತದಲ್ಲಿ ಇಮ್ಮಡಿ ಪುಲಿಕೇಶಿಯ ಆಸ್ಥಾನಕ್ಕೂ ಬಂದಿದ್ದನು. ಅವನು ಮುಲ್ತಾನ ಎಂಬಲ್ಲಿಯ ಸೂರ್ಯ ದೇವಾಲಯದಲ್ಲಿ ಗಾಯಕಿಯರನ್ನು ಕಂಡು ಬಗ್ಗೆ ಉಲ್ಲೇಖಿಸಿದ್ದಾರೆ. ಕ್ರಿ.ಶ.೭ನೇ ಶತಮಾನದಲ್ಲಿ ಕಾಶ್ಮೀರದಲ್ಲಿ ಈ ಸಂಪ್ರದಾಯ ಪ್ರಬಲವಾಗಿತ್ತೆಂದು ರಾಜ ತರಂಗಿಣಿಯಿಂದ ತಿಳಿದು ಬರುತ್ತದೆ.[೧೧] "ಗುಜರಾತಿನ ಬಗ್ಗೆ ಬಹಳ ಪ್ರಸಿದ್ಧವಾದ ಸೋಮನಾಥ ದೇವಾಲಯದಲ್ಲಿ ಐನೂರು ನರ್ತಕಿಯರಿದ್ದಂತೆ ತಿಳಿದುಬರುತ್ತದೆ."[೧೨]

"ಅರಸರು ನಿರ್ಮಿಸಿದ ದೇವಾಲಯಗಳಲ್ಲಿ ತಮ್ಮ ವೈಭವದ ಸಂಕೇತವಾಗಿ ದೇವದಾಸಿಯರನ್ನು ನಿಯಮಿಸುತ್ತಿದ್ದರು. ದಕ್ಷಿಣ ಭಾರತದ ಚೋಳ ಸಾಮ್ರಾಟನು ಆಡಳಿತಕ್ಕೆ ಸಂಬಂಧಿಸಿದ ಒಂದು ತಮಿಳು ಶಾಸನದಲ್ಲಿ ದೇವಾಲಯಕ್ಕೆ ಹುಡುಗಿಯನ್ನು ಅರ್ಪಿಸುವುದರ ಬಗ್ಗೆ ಉಲ್ಲೇಖವಿದೆ. ಚೋಳ ಸಾಮ್ರಾಟನು ಶೈವ ಮತಾವಲಂಬಿಯಾಗಿದ್ದು. ಕ್ರಿ.ಶ.೯೮೫ರಲ್ಲಿ ಸಿಂಹಾಸನ ಏರಿದನು. ಕ್ರಿ.ಶ.೧೦೪೦ರಲ್ಲಿ ತಂಜಾವೂರಿನ ಪ್ರಧಾನ ದೇವಾಲಯಕ್ಕೆ ನಾಲ್ಕು ನೂರು ತಾಳಿಚೇರಿ ವಂಡುಗಳ ಅಥವಾ ದೇವಾಲಯದ ಮಹಿಳೆಯರು ಸಂಬಂಧ ಹೊಂದಿದ್ದರು ಎಂದು ಶಾಸನ ತಿಳಿಸುತ್ತದೆ."[೧೩]

[illegible]

[illegible]

[illegible]

[illegible]

“ನರ್ತಕಿಯರು ದೇವಾಲಯದ ಸುತ್ತ ಇರುವ ಬೀದಿಗಳಲ್ಲಿ ವಾಸಿಸುತ್ತಿದ್ದರು. ತಮ್ಮ ಸೇವೆಯ ಬದಲಿಗೆ ೨೬, ೭೫೫ ಚ.ಮೀ. ಭೂಮಿಯಲ್ಲಿ ಉತ್ಪತ್ತಿಯಾಗುತ್ತಿದ್ದ ೧೦೦. ಭತ್ತದ ಒಂದು ಅಥವಾ ಎರಡು ಪಟ್ಟನ್ನು ಪಡೆಯುತ್ತಿದ್ದರು. ಇಡೀ ಚೋಳ ದೇಶವು ದೇವದಾಸಿಯರನ್ನೊಳಗೊಂಡ ದೇವಾಲಯಗಳಿಂದ ತುಂಬಿತ್ತೆಂದು ತಿಳಿಯಬರುತ್ತದೆ. ಶೈವ ಮತ್ತು ವೈಷ್ಣವ ದೇವಾಲಯಗಳೆರಡೇ ದೇವದಾಸಿಯರನ್ನು ಹೊಂದಿರುವುದು ಕಂಡುಬರುತ್ತದೆ.

ದಕ್ಷಿಣ ಭಾರತದ ಕರ್ನಾಟಕದಲ್ಲಿಯೂ ಈ ಪದ್ಧತಿ ಪ್ರಚಲಿತದಲ್ಲಿತ್ತೆಂದು ತಿಳಿಯುತ್ತದೆ. ಕ್ರಿ.ಶ.೭೭೮-೭೯ರ ಪಟ್ಟದಕಲ್ಲಿನ ವಿರುಪಾಕ್ಷ ದೇವಾಲಯಕ್ಕೆ ಶಾಸನವು ದೇಗುಲದ ಸೂಳೆಯೊಬ್ಬಳು ದಾನಕೊಟ್ಟ ಬಗ್ಗೆ ಉಲ್ಲೇಖವಿರುತ್ತದೆ. ಇದರಿಂದ ದೇವದಾಸಿಯರು ಸಹ ದಾನ ನೀಡುತ್ತಿದ್ದ ಬಗ್ಗೆ ತಿಳಿಯುತ್ತದೆ. ಕ್ರಿ.ಶ.೮೦೨ರ ತಾಮ್ರಪಟವೊಂದರಲ್ಲಿ ಜನಭವನದಲ್ಲಿ ನಡೆಯುವ ವೀರವಿಲಾಸಿನೀ ವಿರಚಿತ ನೃತ್ಯಗೀತವಾದ ಇತ್ಯಾದಿಗಳಾಗಿ ದಾನವನ್ನು ಕೊಡಲಾಗಿದೆ ಎಂದು ತಿಳಿಯುತ್ತದೆ. ಈ ಸಂಪ್ರದಾಯವು ಜೈನರ ದೇವಾಲಯಗಳನ್ನು ಪ್ರವೇಶಿಸಬೇಕಾದರೆ, ಕರ್ನಾಟಕದಲ್ಲಿ ಆ ಕಾಲಕ್ಕೆ ದೇವದಾಸಿ ಸಂಪ್ರದಾಯವು ಸ್ಥಿರವಾಗಿ ನೆಲೆಯೂರಿರಬೇಕೆಂದು ಡಾ.ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ.”[೧೪]

“ಕ್ರಿ.ಶ.೯೭೪ರಲ್ಲಿ ಶಾಸನದಲ್ಲಿ ದೇವರಿಗೆ ಇಬ್ಬರು. ಕನ್ಯೆಯರನ್ನು ೧೨ ಹಸುಗಳನ್ನು ದಾನವಾಗಿ ನೀಡಿದ ಬಗ್ಗೆ ಉಲ್ಲೇಖವಿದೆ. ಅದೇ ರೀತಿ ಕ್ರಿ.ಶ.೯೭೫ರ ಶಾಸನದಲ್ಲಿ ೫ ಜನ ಸೂಳೆಯರಿಗೆ ಹಾಗೂ ಒಂದು ಪಾತ್ರಕ್ಕೆ ದಾನಗಳನ್ನು ನೀಡಿದೆ. ಮತ್ತೊಂದು ಶಾಸನದಲ್ಲಿ ೧೨ ಜನ ಸೂಳೆಯರಿಗೆ ಮತ್ತು ಒಂದು ಪಾತ್ರಕ್ಕೆ ಪ್ರತ್ಯೇಕ ದಾನಗಳನ್ನು ನೀಡಿದೆ ಎಂದು ತಿಳಿಯುತ್ತದೆ. ಅದೇ ರೀತಿಯಾಗಿ ಕ್ರಿ.ಶ.೧೨೦೪ರ ಮಂಗಳೂರಿನ ಶಾಸನವು ‘ಕೊತಾಡುವ ಬಾಕನಂಗೆಯರು’ ಎಂದು ಉಲ್ಲೇಖಿಸಿದೆ ಅಂದರೆ ದೇವದಾಸಿಯರು ದಿನ ನಿತ್ಯವು ಕ್ರಮವಾಗಿ ನರ್ತಿಸಬೇಕೆಂದು ತಿಳಿಯುತ್ತದೆ. ಇದು ದೇವದಾಸಿಯರ ಕರ್ತವ್ಯ ಮತ್ತು ಮಹತ್ವದ ಬಗ್ಗೆ ಮಾಹಿತಿ ನೀಡುತ್ತದೆ.”[೧೫]

“ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಗಿದ್ದುದರಿಂದ ದೇವದಾಸಿ ವ್ಯವಸ್ಥೆಗೆ ಪ್ರೋತ್ಸಾಹ ನೀಡಲಾಯಿತೆಂದು ತಿಳಿದುಬರುತ್ತದೆ. ಈ ಅವಧಿಯಲ್ಲಿ ದೇವದಾಸಿಯರಿದ್ದರೆಂಬುದಕ್ಕೆ ಅನೇಕ ಆಧಾರಗಳಿವೆ. ವಿಜಯನಗರ ಸಾಮ್ರಾಜ್ಯದ ವಾರಾಂಗನೆಯರು ಅಥವಾ ವೇಶ್ಯೆಯರು ಯತಿಯ ಹೃದಯವನ್ನಾದರೂ ಝಲ್ಲೆನಿಸುವಷ್ಟು ಸೌಂದರ್ಯ ವತಿಯರು, ಸರಸಿಗಳು, ನರ್ತನ ಕುಶಲರು, ಸದಾ ಶುಚಿ ಭೂರ್ತರಾಗಿ, ಅಲಂಕೃತರಾಗಿ, ಸುಗಂಧ ದ್ರವ್ಯಗಳನ್ನು ಪೂರೈಸಿಕೊಂಡಿರುವವರು. ಅರಮನೆಗಳಂತಿರುವ ಮಹಲ್‌ಗಳಲ್ಲಿ ವಾಸಿಸುತ್ತಿದ್ದರು. ಅವು ರಾಜನ ಹೊರಗಿನ ಅಂತಃಪುರಗಳಾಗಿದ್ದವು. ವೇಶ್ಯೆಯರು ಹಲವುದೇಶ-ಭಾಷೆಗಳನ್ನು ಬಲ್ಲವರಾಗಿದ್ದು, ಕಾವ್ಯ ವಾಚನದಲ್ಲಿ ಸಮರ್ಥರಾಗಿದ್ದರು. ಮುತ್ತಿನ

ಆಭರಣಗಳು, ನಯವಾದ ವಸ್ತುಗಳು, ಕಸ್ತೂರಿಯ ಲೇಪನ, ಹೂವಿಗಿಂತ ಸುಗಂಧ ಭರಿತವಾದ ಧೂಪವು ಇವರಿಗೆ ಅತ್ಯಂತ ಪ್ರಿಯವಾಗಿದ್ದವು. ಹಾಡುಗಾರಿಕೆ, ವೀಣಾ ವಾದನದಲ್ಲಿ ಪ್ರವೀಣರಾಗಿದ್ದರು. ದೇವದಾಸಿಯರು ದೇವಾಲಯದ ಪೂಜಾ ಸಮಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು.

ದೇವರ ಜಾತ್ರೆ, ಉತ್ಸವಗಳಲ್ಲಿ ವೇಶ್ಯೆಯರ ಮೇಳವಿರುತ್ತಿತ್ತು. ಒಟ್ಟಾರೆ ವಿಜಯನಗರ ಕಾಲದಲ್ಲಿ ವೀರನಾರಿಯರಿಗೆ, ದೇವದಾಸಿಯರಿಗೆ, ಸಮಾಜದಲ್ಲಿ ಉನ್ನತ ಸ್ಥಾನವಿತ್ತೆಂದು ಜಿ.ಎಸ್ .ದೀಕ್ಷಿತ್ ರವರು ಅಭಿಪ್ರಾಯಪಟ್ಟಿದ್ದಾರೆ.''[೧೬] ''ವಿಜಯನಗರದ ಸಾಮ್ರಾಜ್ಯದಲ್ಲಿ ದೇವದಾಸಿಯರು ಗುಪ್ತರಾಜಕೀಯ ತಂತ್ರಗಳನ್ನು ಕಂಡುಹಿಡಿದು ಅಧಿಕಾರಿಗಳಿಗೆ ಸಹಾಯ ಮಾಡುತ್ತಿದ್ದರು.''[೧೭]

''ವಿಜಯನಗರಕ್ಕೆ ಭೇಟಿ ನೀಡಿದ 'ಪಾಯೇಸನು' ವಿಜಯನಗರ ದೇವಾಲಯಗಳಲ್ಲಿ ತಾನು ಕಂಡ ದೇವದಾಸಿಯರ ಬಗ್ಗೆ ಈ ರೀತಿ ತಿಳಿಸಿದ್ದಾನೆ. ದೇವರ ಪೂಜೆಯ ಸಮಯದಲ್ಲಿ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ. ಈ ದೇವದಾಸಿಯರು ಸೂಳೆಗಾರಿಕೆ ಮಾಡುತ್ತ ಊರಿನ ಅತ್ಯುತ್ತಮ ಬೀದಿಗಳಲ್ಲಿ ವಾಸ ಮಾಡುತ್ತರಲ್ಲದೇ, ಗೌರವ ಸ್ಥಾನ ಹೊಂದಿದ್ದರೆಂದು ಹೇಳಿದ್ದಾನೆ.'' ಇನ್ನೊಬ್ಬ ಪ್ರವಾಸಿಗನಾದ ಪಾಯೀಸನು 'ಈ ನರ್ತಕಿಯರು ಧರಿಸುವ ಆಭರಣಗಳ ಐಸಿರಿಯನ್ನು ವರ್ಣಿಸಲು ಸಾಧ್ಯವಿಲ್ಲ. ವಜ್ರ ವೈಡೂರ್ಯಗಳು, ಮುತ್ತು-ಮಾಣಿಕ್ಯಗಳ, ಕೊರಳ-ಪಟ್ಟಿ, ತೋಳ್ಬಂದಿ, ನಡುಪಟ್ಟಿ, ಕಾಲ್ಗಡಗ ಇವುಗಳನ್ನು ನೋಡಿ ಇವರಿಗೆ ಇಷ್ಟೊಂದು ಐಶ್ವರ್ಯ ಎಲ್ಲಿಂದ ಬಂದಿತೆಂದು ಆಶ್ಚರ್ಯವಾಗುತ್ತದೆ. ಇವರಲ್ಲಿ ಕೆಲವರಿಗೆ ಆಸ್ತಿ-ಪಾಸ್ತಿಗಳಿವೆ' ಎಂದಿದ್ದಾನೆ. ಇದರಿಂದ ಇವರು ಐಷಾರಾಮ ಜೀವನ ಹೊಂದಿದ್ದರೆಂದು ತಿಳಿಯುತ್ತದೆ.''[೧೮]

''ಕ್ರಿ.ಶ.೧೫೯೯ರ ಕುಣಿಗಲ್ಲಿನ ಶಾಸನವು ಎಲಹಂಕ ನಾಡಪ್ರಭು ಇಮ್ಮಡಿ ಹರಿಕೆಂಪಯ್ಯ ಗೌಡನ 'ಪಟ್ಟದ ನಾಟಕ ಶಾಲೆ'ಯ ಶ್ರೀರಂಗಮ್ಮ, ಶೃಂಗಾರ ಸಾಗರವೆಂಬ ಅಗ್ರಹಾರವನ್ನು ಸ್ಥಾಪಿಸಿದ್ದಳೆಂದು ತಿಳಿಸುತ್ತದೆ. ಇದರಿಂದ ನಾಟ್ಯಗಾರ್ತಿಯರು ಅಗ್ರಹಾರವನ್ನು ಸ್ಥಾಪಿಸುತ್ತಿದ್ದರೆಂದು ಸ್ಪಷ್ಟಪಡುತ್ತದೆ.

ಮೈಸೂರು ಒಡೆಯರ ಕಾಲದಲ್ಲಿ ದೇವದಾಸಿ ಪದ್ಧತಿಗೆ ಪುರಸ್ಕಾರವಿತ್ತು. ಅಂದು ವೇಶ್ಯಾವಾಟಿಕೆಗಳಲ್ಲಿ ಉಚ್ಚವರ್ಗದ ಗಣಿಕೆಯರು ಮತ್ತು ಸಾಮಾನ್ಯ ಸೂಳೆಯರಿರುತ್ತಿದ್ದರು. ಈ ಗಣಿಕೆಯರು ವಿದ್ಯಾ ಶಾರದೆಯರಾಗಿರುತ್ತಿದ್ದರು. ಸಂಗೀತಾಭ್ಯಾಸ, ನೃತ್ಯ-ಶಿಕ್ಷಣಗಳಿಗೆ ಹೆಚ್ಚಿನ ಗಮನ ನೀಡುತ್ತಿದ್ದರು. ಗಣಿಕೆಯರು ದೇಹ ಸೌಷ್ಠವಕ್ಕೂ, ಬುದ್ಧಿಶಕ್ತಿಗೂ, ಪ್ರಾತಿನಿಧ್ಯ ನೀಡಬೇಕಾಗಿತ್ತು. ನಗರವಾಸಿಗಳಾದ ಈ ಗಣಿಕೆಯರು ವಿಲಾಸೀ ಬೀದಿಗಳಲ್ಲಿ ವಾಸಿಸುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಈ ಕಲೆಗೆ ಅಧಿಕ ಪ್ರೋತ್ಸಾಹ ನೀಡಿದರು. ನಂತರ ಜಯ ಚಾಮರಾಜ ಒಡೆಯರು ಉತ್ತಮ ಪೋಷಣೆ ನೀಡಿದರು. ದೇವಾಲಯಗಳಿಗೆ ಸಂಬಂಧಿಸಿದ್ದ ದೇವದಾಸಿಯರು ಪ್ರಮುಖ ನಗರಗಳಲೆಲ್ಲ ಹರಡಿಕೊಂಡಿದ್ದರು.''[೧೯]

''ಮುಳಬಾಗಿಲು, ಟಿ.ನರಸೀಪುರ, ಚಿಂತಾಮಣಿ ಹತ್ತಿರದ ಹೂವಾಡಿ ಪ್ರಮುಖ ಸ್ಥಳಗಳಾಗಿದ್ದವು. ಅಲ್ಲಿ ದೇವದಾಸಿಯರೊಂದಿಗೆ ಸುಮಾರು ೨೦೦ ನರ್ತಕಿಯರು ಇದ್ದರು. ಅವರಲ್ಲಿ ಪ್ರಮುಖವಾಗಿ

ಪಣ ಶೇಖರಿ ವೆಂಕಟಸುಬ್ಬಭಟ್ಟ ಮತ್ತು ಭಾವನೆಗಳ ಸೂಕ್ಷ್ಮ ಅಭಿವ್ಯಕ್ತಿಗೆ, ಅಭಿನಯ ಕಲೆಗೆ ಪ್ರಸಿದ್ಧಿಯಾದ ಬೈರಕೂರ ವೆಂಕಟಲಕ್ಷ್ಮಿ, ಟಿ.ನರಸೀಪುರದ ತಿರುಮಕೂಡಲು, ಸುಂದರಮ್ಮ ಪ್ರಮುಖ ಭರತನಾಟ್ಯ ಪ್ರವೀಣೆಯರಾಗಿದ್ದರು. ಜಟ್ಟಿ ತಾಯಮ್ಮ ಪ್ರತಿಷ್ಠಿತ ನರ್ತಕಿಯಾಗಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರ ಪೋಷಣೆಗೆ ಪಡೆದಿದ್ದಳು."[೨೦]

"ಕೆಳದಿ ಅರಸರ ಕಾಲದಲ್ಲಿ ದೇವದಾಸಿ ಪದ್ಧತಿಯು ಪ್ರಬಲವಾಗಿತ್ತು. ಅಂದಿನ ಪ್ರಸಿದ್ಧ ದೇವಾಲಯಗಳಲೆಲ್ಲ ನರ್ತಕಿಯರು ನೆಲೆಸಿದ್ದರು. ಕೆಳದಿ ಶಾಸನಗಳಲ್ಲಿ ಇವರನ್ನು "ಹೂಜೂರು ಮೇಳ"ದವರೆಂದು ಉಲ್ಲೇಖಿಸಲಾಗಿದೆ. ದೇವದಾಸಿಯರು ಸಮಾಜದಲ್ಲಿ ಗೌರವದ ಸ್ಥಾನವನ್ನು ಹೊಂದಿದ್ದು, ಧಾರ್ಮಿಕ ಕಾರ್ಯಗಳಿಗೆ ದಾನದತ್ತಿಗಳನ್ನು ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. ಶಿವಲಿಂಗಿ ಪುಟ್ಟತಾಯಿ, ಜಮಖಂಡಿ ಚೆನ್ನಿ ಎಂಬುವವರು ಮಠವನ್ನು ನಿರ್ಮಿಸಿದ್ದರೆಂದು ಕೆಳದಿ ಶಾಸನದಿಂದ ತಿಳಿಯುತ್ತದೆ."[೨೧]

"ದೇವಾಲಯಗಳಲ್ಲಿ ನೃತ್ಯಸೇವೆ ಮಾಡುವ ಪದ್ಧತಿಯ ರಾಜಾಶ್ರಯವಿರುವಲ್ಲಿ ಮಾತ್ರ ಬೆಳೆದು ಬಂದಿತೆಂದು ಹೇಳಬಹುದು. ವಿಜಯನಗರ, ಕೆಳದಿ ಅರಸರ ಅಧೀನಕ್ಕೊಳಪಟ್ಟಿದ್ದ ಬಾರ್ಕೂರು, ಬಸ್ರೂರು, ಹಿರಯಡ್ಕ, ಕೊಲ್ಲೂರು, ಸೌದೊರು, ಮೊದಲಾದ ಪಟ್ಟಣಗಳಲ್ಲಿ ಪ್ರತಿನಿಧಿಗಳು ಆಳ್ವಿಕೆ ನಡೆಸುತ್ತಿದ್ದರು. ಪ್ರತಿನಿಧಿಗಳು ಈ ಪದ್ಧತಿಗೆ ಪ್ರೋತ್ಸಾಹ ನೀಡಿದ್ದರು. ದೇವದಾಸಿಯರನ್ನು ಬೇರೆ ಪ್ರದೇಶಗಳಿಂದ ಬರಮಾಡಿಕೊಳ್ಳುತ್ತಿದ್ದರಲ್ಲದೆ, ಅವರಿಗೆ ದೇವಾಲಯದ ವತಿಯಿಂದ ಮನೆ, ಉಂಬಳಿಗಳನ್ನು ನೀಡುತ್ತಿದ್ದರು. ಪುತ್ತಿಗೆಯ ದೇವದಾಸಿಯರನ್ನು ವಿಜಯನಗರದ ದೇವರಾಯನು ಚೌಟರ ಸಾಮಂತ ರಾಜನಲ್ಲಿಗೆ ಉಳಿದ ರಾಜ್ಯದ ಅಧಿಕಾರಿಗಳ ಜೊತೆಗೆ ಕಳುಹಿಸಿದನೆಂದು ತಿಳಿಯುತ್ತದೆ. ಈ ಪುತ್ತಿಗೆಯ ದೇವದಾಸಿಯರ ಕುಲದೇವರು ಎಲ್ಲಮ್ಮ. ಮಾತೃಭಾಷೆ ಕನ್ನಡವಾಗಿದ್ದರಿಂದ ಅವರು ಮೂಲತಃ ಕನ್ನಡದವರೆಂದು ಸ್ಪಷ್ಟಪಡಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಬೇರೆ ರಾಜ್ಯಗಳಿಂದಲೂ ದೇವದಾಸಿಯರನ್ನು ಬರಮಾಡಿಕೊಳ್ಳುತ್ತಿದ್ದರು. ಒಟ್ಟಾರೆ ಅರಸರು ವಿಲಾಸಿ ಜೀವನಕ್ಕೆ ಹೆಚ್ಚಿನ ಆದ್ಯತೆ ನೀಡಿ ಈ ಪದ್ಧತಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರೆಂದು ತಿಳಿಯುತ್ತದೆ."[೨೨]

ಬ್ರಿಟಿಷರ ಆಗಮನಕ್ಕಿಂತ ಪೂರ್ವದಲ್ಲಿ ದೇವದಾಸಿಯರು ಸಮಾಜದಲ್ಲಿ ಗೌರವದಿಂದ ಸುಖ ಜೀವನ ನಡೆಸುತ್ತಿದ್ದರು. ಭಾರತಕ್ಕೆ ಪರಕೀಯರ ಆಳ್ವಿಕೆ ಅಧಿಕಗೊಂಡಂತೆಲ್ಲ ಇವರ ಸ್ಥಾನಮಾನಗಳು ಕುಸಿದವು. ಆರ್ಥಿಕ-ಅಸ್ಥಿರತೆಯಿಂದಾಗಿ ಎಲ್ಲವನ್ನು ಕಳೆದುಕೊಂಡರು. ಮದುವೆ, ಮುಂಜಿ, ಜಾತ್ರೆ, ಉತ್ಸವಗಳಲ್ಲಿ ಭಾಗವಹಿಸುವ, ಉಳ್ಳವರ ಮನೋರಂಜನೆಗಾಗಿ, ಕುಣಿಯುವ, ವೇಶ್ಯಾವೃತ್ತಿಗೆ ಮೀಸಲಾದರು.

ಸ್ವಾತಂತ್ರ್ಯಾನಂತರ ಬದಲಾವಣೆಗೊಳಗಾದ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸ್ಥಿತಿಗತಿಗಳಿಂದಾಗಿ ದೇವದಾಸಿಯರು ಮಾನಸಿಕ ಆಘಾತಕ್ಕೊಳಗಾದರು. ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತಲ್ಲದೇ,

ಬದಲಾದ ಸಮಾಜಕ್ಕೆ ಹೊಂದಿಕೊಳ್ಳಲು ಕಷ್ಟವಾಯಿತು. ಹಿಂದೆಲ್ಲ ಶ್ರೀಮಂತಿಕೆಯಿಂದ, ಗೌರವದಿಂದ ಬಾಳಿದ್ದ ದೇವದಾಸಿಯರು ಆಧುನಿಕ ಕಾಲದಲ್ಲಿ ಬಡತನದ ಜೀವನವನ್ನು ಸಹಿಸಿಕೊಳ್ಳದಾದರು. ಸರಕಾರ ಮತ್ತು ಜನತೆ ಈ ಪದ್ಧತಿಯನ್ನು ತಿರಸ್ಕರಿಸಿದ್ದರಿಂದ ಕೆಲವರು ಇತರೆ ವೃತ್ತಿಗಳಿಗಾಗಿ ಉತ್ತಮ ಜೀವನ ನಡೆಸಿದರೆ, ಇನ್ನೂ ಕೆಲವರು ವೇಶ್ಯಾವೃತ್ತಿಯನ್ನು ಅಪ್ಪಿಕೊಂಡು ಪಟ್ಟಣದಲ್ಲಿ ನೆಲೆಸಿದರು.

ಒಟ್ಟಾರೆಯಾಗಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ದೇವದಾಸಿ ಪರಂಪರೆ ಇಂದು ತನ್ನ ಮಹತ್ವದ ಸ್ಥಾನ, ಗೌರವವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ.

೨.೨. ಲಿಂಗ ಪಕ್ಷಪಾತ ಮತ್ತು ಪಿತೃ ಪ್ರಧಾನತೆ

೨.೨.೧. ಪಿತೃ ಪ್ರಧಾನತೆ ಎಂದರೇನು?

ಪಿತೃ ಎಂದರೆ ತಂದೆ. ಯಾವ ಕುಟುಂಬದಲ್ಲಿ ಹಿರಿಯನಾಗಿ ಪುರುಷ ಕುಟುಂಬ ನಿರ್ವಹಣೆಯ ಪೂರ್ಣ ಅಧಿಕಾರ ಹೊಂದಿರುತ್ತಾನೆ. ಅಂತಹ ವ್ಯವಸ್ಥೆಯನ್ನು ಪಿತೃ ಪ್ರಧಾನತೆ ಎನ್ನುವರು. 'ತಂದೆಯೇ ಕುಟುಂಬದ ಯಜಮಾನ' ಅವನದೇ ನಿರಂಕುಶ ಆಡಳಿತ ಇರುವುದು. ಆಸ್ತಿ-ಪಾಸ್ತಿಗಳ ವ್ಯವಹಾರ, ಅವನ, ಹೆಸರಿನಲ್ಲೆ ನಡೆಯುವ, ವಂಶಾವಳಿಯನ್ನು ಅವನ ಮೂಲಕ ಗುರುತಿಸುವ ಕುಟುಂಬವು ಪಿತೃಪ್ರಧಾನವಾಗಿದೆ.

೨.೨.೨. ಪಿತೃ ಪ್ರಧಾನ ಕುಟುಂಬದ ಮುಖ್ಯ ಲಕ್ಷಣಗಳು

೧. ವಂಶಾವಳಿ ಮತ್ತು ಪಿತ್ರಾರ್ಜಿತ ಆಸ್ತಿಯ ಉತ್ತರಾಧಿಕಾರ : ಇಲ್ಲಿ ವಂಶಪರಂಪರೆಯನ್ನು ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಸಾಗಿಬರುವುದು. ಕುಟುಂಬದ ಆಸ್ತಿ, ಅಧಿಕಾರ, ಉತ್ತರಾಧಿಕಾರಿ ತಂದೆಯಿಂದ ಮಗನಿಗೆ ಬರುವುದು. ತಂದೆಯ ನಂತರ ಮಗನೇ ಸಕಲ ಸೊತ್ತುಗಳ ವಾರಸುದಾರ. ಇಲ್ಲಿ ಸದಸ್ಯರುಗಳ ಸ್ಥಾನ ಮತ್ತು ಹೆಸರು ತಂದೆಯ ಕಡೆಯಿಂದಲೇ ನಿರ್ಧಾರವಾಗುತ್ತದೆ. ತಾಯಿಯ ವಂಶೀಯತೆಯನ್ನು ಅಲಕ್ಷಿಸಲಾಗಿರುತ್ತದೆ.

೨. ಪಿತೃ ಗೃಹ ನಿವಾಸ : ಪಿತೃ ಪ್ರಧಾನ ಕುಟುಂಬಗಳಲ್ಲಿ ಪಿತೃಗೃಹ ನಿವಾಸದ ಪದ್ಧತಿ ಇರುತ್ತದೆ. ವಿವಾಹದ ನಂತರ ಪತ್ನಿಯು ತನ್ನ ಪತಿಯ ಮನೆಯಲ್ಲಿ ವಾಸಮಾಡುವುದು ಕಡ್ಡಾಯವಾಗಿದೆ. ಮಕ್ಕಳು ಇಲ್ಲಿಯೇ ಹುಟ್ಟಿ ಬೆಳೆಯುವರು. ಗಂಡು-ಮಕ್ಕಳು ಮಾತ್ರ ವಿವಾಹದ ನಂತರವೂ ಮನೆಯಲ್ಲಿಯೇ ಉಳಿಯುವರು. ಇಲ್ಲಿ ಪುರುಷರಿಗೆ ಪ್ರಾಧಾನ್ಯತೆ ಹೆಚ್ಚು. ಸ್ತ್ರೀಯರ ಸ್ಥಾನಮಾನ ಕೆಳಮಟ್ಟದ್ದಾಗಿರುತ್ತದೆ. ಸ್ತ್ರೀಯು ಕೇವಲ ಪಿತೃ ಗೃಹಕ್ಕೆ ಬಂದು ಹೋಗುವ ವಾಡಿಕೆಗೆ ಸೇರಿರುತ್ತಾಳೆ.

೩. ಅಧಿಕಾರದ ಚಲಾವಣೆ : ಇಲ್ಲಿ ತಂದೆಯೇ ಸರ್ವಾಧಿಕಾರಿ, ಎಲ್ಲಾ ಅಧಿಕಾರಗಳೂ ಆತನಲ್ಲಿಯೇ ಕೇಂದ್ರೀಕೃತವಾಗಿರುವುದು. ಆತನೇ ಕುಟುಂಬದ ಯಜಮಾನನಾಗಿರುತ್ತಾನೆ. ಕುಟುಂಬದ ಸದಸ್ಯರೆಲ್ಲರೂ

ಆತನ ಅಜ್ಞಾನುವರ್ತಿಗಳಾಗಿರುತ್ತಾರೆ. ಕುಟುಂಬದ ಆರ್ಥಿಕ, ಸಾಮಾಜಿಕ ವ್ಯವಹಾರಗಳ ಸಂಪೂರ್ಣ ನಿರ್ಣಯ ಆತನ ತೀರ್ಮಾನವೇ ಅಂತಿಮವಾಗಿರುತ್ತದೆ. ಕುಟುಂಬದ ಆಸ್ತಿಯನ್ನು ಸಂರಕ್ಷಿಸುವುದು, ಮನೆಯಲ್ಲಿ ಪೂಜೆ-ಪುನಸ್ಕಾರಗಳು ಸರಾಗವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ಸದಸ್ಯರ ವರ್ತನೆಯ ನಿಯಂತ್ರಣ ನಿಭಾಯಿಸುವ, ನಿರ್ದೇಶಿಸುವ, ಸುಧಾರಿಸುವ ಅಂತಿಮ ಅಧಿಕಾರ ತಂದೆಯ ಕೈಯಲ್ಲಿ ಇರುತ್ತದೆ. ಈ ಅಧಿಕಾರ ಗಂಡು ಸಂತತಿಯಲ್ಲಿ ತಂದೆಯ ನಂತರ ಮಗನಿಗೆ ವರ್ಗಾಯಿಸಲ್ಪಡುತ್ತದೆ. ಇವೆಲ್ಲವೂ ಆತನ ಜವಾಬ್ದಾರಿ, ಆತನ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ.

೪. ಪಿತೃಪ್ರಧಾನತೆಯ ಚಾರಿತ್ರಿಕ ಬೆಳವಣಿಗೆ : ಪ್ರಾಚೀನ ಕಾಲದಲ್ಲಂತೂ ಪಿತೃಪ್ರಧಾನ ಕುಟುಂಬಗಳಲ್ಲಿನ ಹಿರಿಯನು ಒಂದು ರೀತಿಯ ಸರ್ವಾಧಿಕಾರಿಯಂತೆಯೇ ಅಧಿಕಾರ ಚಲಾಯಿಸುತ್ತಿದ್ದನು. ತನ್ನ ಪತ್ನಿ, ಮಕ್ಕಳ ಸೇವಕರ ಹಾಗೂ ಕುಟುಂಬದ ಇತರ ಸದಸ್ಯರ ಮೇಲೆ ಆತನಿಗೆ ಪರಮಾಧಿಕಾರವಿತ್ತು. ಅವರನ್ನು ಕೊಲ್ಲುವ, ಮಾರಾಟ ಮಾಡುವ ಅಧಿಕಾರವೂ ಸಹ ಕೆಲವು ಕಡೆಗಳಲ್ಲಿತ್ತು. ಕುಟುಂಬದ ಧಾರ್ಮಿಕ ಕಾರ್ಯಗಳೆಲ್ಲವೂ ಆತನ ಮೂಲಕವೇ ನಡೆಯಬೇಕಾಗಿತ್ತು. ಕುಟುಂಬದ ದೇವತೆಗಳ ರಕ್ಷಕನೇ ಆತನೆಂಬಂತೆ ಆತನ ವರ್ತನೆಯಿರುತ್ತಿತ್ತು.

"ಪ್ರಾಚೀನ ಚೀನಾ, ಭಾರತ ದೇಶದಲ್ಲಿದ್ದಂತೆ ಸ್ತ್ರೀಯರು ಬಾಲ್ಯದಲ್ಲಿ ತಂದೆಗೆ, ನಂತರ ಗಂಡನಿಗೆ ಮತ್ತು ವೈಧವ್ಯ ಪ್ರಾಪ್ತವಾದಾಗ ಮಗನಿಗೂ ವಿಧೇಯರಾಗಿರಬೇಕಾಗಿತ್ತು. ಸ್ತ್ರೀಯರಿಗೆ ಆಸ್ತಿಯನ್ನು ಹೊಂದುವ ಹಕ್ಕು ಇರಲಿಲ್ಲ. ಗಂಡನ ವಿರುದ್ಧ ಹೆಂಡತಿಗೆ ಯಾವ ನ್ಯಾಯವೂ ಆಗುತ್ತಿರಲಿಲ್ಲ. ಕುಟುಂಬದ ಧಾರ್ಮಿಕ ಕಾರ್ಯಗಳಲ್ಲಿಯೂ ಪುರುಷರದೇ ಪ್ರಧಾನ ಪಾತ್ರವಿರುವುದು. ಸ್ತ್ರೀಯರು ಸಾರ್ವಜನಿಕ ಜೀವನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿರಲಿಲ್ಲ. ಅವರಿಗೆ ಹೆಚ್ಚಿನ ವಿದ್ಯಾಭ್ಯಾಸವು ದೊರೆಯುತ್ತಿರಲಿಲ್ಲ. ಮನೆ ಕೆಲಸಗಳಲ್ಲಿ ಮಾತ್ರ ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಪಿತೃ ಪ್ರಧಾನ ಕುಟುಂಬದಲ್ಲಿ ಸ್ತ್ರೀಗೆ, ಆಸ್ತಿ-ಅಧಿಕಾರ, ಅಂತಸ್ತು, ಉತ್ತರಾಧಿಕಾರಿ ಯಾವುದೂ ಇರಲಿಲ್ಲವಾದ್ದರಿಂದ ಸ್ತ್ರೀಯ ಸ್ಥಾನಮಾನ ಕೀಳುಮಟ್ಟದ್ದಾಗಿತ್ತು. ಎಲ್ಲದ್ದಕ್ಕೂ ಪುರುಷರ ಮೇಲೆ ಅವಲಂಬಿತವಾಗುವ ಅನಿರ್ವಾಯತೆ ಇತ್ತು".[೨೩]

ಪ್ರಾಚೀನ ಜಗತ್ತಿನಲ್ಲಿ ದಾಸ ಪದ್ಧತಿಯ ರೂಪದಲ್ಲಿ ಶೋಷಣೆ ಬೆಳೆಯಿತು. ಮಧ್ಯಯುಗದಲ್ಲಿ ಅದು ಸಾಮಂತರ ಅಧೀನದಲ್ಲಿದ್ದಂಥ ಭೂ-ದಾಸರ ರೂಪದಲ್ಲಿ ಬೆಳೆದುಬಂದಿತು. ಇಂದಿಗೂ ಶ್ರಮಜೀವಿಗಳ ರೂಪದಲ್ಲಿ ಜೀವಂತವಾಗಿ ಉಳಿಸಿಕೊಂಡು ಬಂದಿದೆ. ಕಾಲದಿಂದ ಕಾಲಕ್ಕೆ ಹೊಸಹೊಸ ರೂಪ ತಾಳುತ್ತಿದೆ. ಅಬ್ರಾಹಂ ಲಿಂಕನ್ ಗುಲಾಮಗಿರಿ ವಿರೋಧಿಸಿದ ನಾಡಿನಲ್ಲಿ ಅದು ಬಲವಾಗಿ ಬೇರುಬಿಟ್ಟಂತೆ ಭಾರತದಲ್ಲಿ ದೇವರ ಸೇವೆಗಾಗಿ ಬಂದ ದೇವದಾಸಿಯರನ್ನು ಸೂಳೆಯರನ್ನಾಗಿ ಮಾಡಿದ್ದು ಅತಿ ಕ್ರೂರವಾದದ್ದು. ಅದೇ ರೀತಿಯಾಗಿ ಪ್ರಾಚೀನ ಕಾಲದಲ್ಲಿ ಗಾಡಿಯ ಚಕ್ರದ ಆವಿಷ್ಕಾರ ಆದಾಗ ಯುದ್ಧಕ್ಕೆ ಬೇಸಾಯಕ್ಕೆ ಉದ್ಯೋಗಕ್ಕೆ ಕೆಲಸಗಾರರು ಸಿಗದಿದ್ದಾಗ ಈ ಎಲ್ಲಾ ಕೆಲಸಗಳನ್ನು ಮಾಡಲು

[illegible]

[illegible]

[illegible]

ಈ ಗುಲಾಮರ ಅಗತ್ಯ ಕಂಡುಬಂದಿತು. ಯಾವಾಗ ಪಿತೃ ಪ್ರಧಾನ ಸಮಾಜ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಾಧಾನ್ಯತೆ ಹೊಂದಿದ್ದ ಸ್ತ್ರೀ ಅವನ ಗುಲಾಮಳಾದಳು.

“ಕೆಲವು ಸಮುದಾಯದವರು ತಮ್ಮ ಸಮುದಾಯಕ್ಕೆ ಸೇರಿದ ನಾರಿಯರೊಂದಿಗೆ ಮೈಥುನ ನಡೆಸುವುದಿಲ್ಲವೆಂದು ಘೋಷಿಸಿದ ಮೇಲೆ ಬೇರೆ ಹೆಣ್ಣುಗಳಿಗಾಗಿ ಯುದ್ಧಗಳಾಗತೊಡಗಿದವು. ಯುದ್ಧದಲ್ಲಿ ಗೆದ್ದು ತಂದ ಗಂಡು ದಾಸರ ಕಾರ್ಯ ಮನೆಕೆಲಸ ಹೊಲಗೆಲಸಗಳಾದರೆ ಹೆಣ್ಣು ದಾಸಿಯರ ಕೆಲಸ ಹಾಸಿಗೆಯದಾಗಿತ್ತು. ಪ್ರಸಿದ್ದ ಋಷಿಗಳಾದ ಕಕ್ಷಿವಾನ್ ಔಶಿಜ ಮತ್ತು ಕವಷರು ಯುದ್ಧದಲ್ಲಿ ಗೆದ್ದು ತಂದ ದಾಸಿ ವಧುಗಳ ಮಕ್ಕಳೇ ಆಗಿದ್ದಾರೆ. ಪಾಕಿಸ್ತಾನದಲ್ಲಿ ಹಿಂದಿನ ಪ್ರಧಾನಮಂತ್ರಿಯಾಗಿದ್ದ ಜುಲ್ಫೆಕಾರಲಿ ಭುಟ್ಟೋ ಲಕ್ಷ್ಮಿ ಎಂಬ ನರ್ತಕಿಯ ಮಗನಾಗಿದ್ದಾನೆ. ರೋಮನ್ನರು ಸಹ ತಮ್ಮ ಹೆಂಡತಿ ಮಕ್ಕಳು ಮತ್ತು ದಾಸಿಯರನ್ನು ಹೊತ್ತುಕೊಂಡು ಬಂದು ಮಾರುತ್ತಿದ್ದರು. ಭಾರತೀಯರಲ್ಲಿ ಸಹ ಮಾರಿದ ಅನೇಕ ಉದಾಹರಣೆಗಳಿವೆ. ಪುರಾಣ ಪ್ರಸಿದ್ಧರಾದ ಸೀತೆ, ಅರುಂಧತಿ, ಗಾಂಧಾರಿ ಮತ್ತು ರುಕ್ಮಿಣಿ ಇವರೆಲ್ಲರು ತಮ್ಮ ಗಂಡಂದಿರ ದಾಸಿಯರು. ಅವರ ಇಚ್ಛೆಯನ್ನು ಪೂರೈಸುವ ಸೇವಕಿಯರು ಅವರ ಕಾಂತಿಯನ್ನು ಪ್ರತಿಬಿಂಬಿಸುತ್ತಿರುವ ಕನ್ನಡಿಗಳು ಮಾತ್ರ ಆಗಿದ್ದರು”.[೨೪]

“ಕಾಳಿದಾಸನು ಕುಮಾರ ಸಂಭವದಲ್ಲಿ ‘ಪತಿ ಗೃಹೇ ತವದಾಸ್ಯ ಮಪಿ ಕ್ಷಮಮ್’ ಅಂದರೆ ಗಂಡನ ಮನೆಯಲ್ಲಿ ನೀವು ದಾಸಿಯರಾಗಿದ್ದರೂ ಸರಿಯೇ ಎಂದು ಹೇಳಿದ್ದು ನೋಡಬಹುದು. ಜನ್ನ ತನ್ನ ಯಶೋಧರ ಚರಿತ್ರೆಯಲ್ಲಿ ಹೆಣ್ಣನ್ನು ಸ್ವತಂತ್ರಳಿರುವಂತೆ ಚಿತ್ರಿಸಿದರೂ ಕೊನೆಗೆ ಅವಳು ಸಾಯುವುದು ಧರ್ಮದ ಸೆರೆಯಲ್ಲಿ. ಋಗ್ವೇದ ಕಾಲದಲ್ಲಿಯೂ ಒಂದಲ್ಲ ಒಂದು ರೂಪದಲ್ಲಿ ಈ ದಾಸಿಪದ್ಧತಿ ಜಾರಿಯಲ್ಲಿತ್ತು. ಅದರ ದ್ಯೂತ ಸೂಕ್ತದಲ್ಲಿ ನಿರೂಪಿಸಿರುವಂತೆ ಜೂಜಿನಲ್ಲಿ ಹೆಣ್ಣನ್ನು ಪಣವಾಗಿ ಒಡ್ಡಬಹುದಾಗಿತ್ತು. ಹಾಗೂ ಜೂಜುಗಾರ ಸೋತು ಹೋದರೆ ಆಕೆ ಗೆದ್ದವರ ವಿಲಾಸದ ವಸ್ತುವಾಗಿ ಪರಿಣಮಿಸುತ್ತಿದ್ದಳು”.[೨೫]

“ತಮ್ಮ ಶತ್ರುಗಳನ್ನು ಆರ್ಯ ಋಷಿದಾಸ ದಾಸರು ಎಂದು ಕರೆದಿದ್ದಾರೆ. ಇವರೇ ದ್ರಾವಿಡರು. ಅಲೆಕ್ ಝಾಂಡರ್ ಭಾರತದ ಮೇಲೆ ದಾಳಿ ಮಾಡಿದಾಗ ತಕ್ಷ ಶಿಲೆಯ ಪೇಟೆಗಳಲ್ಲಿ ದಾಸ-ದಾಸಿಯರನ್ನು ಮಾರುತ್ತಿದ್ದರು. ಕ್ರಿ.ಶ.೧ನೇ ಶತಮಾನದ ಅಜ್ಞಾತ ಗ್ರೀಕ್ ಲೇಖಕನ ಇರಿಥಿಯನ್ ಸಾಗರದ ಪೆಂಪ್ಲಸ್ ಎಂಬ ಕೃತಿಯಲ್ಲಿ, ಗ್ರೀಕ್ ನಗರಗಳಿಂದ ಕರೆ ತಂದ ದಾಸಿಯರನ್ನು ಹಡಗುಗಳಲ್ಲಿ ಮಧ್ಯ ಮತ್ತು ಇತರ ವ್ಯಾಪಾರಿ ವಸ್ತುಗಳೊಂದಿಗೆ ಭಾರತದ ಪಶ್ಚಿಮ ತೀರದ ಬಡೋದಾ, ಸೋಪಾರಾ, ಕಲ್ಯಾಣ ಮುಂತಾದ ತೀರ ಪಟ್ಟಣಗಳಲ್ಲಿ ಇಳಿಸಿ, ಉಜ್ಜಯಿನಿ ಮಾರ್ಗವಾಗಿ ಉತ್ತರ ಭಾರತದ ಅರಮನೆಗಳಲ್ಲಿಗೆ ಶ್ರೀಮಂತರ ಸೌಧಗಳಿಗೆ ತಲುಪಿಸುವ ವ್ಯವಸ್ಥೆಯು ನಡೆಯುತ್ತಾ ಇತ್ತು”.[೨೬]

“ಅಲ್ಲಾ ಉದ್ದೀನನ ಕಾಲದಲ್ಲಿ ಮಧ್ಯ ಏಷ್ಯಾದಲ್ಲಿ ದಾಸರ ಸಂಖ್ಯೆ ಬಹಳಷ್ಟು ಹೆಚ್ಚಾಗಿತ್ತು. ೬೦ ಪೈಸೆಗೆ ಒಬ್ಬ ದಾಸಿ, ಉಪಪತ್ನಿಯನ್ನು ಕೊಳ್ಳಬಹುದಾಗಿತ್ತು. ಅದರಂತೆಯೇ ೩೦ ಪೈಸೆಗೆ ಈ

ಉಪಪತ್ನಿ ದಾಸಿಯರ ಮಕ್ಕಳನ್ನು ಕೊಳ್ಳಬಹುದಾಗಿತ್ತು. ಮೊಗಲ್ ಬಾದಶಹರು ತಮ್ಮ ಅಂತಃಪುರಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ದಾಸ-ದಾಸಿಯರನ್ನು ನಪುಂಸಕರನ್ನಾಗಿ ಇರಿಸಿಕೊಂಡಿದ್ದರು. ಪ್ರಗತಿಶೀಲ ವಿಚಾರದವರಾದ ಬ್ರಿಟಿಷರು ಸಹ ಒಳಗೊಳಗೆ ತಮ್ಮ ಸುಖಕ್ಕಾಗಿ ಈ ಪದ್ಧತಿಗೆ ಪ್ರೋತ್ಸಾಹ ನೀಡಿದ್ದಾರೆ. ಆಧುನಿಕ ಯುಗ ಕಾಲಿಟ್ಟಂತೆ ಜಾಗೀರದಾರ, ಜಮಿನ್‌ದಾರ, ಬಂಡವಾಳಶಾಹಿಗಾರರು ಮನೆಗೆಲಸದ ನೆಪದಲ್ಲಿ ದಾಸಿಯರನ್ನು ನೇಮಿಸಿಕೊಂಡದ್ದು ಇನ್ನೂ ಜೀವಂತವಾಗಿದೆ. ಹೊಟ್ಟೆ ಬಟ್ಟೆಗಾಗಿ ಇನ್ನೂ ಕೆಲವು ಹಳ್ಳಿಗಳಲ್ಲಿ ದುಡಿಯುವವರನ್ನು ಕಾಣುತ್ತೇವೆ. ಜೀತಪದ್ಧತಿ ಇದಕ್ಕೆ ಮೂಲ. ಈ ಎಲ್ಲ ಕಾರಣಗಳು ದೇವದಾಸಿ ಪದ್ಧತಿ ದೇಶದ ತುಂಬ ಮೊಳಕೆ ಒಡೆಸಿ ಹರಡಿಸಿದ್ದಕ್ಕೆ ತಳಹದಿ ಆಗಿದೆ.[32]

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಸ್ವರೂಪಗಳ ಬಗೆಗೆ ಸಾಕಷ್ಟು ಅಸ್ಪಷ್ಟತೆಯಿದೆ. ಕೆಲವು ಶಾಸ್ತ್ರ ಗ್ರಂಥಗಳು "ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ" ಎಂದು ಅವರ ಸ್ಥಾನವನ್ನು ಹಾಡಿ ಹೊಗಳುತ್ತವೆ. ಮಾತೃ ದೇವತೆಯ ಹಲವು ರೂಪಗಳಾಗಿ ದುರ್ಗಾ, ಕಾಳಿ ಎಲ್ಲಮ್ಮ, ಹುಲಿಗೆಮ್ಮ, ಚಂಡಿ, ಮುಂತಾದ ಹೆಸರುಗಳಿಂದ ವಿಭಿನ್ನ ಪ್ರದೇಶಗಳಲ್ಲಿ ಅನೇಕ ಅವತಾರಗಳಿಂದ ಆರಾಧಿಸಲ್ಪಡುವುದು ಕಂಡುಬರುತ್ತದೆ. ಅವಳೆಂದರೆ ಭಯ, ಭಕ್ತಿಗಳೆರಡು ಜಾಗೃತವಾಗುತ್ತವೆ. ಅವಳು ರಕ್ಷಿಸುವಳು ಮತ್ತು ಸಂದರ್ಭ ಬೇರೆಯಾದಾಗ ವಿನಾಶ ಮಾಡಬಲ್ಲಳು. ಸಂತೃಪ್ತಳಾದರೆ ಪ್ರತಿಯೊಂದು ಬಯಕೆಯನ್ನು ಈಡೇರಿಸುವಳು. ಕ್ಷುದ್ರಳಾದರೆ ಹಿಂದೆಂದೂ ಕಾಣದ ಉಗ್ರ ಭೀಕರತೆಯನ್ನು ಹರಿಹಾಯಿಸುವಳು. ಪುರುಷ ದೇವತೆಗಳು ಅವಳೆದುರಿಗೆ ಅಸಹಾಯಕರಾಗುವರು. ಅವರು ಸಕ್ರಿಯಳಾಗಲು ನಿರ್ಧರಿಸಿದಾಗ ಅವರು ಮಧ್ಯೆ ಪ್ರವೇಶಿಸಿದರು. ಆಕೆಯ ಕೆಲವು ಗುಣಗಳು ಪ್ರತಿಯೋರ್ವ ಹೆಣ್ಣಿನಲ್ಲೂ ಇವೆಯೆಂದು ನಂಬಲಾಗುತ್ತದೆ. ಆದರೆ ಹೆಣ್ಣಿನ ಇನ್ನೊಂದು ಚಿತ್ರವೂ ಇದೆ. ಅದಕ್ಕೂ ಧರ್ಮಶಾಸ್ತ್ರಗಳ ಹಾಗೂ ಜಾನಪದದ ಸಮ್ಮತಿ ಇದೆ. ಹೆಣ್ಣು ಚಂಚಲೆ ಮತ್ತು ಅಬಲೆ, ಸುಳ್ಳು, ವಂಚನೆ, ದುರಾಸೆ, ಮೋಸ, ಅಶುದ್ಧಿ, ಆಕರ್ಷಣೆ ಇರುವವಳು. ಪೂರ್ವಾಪರ ವಿವೇಚನೆಯಿಲ್ಲದೇ ಕೆಲಸ ಮಾಡುವಳು. ಹಾಗಾಗಿ ಎಲ್ಲ ಕೆಡಕುಗಳ ಮೂಲ ಅವಳೇ ಎಂದು ಭಾವಿಸಬಹುದು. ಸ್ಥಿರವಾದ ಮನಸ್ಸಿಲ್ಲದವಳು ಎಂದು ನಂಬಲಾಗಿರುವುದರಿಂದ ಅವಳ ಮೇಲೆ ಕಟ್ಟುನಿಟ್ಟಾದ ಹತೋಟಿಯಿಟ್ಟುಕೊಳ್ಳತಕ್ಕದ್ದು ದುರ್ಬಲಳಾದ್ದರಿಂದ ಜೀವನದ ಎಲ್ಲ ಹಂತಗಳಲ್ಲೂ ಅವಳಿಗೆ ರಕ್ಷಣೆಯ ಅಗತ್ಯವಿದೆ.

ಬಾಲ್ಯದಲ್ಲಿ ತಂದೆ, ತಾರುಣ್ಯದಲ್ಲಿ ಪತಿ, ಮುಪ್ಪಿನಲ್ಲಿ ಪತಿಯು ಮೃತನಾದ ಮೇಲೆ ಮಕ್ಕಳು ಅವಳನ್ನು ಸಂರಕ್ಷಿಸಬೇಕು. ಸುಪ್ರಸಿದ್ಧ ಕವಿ ತುಳಸೀದಾಸರು ಜನಪ್ರಿಯವಾದ ಒಂದು ಪದ್ಯದಲ್ಲಿ ಸ್ತ್ರೀಯರನ್ನು ತಮಟೆ, ನಿರಕ್ಷರ ವ್ಯಕ್ತಿ, ಶೂದ್ರ ಮತ್ತು ಪಶು ಇವುಗಳ ಜೊತೆಗೆ ಸೇರಿಸುತ್ತಾರೆ. ಇವು ಸರಿಯಾದ ರೀತಿಯಲ್ಲಿ ದಾರಿಯಲ್ಲೇ ಇರಬೇಕಾದರೆ ತಮಟೆಯನ್ನು ಚೆನ್ನಾಗಿ ಬಡಿಯಬೇಕು. ಬಾರಿಸಬೇಕು ಶಿಕ್ಷಿಸಬೇಕು ಎನ್ನುತ್ತಾರೆ. ದುರ್ಬಲ ಲಿಂಗವೆಂದು ಪರಿಗಣಿಸಿದ ಮಹಿಳೆ ಪುರುಷರಿಗಷ್ಟೇ ಮೀಸಲುಗೊಂಡ

[illegible]

ಕೆಲವು ಸೌಲಭ್ಯ ಸವಲತ್ತುಗಳಿಂದ ಹಕ್ಕುಗಳಿಂದ ವಂಚಿತಳಾಗುವುದು ಅಷ್ಟೇ ಅಲ್ಲದೇ ಈ ದೇವದಾಸಿ ಪದ್ಧತಿಯು ಬೆಳೆಯಲಿಕ್ಕೆ ಕಾರಣವಾಗಿದೆ.

ಮಹಿಳೆಯರ ಮೇಲೆ ನಿಯಂತ್ರಣ ಹಾಕಿರುವ ಕ್ಷೇತ್ರಗಳು ಸಾಕಷ್ಟು ಇವೆ. ಅವುಗಳಲ್ಲಿ ಪ್ರಮುಖವಾದವುಗಳು ಮೊದಲನೆಯದಾಗಿ, ಅವರ ಲೈಂಗಿಕ ಸ್ವಾತಂತ್ರ್ಯವನ್ನು ಪುರುಷರಿಗಿಂತ ಹೆಚ್ಚುಕಟ್ಟುನಿಟ್ಟಾಗಿ ಹತೋಟಿಗೊಳಪಡಿಸಲಾಗಿದೆ. ಸ್ತ್ರೀಯರು ಬಹು ಸುಲಭವಾಗಿ ಮಲಿನಗೊಳ್ಳುವರು. ತಾವು ಹುಟ್ಟಿದ ಹಾಗೂ ಸೇರಿದ ಕುಟುಂಬಗಳೆರಡಕ್ಕೂ ಅಪಮಾನವುಂಟು ಮಾಡುವರು. ರಜಸ್ವಲೆಯಾಗುವುದಕ್ಕೆ ಮೊದಲೇ ಕನ್ಯೆಯ ವಿವಾಹ ಮಾಡಬೇಕು. ಎಂಬ ನಿರ್ಬಂಧದ ಮೇಲೆ ಇರುವುದು ಅವಳ ಪಾವಿತ್ರ್ಯವನ್ನು ರಕ್ಷಿಸುವುದೆಂಬ ಮುಖ್ಯ ಕಾರಣ. ಲೈಂಗಿಕತೆಯ ಹತೋಟಿಯಲ್ಲಿ ವ್ಯಕ್ತವಾಗುವುದು ಸಂತಾನೋತ್ಪತ್ತಿಯ ಮೇಲೆ ಹತೋಟಿ.

ಎರಡನೆಯದಾಗಿ, ಸ್ತ್ರೀಯರ ಚಲನವಲನಗಳ ಮೇಲೆ, ಅವರು ಇಟ್ಟುಕೊಳ್ಳುವ ಸಂಪರ್ಕಗಳ ಮೇಲೆ ನಿಯಂತ್ರಣ, ಇದರ ಒಳ ಅರ್ಥ ಅವರು ಯಾವುದೇ ಒಂದು ಆಮಿಷಕ್ಕೆ ಒಳಗಾಗಿ, ಲೈಂಗಿಕ ನಿರ್ಬಂಧಗಳನ್ನು ಉಲ್ಲಂಘಿಸದಿರಲಿ ಎಂಬುದು. ಹಾಗೆಯೇ ಅವರ ಆಸ್ತಿ-ಪಾಸ್ತಿ, ನಗದು, ಪರಿಶ್ರಮ, ಕೌಶಲ್ಯ ಮೊದಲಾದವನ್ನು ಇತರರು ದುರುಪಯೋಗ ಪಡಿಸಿಕೊಂಡು ಅವರನ್ನು ಶೋಷಿಸದಿರಲಿ ಎಂದು, ಕೆಳವರ್ಗದ ಹೆಂಗಸರು ತಮ್ಮ ಕೌಟುಂಬಿಕ ವೆಚ್ಚಗಳನ್ನು ಪೂರೈಸಿಕೊಳ್ಳಲು ಯಾವುದಾದರೂ ಕೆಲಸ ಮಾಡಬೇಕಾಗುತ್ತದೆ. ಇದರಿಂದಾಗಿ ಕುಟುಂಬ ವಲಯದ ಹೊರಗೆ ಅವರ ಚಲನ ವಲನ ಅಗತ್ಯವಾಗುತ್ತದೆ. ಹೀಗಾಗಿ ಈ ನಿಬಂಧನೆಗಳು ಮುಖ್ಯವಾಗಿ ಮೇಲು(ಉನ್ನತ) ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ, ಬಡವರ್ಗದ ಕುಟುಂಬಗಳಿಗೆ ಬಹಳ ಅನ್ವಯಿಸುತ್ತದೆ. ಇದರಿಂದಾಗಿ ಕೆಲವು ನಿರ್ಬಂಧನೆಗಳಿಂದ ಈ ದೇವದಾಸಿ ಪದ್ಧತಿ ಬೆಳೆಯಲಿಕ್ಕೆ ಸಹಾಯಕವಾದ ಅಂಶವಾಗಿದೆ.

ಮೂರನೆಯದಾಗಿ ಮಹಿಳೆಯ ಸಂಪನ್ಮೂಲವನ್ನು ನಿಯಂತ್ರಣದಲ್ಲಿರಿಸಬೇಕು ಎಂದು ನಂಬಿಸ ಲಾಗಿತ್ತು. ಬಹುತೇಕ ಮಹಿಳೆಯರಿಗೆ ಸಂಪನ್ಮೂಲವೆಂದರೆ ಅವರ ದುಡಿಮೆ ಮತ್ತು ಕೌಶಲ್ಯಗಳು ಹೊರಗಿನ ಕೆಲಸ ನಿರ್ವಹಿಸುತ್ತಿರುವ ಕೂಲಿ ಹೆಂಗಸರಾಗಿರಬಹುದು. ಕುಟುಂಬದ ಕಾರ್ಯಗಳಲ್ಲಿ ಮಗ್ನರಾಗಿರಬಹುದು. ಮನ್ನಣೆ ಗಳಿಸಿ, ಲಾಭದಾಯಿಕವಾಗಿ ಬಳಸಲು ಬರುವ ವಿಶೇಷ ಕೌಶಲ್ಯ ಹೊಂದಿರಬಹುದು. ಇಲ್ಲಿ ಮುಖ್ಯ ಪ್ರಶ್ನೆಗಳು ಬರುವುದು ಸಹಜವಾಗಿದೆ. ಅವರು ತಾವು ಸಂಪಾದಿಸುವ ಹಣದಲ್ಲಿ ಎಷ್ಟನ್ನು ತಮಗಿಷ್ಟ ಬಂದಂತೆ ಉಪಯೋಗಿಸಲು ಅವಕಾಶವಿದೆ? ಎಷ್ಟನ್ನು ಅವರು ಉಳಿಸಿಡಬಹುದು? ಕುಟುಂಬದ ಒಟ್ಟು ವರಮಾನ ಅವರು ತಮ್ಮ ಕೊಡುಗೆಯಾಗಿ ಎಷ್ಟು ಹಣವನ್ನು ನೀಡಬಹುದು?

ಈ ನಿರ್ಬಂಧನೆಗಳನ್ನು ಬಹುಮಟ್ಟಿಗೆ ಸಾಮಾಜಿಕ, ರಚನೆ, ಪಾತ್ರದ ಹಂಚಿಕೆ, ಮೌಲ್ಯಗಳು, ಸಾಮಾಜಿಕ ನಿಯಂತ್ರಣದ ಕಟ್ಟುನಿಟ್ಟು ಮುಂತಾದವುಗಳನ್ನು ಅವಲಂಬಿಸಿ ಅಧಿಕಾರ ಮಾಡಲಾಗುತ್ತದೆ.

ಐತಿಹಾಸಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶಕ್ತಿಗಳ ಅಂತರ-ಒಡನಾಟವು ಲಿಂಗ ಸಮೀಕರಣವನ್ನು ರೂಪಿಸುವಲ್ಲಿ, ಪುನರ್ ರೂಪಿಸುವಲ್ಲಿ ಬಹುಮಟ್ಟಿಗೆ ಕಾರಣವಾಗುತ್ತದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಆಪಾದನೆ ಯಾವುದೆಂದರೆ 'ಪಿತೃ ಪ್ರಧಾನ ಕುಟುಂಬ'. ಅದು ಪುರುಷ ಪ್ರಾಧಾನ್ಯವನ್ನು ಸ್ತ್ರೀಯ ಅಧೀನತೆಯನ್ನು ಮಾನ್ಯ ಮಾಡುತ್ತದೆ. ಮದುವೆಯಾಗುತ್ತಿದ್ದಂತೆ ಹೆಣ್ಣು ತನ್ನ ತವರು ಮನೆಯ ಸಂಬಂಧವನ್ನು ಕಡಿದುಕೊಂಡು ವಿವಾಹವಾಗಿ ಬರುತ್ತಿರುವ ಕುಟುಂಬದ ಸದಸ್ಯತ್ವ ಪಡೆಯುತ್ತಾಳೆ. ಅವಳಿಗೆ ಹುಟ್ಟುವ ಮಕ್ಕಳು ಅವಳ ಪತಿಯ ವಂಶವನ್ನು ಬೆಳೆಸುತ್ತವೆ. ಕುಟುಂಬದ ಒಳಗೆ ಅಧಿಕಾರವು ಪುರುಷರಿಗಿರುತ್ತದೆ. ಅನೇಕ ವೇಳೆ ಅತ್ಯಂತ ಹಿರಿಯನಾದ ಪುರುಷನಿಗೆ ಇರುತ್ತದೆ. ಅವನೇ ಮುಖ್ಯವಾಗಿ ನಿರ್ಣಯ ತೆಗೆದುಕೊಳ್ಳುವವನು. ಇತರ ಪುರುಷರ ಸದಸ್ಯರ ಸಲಹೆ ಕೇಳಬಹುದಾದರೂ ಅಂತಿಮ ನಿರ್ಣಯ ಅವನದೇ. ಈ ಪ್ರಕ್ರಿಯೆಯಲ್ಲಿ ಮಹಿಳೆಯ ಪಾತ್ರ ಅಲ್ಪಸ್ವಲ್ಪ ಅನುಭವಕ್ಕೆ ಬಂದರೂ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲ.

ಪಾತ್ರದ ಹಂಚಿಕೆಯಲ್ಲಿ 'ಗಂಡಸರ ಕೆಲಸ ಹೆಂಗಸರ ಕೆಲಸ' ಎಂದು ವ್ಯತ್ಯಾಸ ಕಲ್ಪಿಸಲಾಗುತ್ತದೆ. ಮನೆಯ ಕಾರುಭಾರುಗಳ ನಿರ್ವಹಣೆ ಮಹಿಳೆಯರ ಕ್ಷೇತ್ರವೇ. ಮಹಿಳೆಯರು ನೀರು ಸೇದುವುದು, ಅಡಿಗೆ ಮಾಡುವುದು. ಮನೆಯನ್ನು ಸ್ವಚ್ಛಗೊಳಿಸುವುದು, ಮನೆಯ ಗಂಡಸರ ಮಕ್ಕಳ ಮತ್ತು ತಮ್ಮ ಬಟ್ಟೆಗಳನ್ನು ಒಗೆಯುವುದು, ಮಕ್ಕಳನ್ನು ನೋಡಿಕೊಳ್ಳುವುದು ಇವೆಲ್ಲವನ್ನು ಮಾಡಬೇಕಾಗುತ್ತದೆ. ಈ ಯಾವುದೇ ಕೆಲಸವನ್ನು ಗಂಡಸರು ಮಾಡುತ್ತಿದ್ದರೆ ಸಾಮಾನ್ಯವಾಗಿ ಅವರು ಇತರರ ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಹೆಂಡತಿ ಬೇರೆ ಊರಿಗೆ ಹೋಗಿದ್ದರೆ ಅಥವಾ ಕಾಯಿಲೆ ಬಿದ್ದಿದ್ದರೆ ಅಥವಾ ಈ ಕೆಲಸಗಳನ್ನು ನಿರ್ವಹಿಸಲೂ ಬೇರಾವ ಹೆಂಗಸೂ ಇರದಿದ್ದರೆ ಮಾತ್ರ ಗಂಡಸು ನಿರ್ವಹಿಸುತ್ತಾನೆ. ಪೂರ್ಣಾವಧಿಯ ವೃತ್ತಿಗಳಲ್ಲಿ ನಿರತರಾಗಿರುವ ಹೆಂಗಸರೂ ಕೂಡ ಕೆಲಸದ ಜೊತೆಗೆ ಮನೆಗೆಲಸಗಳನ್ನು ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಕುಟುಂಬಕ್ಕೆ ಆಹಾರ ಒದಗಿಸುವುದು, ಕುಟುಂಬದೊಳಗಿನ ಘರ್ಷಣೆಗಳನ್ನು, ಅತೃಪ್ತಿಗಳನ್ನು ಪರಿಹಾರ ಮಾಡುವುದು ಪುರುಷರ ಜವಾಬ್ದಾರಿ ಆಗಿರುತ್ತದೆ.

ಹಿಂದೂ ಸಮಾಜದ ಪಿತೃ ಪ್ರಧಾನ ಭಾಗವು ಹೆಣ್ಣಿಗೆ ಹಲವಾರು ಸದ್ಗುಣಗಳು ಇರಬೇಕೆಂದು ನಿರೀಕ್ಷಿಸುತ್ತದೆ. ಅವುಗಳಲ್ಲಿ ಮೊದಲನೆಯದು ಶೀಲ; ಮದುವೆಯಾಗುವುದಕ್ಕಿಂತ ಮೊದಲು ಹೆಣ್ಣು ಲೈಂಗಿಕ ಅರ್ಥದಲ್ಲಿ ಯಾವನೇ ಪುರುಷನನ್ನು ತನ್ನ ಪತಿಯ ಹೊರತು ಇನ್ನೊಬ್ಬ ಗಂಡಸಿನ ಬಗ್ಗೆ ಆಲೋಚಿಸಬಾರದು.

ಎರಡನೆಯದು ಸದ್ಗುಣ ಪತಿಭಕ್ತಿ. ಪತಿ-ಪರಮೇಶ್ವರ ಅಥವಾ ಗಂಡನೇ ದೇವರು ಎಂಬ ಭಾವನೆ ವ್ಯಾಪಕವಾಗಿದೆ. ಈ ಗಂಡನೇ ಮುಂದಿನ ಜನ್ಮಗಳಲ್ಲಿ ತನಗೆ ದೊರಕಲಿ ಎಂದು ಹೆಂಡತಿಯು ಅನೇಕ ವ್ರತೋಪವಾಸಗಳನ್ನು ಮಾಡುತ್ತಾಳೆ. ಆ ಉಪವಾಸ ವ್ರತಗಳಲ್ಲಿ ಪತಿಯ ದೀರ್ಘಾಯುಷ್ಯಕ್ಕಾಗಿ

ಪ್ರಾರ್ಥನೆ ಸಲ್ಲಿಸುವುದೂ ಸೇರಿರುತ್ತದೆ. ಏಕೆಂದರೆ ತನಗೆ ವೈಧವ್ಯದ ಯಾತನೆ ಬರಬಾರದೆಂದು ಹೆಂಡತಿ ಆಶಿಸುತ್ತಾಳೆ. ಬಹಳ ವಿವಾದಕ್ಕೀಡಾದ ಸತಿಪದ್ಧತಿಯಲ್ಲಿ ತನ್ನ ಪತಿಯ ಚಿತೆಯ ಮೇಲೆ ಕುಳಿತು ಪತ್ನಿಯು ಸಹ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ.

ಮೂರನೆಯದಾಗಿ ಪತ್ನಿಯು ತಾನು ವಿವಾಹವಾಗಿ ಬಂದ ಕುಟುಂಬದ ರಚನೆಗೆ ತನ್ನ ವೈಯಕ್ತಿಕತೆಯನ್ನು ವಿಲೀನಗೊಳಿಸಿಕೊಳ್ಳಬೇಕಾಗುತ್ತದೆ. ಅವಳು ಪತಿಯ 'ನೆರಳಿನಂತೆ' ಇರಬೇಕು. ಜೀವನ ಯಾತ್ರೆ ಯುದ್ಧಕ್ಕೂ ಅವನನ್ನು ಅನುಸರಿಸಬೇಕು. ಅಗತ್ಯದ ಗಳಿಗೆಗಳಲ್ಲಿ ಅವನಿಗೆ ಒತ್ತಾಸೆಯಾಗಿ ನಿಂತು ಅವನ ಶಕ್ತಿಗೆ ತನ್ನ ಶಕ್ತಿಯನ್ನು ಕೂಡಿಸಿಕೊಡಬೇಕು.

ಇವು ಆದರ್ಶ ಮೌಲ್ಯಗಳು ಅನೇಕರು ಕಡ್ಡಾಯವಾಗಿ ಪಾಲಿಸದೇ ಇರಬಹುದಾಗಿದೆ. ಇದರಿಂದಾಗಿ ಹಲವಾರು ದಲಿತ ಜಾತಿಗಳು, ಸಮುದಾಯಗಳು ದೇವದಾಸಿ ಸಂಪ್ರದಾಯವನ್ನು ಒಪ್ಪಿಗೆ ಮಾಡಿಕೊಂಡಿರಬಹುದಾಗಿದೆ. ಬಡತನವಿರುವ ಸಂಸ್ಕೃತಿಯಲ್ಲಿ ಅಂತಹ ಈ ಮೇಲಿನ ನಿಯಮಗಳನ್ನು ಪಾಲಿಸುವುದು ಸಾಧ್ಯವಾಗುವುದಿಲ್ಲ. ಆದಿವಾಸಿಗಳಲ್ಲಿ ಹಾಗೂ ಮಾತೃಪ್ರಧಾನ ಪದ್ಧತಿ ಇರುವ ಸಮುದಾಯಗಳಲ್ಲಿನ ಪರಿಸ್ಥಿತಿಯೇ ಬೇರೆ ಬೇರೆಯಾಗಿರುತ್ತದೆ.

ನಿಯಮಗಳನ್ನು ಮೌಲ್ಯಗಳನ್ನು ಜಾರಿಗೆ ತರುವುದು ಒಂದು ಮಟ್ಟಿಗೆ ನಿಯಂತ್ರಣ ವ್ಯವಸ್ಥೆಯ ಬಲ ಅಥವಾ ದೌರ್ಬಲ್ಯವನ್ನು ಅವಲಂಬಿಸಿರುತ್ತದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ ರಾಜಕೀಯ ಕ್ಷೇತ್ರಗಳಲ್ಲಿ ಪುರುಷರೇ ಪ್ರಧಾನವಾಗಿರುವುದರಿಂದ ಸ್ತ್ರೀಯರ ಸಾಂಪ್ರದಾಯಿಕ ಶೋಷಣೆ ದಿನೇ ದಿನೇ ಹೆಚ್ಚುತ್ತಲಿದೆ. ಕೆಳಜಾತಿಗಳು ಮತ್ತು ವರ್ಗಗಳಲ್ಲಿ ಸಾಮಾನ್ಯವಾಗಿ ರಹಸ್ಯವನ್ನು ಇಟ್ಟುಕೊಳ್ಳಲಾಗುವುದಿಲ್ಲ. ಆದ್ದರಿಂದ ಇತರರ ಅಂದರೆ ಪುರುಷರ ಮಧ್ಯ ಪ್ರವೇಶ ಸಾಕಷ್ಟು ಕಂಡುಬರುತ್ತದೆ. ಹೆಣ್ಣು ಮಕ್ಕಳು ಸಹಜವಾಗಿ ನಾಚಿಕೆಯ ಬಗ್ಗೆ ಸೂಕ್ಷ್ಮ ಪ್ರವೃತ್ತಿಯವರಾಗಿರುತ್ತಾರೆ. ಆದರೆ ಆ ಬಗ್ಗೆ ಅವರು ಏನೂ ಮಾಡದವರಾಗಿರುತ್ತಾರೆ. ಪತಿಯು ಹೆಂಡತಿಯನ್ನು ಹೊಡೆದು, ಬಡಿದು, ಮನೆಯ ಗೌರವ ರಕ್ಷಿಸಲು ಪ್ರಯತ್ನಿಸುತ್ತಾರೆ. ಕುಟುಂಬದೊಳಗೆ ನಡೆಯುವ ಈ ಹಿಂಸಾಕೃತ್ಯ ಎಷ್ಟು ಎಂದು ಅಳತೆ ಮಾಡುವುದು ಸಾಧ್ಯವಿಲ್ಲ.

ಸ್ವಾತಂತ್ರ್ಯ ಬಂದು ಐದು ದಶಕಗಳೂ ಸರಿದಿದ್ದರೂ, ಪದೇ ಪದೇ ನಾವು ಪತ್ರಿಕೆಗಳಲ್ಲಿ ದೇವದಾಸಿ ಪದ್ಧತಿ, ವಧುದಹನ, ವರದಕ್ಷಿಣೆ, ಅನೇಕ ಪದ್ಧತಿಗಳ ಜೊತೆಗೆ ಸಾವುಗಳ ಬಗ್ಗೆ ಓದುತ್ತಿದ್ದೇವೆ. ಸಣ್ಣ ಪ್ರಮಾಣದ ಹಿಂಸೆಗಳು ಸಹ ಕುಟುಂಬದಲ್ಲಿ ಸದಾ ನಡೆಯುತ್ತಲೇ ಇರುತ್ತವೆ. ಹೆಂಡತಿಯ ಮೇಲೆ ಮತ್ತು ಅವಳ ತಂದೆ-ತಾಯಿಯರ ಮೇಲೆ ಅಪವಾದ ನಿಂದೆ ಹೊರಿಸುವುದು, ಹೆಂಡತಿಯನ್ನು ವಿಶ್ರಾಂತಿಯೇ ಇಲ್ಲದೇ ವಿಪರೀತ ಕೆಲಸ ಮಾಡುವಂತೆ ಬಲಾತ್ಕರಿಸುವುದು. ಅವಳಿಗೆ ಮಾನಸಿಕವಾಗಿ ಹಿಂಸಿಸುವುದು ಇಂತಹ ಅನೇಕ ಹಿಂಸೆಗಳಿಗೆ ಬಲಿಯಾಗುವುದು ಸಾಮಾನ್ಯವಾಗಿದೆ.

ಸ್ವಾತಂತ್ರ್ಯ ಬಂದ ನಂತರ ಮಹಿಳೆಯರಿಗೆ ಮತದಾನ ಮಾಡುವ ಹಕ್ಕು ಬಂದಿತು. ಆಸ್ತಿ ಹಕ್ಕಿನ ವಿಷಯದಲ್ಲೂ ಹೆಚ್ಚಿನ ಸುಧಾರಣೆಯಾಯಿತು. ಆದರೆ ಇನ್ನೂ ಹಲವಾರು ಸಮಸ್ಯೆಗಳು ಹಾಗೆಯೇ ಉಳಿದಿವೆ. ಹೆಣ್ಣು ಮಗುವಿನಿಂದ ದುಡಿಸಿಕೊಂಡು ಶೋಷಿಸುವುದು ದೇವಾಲಯಗಳಿಗೆ ಅವರನ್ನು ಜೋಗತಿಯರನ್ನಾಗಿ ಅಥವಾ ದೇವದಾಸಿಯರಾಗಿ ಬಿಟ್ಟು ಬಿಡುವುದು, ಸಾಮಾನ್ಯವಾಗಿ ನಡೆಯುತ್ತಾ ಇದೆ. ಇದರಿಂದ ಲೈಂಗಿಕವಾಗಿ ಶೋಷಿಸುವುದು ಮುಂತಾದವುಗಳಾಗಿವೆ. ಸೂಳೆಗಾರಿಕೆ, ಕುಟುಂಬದಲ್ಲಿ ಹೆಣ್ಣು ಮಕ್ಕಳನ್ನು ಹೀನಾಯವಾಗಿ ನಡೆಸಿಕೊಳ್ಳುವುದು ಮುಂತಾದವುಗಳು ಸಾಮಾಜಿಕ ಪ್ರಜ್ಞೆಯಿಲ್ಲದೇ, ಸಮಾಜ ಕಾರ್ಯದ ಉದ್ದೇಶವಿಲ್ಲದೇ ಕೇವಲ ಶಾಸನ ಮಾಡುವುದು ಕೇವಲ ಪೊಳ್ಳಾಗುತ್ತದೆ, ಈಡೇರದ ಭರವಸೆಯಾಗಿ ಉಳಿಯುತ್ತದೆ.

ಲಿಂಗ ಪಕ್ಷಪಾತದ ಹಲವು ರೂಪಗಳು ಹುಟ್ಟುವುದು ಭಾರತೀಯ ಸಂವಿಧಾನದಲ್ಲಿರುವ ಒಂದು ವೈರುಧ್ಯದಿಂದ, ಅದು ಶಾಸನದ ಎದುರಿಗೆ ಸರ್ವರಿಗೂ ಸಮಾನತೆಯ ಭರವಸೆ ಕೊಡುತ್ತದೆ. ಧರ್ಮ, ಜಾತಿ, ಜನಾಂಗ, ಲಿಂಗ, ಜನ್ಮಸ್ಥಳ, ಇಂತಹ ಯಾವುದೇ ಆಧಾರದ ಮೇಲೆ ಪಕ್ಷಪಾತ ಮಾಡುವುದನ್ನು ನಿಷೇಧಿಸುತ್ತದೆ. ಅದೇ ಸಮಯದಲ್ಲೇ ಸಂವಿಧಾನವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಭರವಸೆಯನ್ನು ಕೊಡುತ್ತದೆ. ಧಾರ್ಮಿಕ ಸ್ವಾತಂತ್ರ್ಯದ ಈ ಅವಕಾಶವು ಮಹಿಳೆಯರಿಗೆ ಸಂವಿಧಾನವು ನೀಡಿರುವ ಸ್ವಾತಂತ್ರ್ಯ ಸಮಾನತೆಗಳನ್ನು ಧರ್ಮದ ಹೆಸರಿನಲ್ಲಿ ಬಹುಮಟ್ಟಿಗೆ ಕಿತ್ತುಕೊಳ್ಳುತ್ತದೆ. ಕುಟುಂಬ ಮತ್ತು ವ್ಯಕ್ತಿ ನಿಯಮಗಳು ಧರ್ಮ ಸಂಹಿತೆಗಳಲ್ಲಿ ಬೇರು ಬಿಟ್ಟಿರುವುದರಿಂದ ಮಹಿಳೆಯರು ಕುಟುಂಬದೊಳಗಾಗಲಿ, ಆಸ್ತಿ-ಪಾಸ್ತಿಗಾಗಲಿ ಸಮಾನ ಹಕ್ಕುಗಳನ್ನು ಹೊಂದಿಲ್ಲ. ಅವರಲ್ಲಿ ಅನೇಕರಿಗೆ ವಿವಾಹಾನಂತರ ತಾನು ಎಲ್ಲಿ ವಾಸ ಮಾಡುವೆನೆಂಬುದೇ ನಿರ್ಧಾರವಾಗಿರುವುದಿಲ್ಲ. ಹಾಗಾಗಿ ಕೆಲವರಿಗೆ ಜೀವನಾಂಶ ದೊರಕುವುದಿಲ್ಲ. ಮತ್ತೇ ಕೆಲವರಿಗೆ ವಿವಾಹ ವಿಚ್ಛೇದನ ಪಡೆಯುವುದರಲ್ಲಿ ತುಂಬ ಕಷ್ಟವಾಗುತ್ತದೆ.

''ಎಲ್ಲರಿಗೂ ಸಮಾನವಾದ ಸಿವಿಲ್ ಕೋಡ್ ಇರಬೇಕೆಂಬ ಕೂಗು ಈಗ ಗಟ್ಟಿಯಾಗಿ ಕೇಳಿಬರುತ್ತದೆ. ಆದರೆ ಸಾಂಪ್ರದಾಯಿಕ ವಲಯದಿಂದ ತೀವ್ರ ವಿರೋಧ, ರಾಜಕೀಯವಾಗಿ ಸ್ಥಾನ ಕಳೆದುಕೊಂಡು ಬಿಡಬಹುದೆಂಬ ಭೀತಿ, ಧಾರ್ಮಿಕ ವಲಯಗಳ ವಿರೋಧ ಕಟ್ಟಿಕೊಳ್ಳುವ ಶಂಕೆ, ಇದರ ಪರಿಣಾಮವಾಗಿ ವೋಟುಬ್ಯಾಂಕ್‌ಗಳ ನಷ್ಟ. ಈ ಅಂಶಗಳು ಸರಕಾರದ ಪ್ರಗತಿಪರ ಶಾಸನಕ್ಕೆ ಅಡೆತಡೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಸಮಾನತೆ ಎನ್ನುವುದು ಮರೀಚಿಕೆಯಾಗಿದೆ''.[೨೮]

೨.೩. ಧಾರ್ಮಿಕ ವ್ಯವಸ್ಥೆ ಮತ್ತು ದೇವದಾಸಿಯರು

ಅನೇಕ ಶತಮಾನಗಳಿಂದಲೂ ಪುರುಷನ ಪ್ರಾಮುಖ್ಯವೇ ಹೆಚ್ಚಾದುದರಿಂದ ಈ ಭಾವನೆ ಬೆಳೆದುಬಂದಿದೆ. ಸ್ತ್ರೀಯರ ವಿಚಾರದಲ್ಲಿರುವ ಅನೇಕ ಭಿನ್ನಾಭಿಪ್ರಾಯಗಳಿಗೆ ಕಾರಣನಾಗಿರುವ ಪುರುಷನು,

[illegible]

[illegible]

[illegible]

[illegible]

[illegible]

[illegible]

ಆದರೂ ಸ್ತ್ರೀಯರಿಗಿಂತಲೂ ತಾನೇ ಮೇಲೆಂಬುದನ್ನು ಸ್ಥಾಪಿಸಿದ್ದಾನೆ. ಪುರೋಹಿತರು, ಆಚಾರ್ಯರು, ಬ್ರಾಹ್ಮಣರು ಅಷ್ಟೇ ಅಲ್ಲ ಈ ದೇಶದ ೪೦೦೦ ಸಾವಿರಜಾತಿ ಜನಾಂಗದಲ್ಲಿದ್ದಾರೆ. ಬ್ರಾಹ್ಮಣ್ಯ ಇಂದು ಎಲ್ಲಾ ಜನಾಂಗದಲ್ಲಿಯೂ ದಾಳಿ ಮಾಡಿದೆ. ಇದರಿಂದ ಜಾತಿ, ಮತ, ಪಂಥ, ಭಾಷೆ, ಪ್ರಾಂತ, ಬಣ್ಣ, ಕುಲಗೋತ್ರಗಳಿಂದ ವಿರೂಪಗೊಂಡಿದೆ ಸಾಮಾಜಿಕ ವ್ಯವಸ್ಥೆ ಅದರ ಫಲವೇ ದೇವದಾಸಿ ಪದ್ಧತಿ ಹುಟ್ಟಿ ಬೆಳೆದು ಬರಲಿಕ್ಕೆ ಕಾರಣವಾಗಿದೆ.

ಅನಾದಿ ಕಾಲದಿಂದಲೂ ಹೆಣ್ಣೆಂದರೆ, ಭೂಮಿಯಂತೆ ಆಸ್ತಿಯಂತೆ, ಭೋಗದ ವಸ್ತುವಂತೆ ಕಾಣುತ್ತಿದ್ದರೂ. ಯಾವಾಗ ಕೆಳವರ್ಗದ ಚೆಲುವು ಯೌವ್ವನ ಮಾಂಸಖಂಡಗಳಿಂದ ತುಂಬಿದ ಹೆಣ್ಣನ್ನು ಕಂಡಾಗ ಈ ಪಿತೃ ಸಮಾಜವು ದೇವರ ಹೆಸರಿನಲ್ಲಿ ಶೋಷಣೆ ಮಾಡಲಾರಂಭಿಸಿದರು. ಗ್ರಾಮದಲ್ಲಿ ಗೌಡ ಇಲ್ಲವೇ ಕುಲಕರ್ಣಿಯು ಮುಖಂಡನಾಗಿರುವವನು. ಇವನು ಗ್ರಾಮ ದೇವತೆಯ ಜಾತ್ರೆಯ ಎಲ್ಲ ಕೆಲಸಗಳ ನಾಯಕನಾಗಿರುವನು. ಸರಕಾರದ ಅಧಿಕಾರ ಹೊಂದಿರುವ ಗೌಡ ಇಲ್ಲವೇ ಕುಲಕರ್ಣಿಯ ಪ್ರೀತಿಗೆ ಪಾತ್ರರಾದ ಗ್ರಾಮದ ಜನತೆಯು ದೇವರಿಗೆ ಬಿಟ್ಟಿರುವ ಹೆಣ್ಣನ್ನು ಇವರಿಗೆ ಒಪ್ಪಿಸುವರು. ದೇವದಾಸಿ ಪದ್ಧತಿಗೆ ಬಿಡುವ ಕಾರಣಗಳೆಂದರೆ ಬಲತ್ಕಾರ, ಅಜ್ಞಾನ, ಗಂಡ ಸಾಯುವುದು, ರೋಗಗಳು ಆದಾಗ ಹೆಚ್ಚಾಗಿ ದೇವದಾಸಿಯರನ್ನು ದೇವರಿಗೆ ಅರ್ಪಣೆ ಮಾಡುತ್ತಿದ್ದರು.

ಈ ಎಲ್ಲಾ ಕಾರಣಗಳು ಸತ್ಯವಾದರೂ ಪ್ರತಿ ಕಾಲದಲ್ಲಿ ಈ ಪದ್ಧತಿಯು ಬೆಳೆದುಬರಲಿಕ್ಕೆ ಪುರೋಹಿತಶಾಹಿಯೇ ಮೂಲ ಕಾರಣವೆಂದು ಗೊತ್ತಾಗುತ್ತದೆ.

೧. ದೇವರು ಮತ್ತು ಕಾಮ : ಪ್ರಪಂಚದ ದೇವರುಗಳು ಹಲವಾರು ರೀತಿಯಲ್ಲಿ ಇದ್ದರೆ ನಮ್ಮ ಪೂಜಾರಿ ಜಾರಿಗೆ ಪಡಿಸಿದ ದೇವರೇ ಇನ್ನೊಂದು ರೀತಿಯಲ್ಲಿ ಇದ್ದಾನೆ. ದೈಹಿಕ ಸುಖವನ್ನು ಪಡೆದುಕೊಳ್ಳುವುದಕ್ಕಾಗಿ ದೇವರಿಗೂ ಉಪಪತ್ನಿಯನ್ನಾಗಿ ಮಾಡಿಕೊಟ್ಟಿದ್ದಾನೆ. ಯಾವಾಗ ಈ ವ್ಯವಸ್ಥೆಯು ಆರಂಭವಾಯಿತೋ ಗುಡಿಗೆ ಬರುವ ಯಾತ್ರಾರ್ಥಿಗಳಿಗೆ ಸುಖ ನೀಡುವುದು ಅವಳ ಕರ್ತವ್ಯ ಎಂದು ಅಲಿಖಿತ ಕಾನೂನು ಮಾಡಲಾಯಿತು. ಇದು ಹೀನ ಕಾರ್ಯ ಅಲ್ಲ ಎಂಬಂತೆ ಈ ವೈದಿಕ ಮನಸ್ಸು ಸೃಷ್ಟಿ ಮಾಡಿತು.

೨. ಧರ್ಮ ಮತ್ತು ಕಾಮ : ಈ ಪದ್ಧತಿಗೆ ಧಾರ್ಮಿಕ ಒಪ್ಪಿಗೆಯನ್ನು ಪಡೆದುಕೊಂಡು ಈ ಸೇವೆ ಸಲ್ಲಿಸುವುದು ಪವಿತ್ರ ಕಾರ್ಯ, ಸೇವೆ ಅಂತ ಪ್ರಚಾರವನ್ನು ಮಾಡಿದರು. ಇದನ್ನು ಶಿಲ್ಪದ ಮೂಲಕ ಕೈಗೊಳ್ಳಲಾಯಿತು. ಗುರುತು ಪ್ರಾಚೀನ ದೇವಾಲಯಗಳಲ್ಲಿ ಈ ರೀತಿಯ ಸಂಭೋಗ ಕ್ರಿಯೆಯಲ್ಲಿ ತೊಡಗಿದ ನಗ್ನ ಚಿತ್ರಗಳನ್ನು ಸಾಕಷ್ಟು ಕಾಣಬಹುದಾಗಿದೆ.

೩. ಪೂಜಾರಿ ಮತ್ತು ಕಾಮ : ದೇವದಾಸಿಯರು ದೇವರ ಸೇವೆ ಮಾಡಿಕೊಂಡು ಪೂಜಾರಿಗಳಂತೆ ಗೌರವ ಸ್ಥಾನವನ್ನು ಪಡೆದುಕೊಂಡಿದ್ದ ಈ ಜನರನ್ನು ಬೀದಿ ಬಸವಿಯನ್ನಾಗಿ ಮಾಡಲು ಈ ವೈದಿಕ ಪೂಜಾರಿಗಳು

ಕಾರಣರಾಗಿದ್ದಾರೆ. ಇವರ ವಾದ ನನಗೆ ಒಂದು ವೇಳೆ ನೀವು ಸುಖ ಕೊಟ್ಟರೆ ದೇವರಿಗೆ ಸುಖ ಕೊಟ್ಟಂತೆ ಆಗುವುದು ಎಂದು ಈ ವೈದಿಕ ಪೂಜಾರಿಯು ಮಂಡಿಸಿದ್ದನು.

೪. ರಾಜ ಮತ್ತು ಕಾಮ : ದೇವಾಲಯಗಳನ್ನು ನಿರ್ಮಾಣ ಮಾಡುವವನು, ಪೂಜಾರಿಯ ಹೊಟ್ಟೆ ಬಟ್ಟೆ ನೋಡಿಕೊಳ್ಳುವವನು, ಬಸವಿಯರ ಜೀವನ ಬದುಕು ನಡೆಸುವವನು ರಾಜನೇ ಪ್ರಮುಖ ವ್ಯಕ್ತಿ ಆಗಿದ್ದನು. ವೈದಿಕರ ಕುತಂತ್ರದಿಂದಾಗಿ ದೇವದಾಸಿಯರು ರಾಜನ ಹಾಸಿಗೆಯನ್ನು ಹಿಡಿಯಬೇಕಾಯಿತು.

ದೇವರ ಸಣ್ಣ ಪ್ರತಿನಿಧಿಗಳಾದ ರಾಜನ ಮಾಂಡಲಿಕರು, ಸಾಮಂತರು, ಸುಭೇದಾರರು, ಸರದಾರರು, ಪಾಳೆಗಾರರಿಗೂ ಸುಖ ನೀಡಿದರೆ ತಪ್ಪಿಲ್ಲವೆಂದು ಪೂಜಾರಿ ಹೇಳಿದರು. ಇದರಿಂದ ಈ ಪೂಜಾರಿಗಳೇ ಆರ್ಥಿಕ ಲಾಭವನ್ನು ಪಡೆದುಕೊಂಡು ಒಟ್ಟಾರೆಯಾಗಿ ದೇವದಾಸಿ ಇವರೆಲ್ಲರಿಗೂ ಸುಖದ ವಸ್ತುವಾದಳು.

೫. ಆಧುನಿಕ ಕಾಲದ ಉಳ್ಳವರು ಮತ್ತು ಕಾಮ : ಸಂಪತ್ತಿನ ಅಧಿಕಾರ ಸುಖದ ಕಡೆಯ ಸಲುವಾಗಿ ದೇವದಾಸಿಯರನ್ನು ಪೂಜಾರಿಗಳು ಆರ್ಥಿಕ ಆಮಿಷಕ್ಕಾಗಿ ಗೌಡ, ಕುಲಕರ್ಣಿ, ಸಾಹುಕಾರ, ಶ್ರೀಮಂತರ ದಾಸರಾಗಿ ಈ ಕಾಲದಲ್ಲಿಯೂ ಸಹ ಇಂತಹ ಪದ್ಧತಿಯು ಬೆಳೆದು ಬರಲಿಕ್ಕೆ ಪ್ರಮುಖ ಕಾರಣವಾಯಿತು.

ಪುರೋಹಿತರು, ಆಚಾರ್ಯರು, ಪೀಠಾಧಿಪತಿಗಳು, ಸ್ವಾಮಿಗಳು, ಜಗದ್ಗುರುಗಳು, ದೇವರ ಧರ್ಮಗಳ ಹೆಸರಿನಲ್ಲಿ ಸಾಕಷ್ಟು ಕಪಟ ನಾಟಕಗಳಿವೆ. ಒಂದು ಕಡೆಗೆ ದೇವರು ಸರ್ವಶಕ್ತ ಶಿಷ್ಟ ಜನೋದ್ಧಾರಕ ಎಂದು ಹೇಳಿ ಜನರನ್ನು ಶೋಷಣೆ ಮಾಡುವುದು. ಇಲ್ಲದ ಕಥೆ ಕಟ್ಟಿ ಮುಗ್ಧ ಜನರ ಸಮೂಹವನ್ನು ಕೊಳ್ಳೆ ಹೊಡೆಯುವುದು. ದೇವರ ಹೆಸರಿನಲ್ಲಿಯೇ ತಮ್ಮ ಹೊಟ್ಟೆ ಪಾಡಿಗಾಗಿ ಹಲವಾರು ವೇಷಗಳನ್ನು ಧರಿಸುವುದು, ದೇವಾಲಯದ ಪೂಜಾರಿಗಳು ತಮ್ಮ ಬದುಕಿನಲ್ಲಿ ನಿತ್ಯ ಹೊಸ ಹೊಸ ದೇವರುಗಳನ್ನು ಸೃಷ್ಟಿ ಮಾಡುವುದು. ದೇವರ ಧರ್ಮಗಳ ಆಶ್ರಯದಲ್ಲಿ ತಪ್ಪು ಮಾಡಿ ಉಳಿದುಕೊಳ್ಳುವುದು. ಒಟ್ಟಾರೆಯಾಗಿ ಪಿತೃಪ್ರಧಾನತೆಯು ದೇವದಾಸಿ ಪದ್ಧತಿಯು ಬೆಳೆದು ಬರಲಿಕ್ಕೆ ಸಾಕಷ್ಟು ಪ್ರಭಾವ ಬೀರಿದೆ.

ಜನರು ಧರ್ಮ ಪದ್ಧತಿ ಬಿಟ್ಟಿದ್ದರಿಂದಲೇ ಬರಗಾಲ, ಕಾಟ ಬರುವುದೆಂದು ಅಪಚಾರ ಮಾಡುವುದು. ಈ ಪದ್ಧತಿಯು ಆಕರ್ಷಣೀಯವಾಗಿರಲು, ಗೌರವ ಭಾವನೆ ತರುವುದಕ್ಕಾಗಿ, ಮೇಲ್ವರ್ಗದ ಜನರು ಹೆಚ್ಚು-ಹೆಚ್ಚು ಈ ಬಗೆಯ ಸೂಕ್ತ ಗೌರವಗಳನ್ನು ನೀಡುತ್ತಿದ್ದರು. ಪೂಜಾರಿಗಳು, ಕ್ಷತ್ರಿಯರು ಶೆಟ್ಟಿ ಸಾಹುಕಾರರು ವೈಶ್ಯರು ಹಿಂದುಳಿದ ವರ್ಗದವರಾದ ಶೂದ್ರರ ರೂಪದಲ್ಲಿ ಹೊಲೆ ಮಾದಿಗರು ಕೆಲಸವನ್ನು ಮಾಡಿಸಿಕೊಂಡು ಈ ಪದ್ಧತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುತ್ತಾರೆ. ಕೆಳಜಾತಿಯವರನ್ನು ದುಡಿಸಿಕೊಳ್ಳುವುದು ಅವರ ಅಧಿಕಾರ, ಕರ್ತವ್ಯವೆಂದು ಈ ಮೇಲ್ಜಾತಿಯವರ ಪ್ರಮುಖ ಆಶಯವಾಗಿದೆ.

[illegible]

[illegible]

[illegible]

೨.೩.೧. ದೇವದಾಸಿಯರನ್ನು ಈ ಸ್ಥಿತಿಗೆ ಇಳಿಸಿದವರು[೨೯]

ಕ್ರ.ಸಂ.	ವರ್ಣಾಶ್ರಮದ ಜನ	ಸ್ಥಳ	ಬಲಿಯಾದವಳು	ಸ್ವರೂಪ
೧.	ಬ್ರಾಹ್ಮಣ : ಪೂಜಾರಿ	ಮಹಾದೇವಾಲಯದಲ್ಲಿ	ದೇವದಾಸಿ	ದೇವ ನರ್ತಕಿ, ಬಡ ಕ್ಷತ್ರಿಯರು
೨.	ಕ್ಷತ್ರಿಯ : ರಾಜ	ರಾಜಸ್ಥಾನದಲ್ಲಿ	ರಾಜದಾಸಿ,	ಬಡವೈಶ್ಯರು ರಾಜ ನರ್ತಕಿ
೩.	ವೈಶ್ಯ : ವ್ಯಾಪಾರಿ	ನಗರ ಪಟ್ಟಣಗಳಲ್ಲಿ	ಪಾತ್ರದವರು-ಬಡಶೂದ್ರರು	ಹಾಡು ಮತ್ತು ನೃತ್ಯದವರು
೪.	ಶೂದ್ರ : ಹಳ್ಳಿ ಮುಖಂಡರು	ಹಳ್ಳಿಯಲ್ಲಿ	ಬಸವಿಯರು ಬಡಶೂದ್ರರು	ಪುರುಷ ದೇವತೆಗಳ ಆರಾಧಕರು
೫.	ಪಂಚಮರು	ಹಳ್ಳಿಯಲ್ಲಿ	ಜೋಗತಿಯರು ಬಸವಿಯರು ಎಲ್ಲ ಪಂಚಮರು	ಸಪ್ತಮಾತೃಕೆಯರ ಆರಾಧಕರು ಬಯಲಲ್ಲಿ ಪ್ರವೇಶ

೨.೩.೩. ದೇವದಾಸಿಯರ ಬದುಕಿನ ಪ್ರಮುಖ ಘಟ್ಟಗಳು[೩೦]

ಕ್ರ. ಸಂ.	ಕಾಲಮಾನ ಮತ್ತು ದೇವತೆ	ಯಾವ ಸಂಸ್ಕೃತಿ	ಸಮಯ ಮತ್ತು ಪದನಾಮ	ಯಾರಿಗೆ ಬಲಿ
೧.	ದ್ರಾವಿಡರ ಕಾಲ ಮಾತೃದೇವತೆ ಕ್ರಿ.ಪೂ.೨೦ ರಿಂದ ೧೨ರವರೆಗೆ	ಹರಪ್ಪ ಮೊಹೆಂಜೋದಾರೋ ಸಂಸ್ಕೃತಿ ಬೀಜ ಮೊಳೆತದ್ದು	ಅರುಣೋದಯ-ದೇವದಾಸಿ ಪೂಜಾರಿಣಿ	ಕೇವಲ ದೇವರಿಗೆ ಸೇವೆ
೨.	ಆರ್ಯರ ಕಾಲ ಪುರುಷ ದೇವತೆ ಉಪಾಸನೆ-ಕ್ರಿ.ಪೂ.೧೨ ರಿಂದ ಕ್ರಿ.ಶ.೩ರವರೆಗೆ	ವೈದಿಕ ಸಂಸ್ಕೃತಿ-ತಾನು ದೇವರ ಸಸಿಯಾದದ್ದು ಪ್ರತಿನಿಧಿ	ಸೂರ್ಯೋದಯ-ದೇವದಾಸಿ	ಕೇವಲ ಪೂಜಾರಿಗೆ ಬಲಿ
೩.	ದೇಶಿ ಅರಸರ ಕಾಲ ಸ್ತ್ರೀ-ಪುರುಷ ದೇವತೆ ಉಪಾಸನೆ-ಕ್ರಿ.ಶ.೪ ರಿಂದ ೧೪ರವರೆಗೆ	ಐತಿಹಾಸಿಕ ಸಂಸ್ಕೃತಿ ಪ್ರತ್ಯಕ್ಷ ಮರವಾದದ್ದು -ರಾಜದೇವತಾ	ಮಧ್ಯಾಹ್ನ-ಉನ್ನತ ದೇವದಾಸಿ, ರಾಜದಾಸಿ	ರಾಜರಿಗೆ - ಪೂಜಾರಿಗೆ ಬಲಿ
೪.	ಮುಸ್ಲಿಂ ಅರಸರ ಕಾಲ ಸ್ತ್ರೀ-ಪುರುಷ ದೇವತೆ ಉಪಾಸನಾ ಕ್ರಿ.ಶ.೧೪ ರಿಂದ ೧೭ರವರೆಗೆ	ಐಷಾರಾಮ ಸಂಸ್ಕೃತಿ; ದಾಳಿಯಿಂದ ಹೊಟ್ಟೆ ಪಾಡಿಗಾಗಿ ಹುಳ ಹಿಡಿದದ್ದು ಸುಖಪಟ್ಟಿದ್ದು ದೌರ್ಜನ್ಯ ದಬ್ಬಾಳಿಕೆಯಿಂದ	ಸಂಜೆ ಅವನತಿ ಪಾತ್ರದವರು	ಅರಸರಿಗೆ, ಸಾಮಂತರಿಗೆ ಬಲಿ
೫.	ಬ್ರಿಟಿಷರ ಕಾಲ ಸ್ತ್ರೀ ಪುರುಷರ ದೇವತೆ ಉಪಾಸನೆ ಕ್ರಿ.ಶ.೧೭ ರಿಂದ ೧೯೪೭ರವರೆಗೆ	ಬಿಗಿ ಆಡಳಿತದ ಸಂಸ್ಕೃತಿ ಹೊಟ್ಟೆ ಪಾಡಿಗಾಗಿ ಗಿಡ ಒಣಗಿದ್ದು ನೋಡುತ್ತಾ ಕುಳಿತದ್ದು ಅಧಿಕಾರಿಗಳಿಂದ	ರಾತ್ರಿ ನಾಚ್‌ಗರ್ಲ್ ಬಸವಿಯರು ಜೋಗತಿಯರು	ಅರಸರಿಗೆ ಸಮಂತರಿಗೆ ಮುಖಂಡರಿಗೆ ಬಲಿ
೬.	ಸ್ವಾತಂತ್ರ್ಯದ ಕಾಲ ಸ್ತ್ರೀ ಪುರುಷರ ದೇವತೆ ಉಪಾಸನೆ	ಗಾಂಧಿ ಸಂಸ್ಕೃತಿ ಹೊಟ್ಟೆ ಪಾಡಿಗಾಗಿ ಮುರಿದ ನೆಲಕ್ಕೆ	ಅರುಣೋದಯ ಸುಧಾರಣೆ	ಸಾಮಾನ್ಯರಿಗೆ ಬಲಿ

	೧೯೪೭ ರಿಂದ ೧೯೭೦ರವರೆಗೆ	ಬಿದ್ದದ್ದು ಎತ್ತುವ ವಿಚಾರ ಗಾಂಧಿ ವಾದಿಗಳಿಂದ	ಬಸವಿಯರು ಜೋಗತಿಯರು	
೭.	ಸ್ವಾತಂತ್ರೋತ್ತರದ ಕಾಲ ಇಲ್ಲಿಯವರೆಗೆ ೧೯೭೦ ರಿಂದ ೨೦೦೦ರ ತನಕ	ಸಮಾಜವಾದಿ ಸಂಸ್ಕೃತಿ ಹೊಸ ಮೊಳಕೆ ಒಡೆದದ್ದು ದಲಿತ ಸಂಘರ್ಷ ಸಮಿತಿಯಿಂದ ಕ್ರಾಂತಿಕಾರಿ ಸಂಘ ಸಂಸ್ಥೆಗಳಿಂದ ಸರಕಾರದ ಕಾನೂನಿಂದ	ಮಧ್ಯಾಹ್ನ ಸುಧಾರಣೆ ಬಸವಿಯರು ಜೋಗತಿಯರು	ಸಾಮಾನ್ಯರಿಗೆ ಬಲಿ

ಅಡಿಟಿಪ್ಪಣಿಗಳು

೧. ಶಂಕರರಾವ್ ಚ.ನ., **ಸಮಾಜಶಾಸ್ತ್ರ ಕಿರು ವಿಶ್ವಕೋಶ**, ಜೈಭಾರತ ಪ್ರಕಾಶನ, ಮಂಗಳೂರು ೨೦೦೧, ಪು.೯೮೧-೯೮೨

೨. ಡಾ.ಶೈಲಜ ಹಿರೇಮಠ, **ಪಾತರದವರು**, ಕ.ವಿ.ಹಂಪಿ, ೧೯೯೯, ಪು.೧೪

೩. ಪ್ರೊ. ವಾದಿ ರಾಜ ಭಟ್ಟ, ಕನರಾಡಿ, **ಹೆಸರಾದ ಪಟ್ಟಣ ಬಸ್ರೂರು : ಒಂದು ಅಧ್ಯಯನ**, ೧೯೯೭, ಪು.೮೨

೪. ಡಾ. ಚಿದಾನಂದ ಮೂರ್ತಿ, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈ.ವಿ. ೧೯೬೬, ಮೈಸೂರು, ಪು.೬೪

೫. ಡಾ. ಶೈಲಜ ಹಿರೇಮಠ, **ಪಾತರದವರು**, ೧೯೯೯, ಪು.೧೮

೬. ಪುತ್ತಿ ವಸಂತಕುಮಾರ, **ಬಸ್ರೂರಿನ ದೇವದಾಸಿಯರು**, ಕ.ವಿ.ವಿ.ಹಂಪಿ, ವಿದ್ಯಾರಣ್ಯ, ೨೦೦೨, ಪು.೨೪

೭. ಡಾ. ಸಿದ್ಧಲಿಂಗಯ್ಯ, **ಗ್ರಾಮದೇವತೆಗಳು**, ಮೂಲಭಾರತಿ ಪ್ರಕಾಶನ, ಬೆಂಗಳೂರು ೧೯೯೨, ಪು.೨೦

೮. ಚಂದ್ರಶೇಖರ್ ಕಂಬಾರ್(ಸಂ), **ಕನ್ನಡ ಜಾನಪದ ವಿಶ್ವಕೋಶ**, ಪ್ರಸಾರಾಂಗ, ಮೈ.ವಿ.ವಿ. ಮೈಸೂರು, ೧೯೮೫, ಪು.೨೨

೯. **ಶ್ರೀಕಂಠಶಾಸ್ತ್ರಿ**, **ಭಾರತೀಯ ಸಂಸ್ಕೃತಿ**, ಮೈ.ವಿ.ವಿ., ಮೈಸೂರು, ೧೯೫೪, ಪು.೧೭೭

೧೦. ಡಾ. ಜೋಗನ ಶಂಕರ್, **ದೇವದಾಸಿ ಸಂಪ್ರದಾಯ**, ವಿಮೋಚನ ಪ್ರಕಾಶನ ಅಥಣಿ, ೧೯೯೩, ಪು.೫೪-೫೫

೧೧. ಪುತ್ತಿ ವಸಂತ ಕುಮಾರ, **ಪೂರ್ವೋಕ್ತ**, ೨೦೦೨, ಪು.೨೬

೧೨. ಡಾ.ಚಿದಾನಂದ ಮೂರ್ತಿ, **ಪೂರ್ವೋಕ್ತ**, ೧೯೬೬, ಪು.೧೮೧

೧೩. ಜೋಗನ ಶಂಕರ್, **ಪೂರ್ವೋಕ್ತ**, ೧೯೯೩, ಪು.೨೨

೧೪. ಚಿದಾನಂದ ಮೂರ್ತಿ, **ಪೂರ್ವೋಕ್ತ**, ೧೯೬೬, ಪು.೧೭೦

೧೫. ಪುತ್ತಿ ವಸಂತ ಕುಮಾರ್, **ಪೂರ್ವೋಕ್ತ**, ೨೦೦೨, ಪು.೨೭

೧೬. ಜಿ.ಎಸ್.ದೀಕ್ಷಿತ್, **ಶ್ರೀಕೃಷ್ಣ ದೇವರಾಯನ ಜೀವನ ಸಾಧನೆಗಳು**, ಮೈಸೂರು, ೧೯೯೭, ಪು.೩೦

೧೭. ಶ್ರೀಕಂಠಶಾಸ್ತ್ರೀ ಎಸ್ ., ಭಾರತೀಯ ಸಂಸ್ಕೃತಿ, ಪ್ರಸಾರಾಂಗ, ಮೈ.ವಿ.ವಿ., ಮೈಸೂರು, ೧೯೫೪, ಪು.೨೬

೧೮. ಕೃಷ್ಣರಾವ್ ಎಂ.ವಿ. ಮತ್ತು ಎಂ. ಕೇಶವಭಟ್ಟ, **ಕರ್ನಾಟಕ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ, ೧೯೭೦, ಪು.೯೫

೧೯. ಅದೇ, ಪು.೯೫-೯೬

೨೦. ಜೋಗನ್ ಶಂಕರ್, **ಪೂರ್ವೋಕ್ತ,** ೧೯೯೩, ಪು.೮೯

೨೧. ವೆಂಕಟೇಶ್ ಕೆ.ಜಿ., **ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಕನ್ನಡ ಸಾ.ಪ.ಬೆಂಗಳೂರು, ೧೯೯೬, ಪು.೨೧೨

೨೨. ಪುತ್ತಿ ವಸಂತಕುಮಾರ, **ಪೂರ್ವೋಕ್ತ,** ೨೦೦೩, ಪು.೨೮

೨೩. ಶಂಕರರಾವ್ ಚ.ನ., **ಸಮಾಜಶಾಸ್ತ್ರದ ಮೂಲ ತತ್ವಗಳು,** ಜೈ-ಭಾರತ ಪ್ರಕಾಶನ, ಮಂಗಳೂರು, ೨೦೦೪, ಪು.೨೦೫-೨೦೬

೨೪. ಭಗವತಿ ಶರಣ ಉಪಧ್ಯಾಯ, **ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ,** ೧೯೮೭, ಪು.೩೧೬

೨೫. ಚಂದ್ರಶೇಖರ್ ಕಂಬಾರ, **ಜೋಕುಮಾರ ಸ್ವಾಮಿ ನಾಟಕ,** ಪು.೧೮

೨೬. ಚೆನ್ನಣ್ಣ ವಾಲೀಕಾರ, **ಟೊಂಕದ ಕೆಳಗಿನ ಜನ,** ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೭೬, ಪು.೨೬

೨೭. ಚೆನ್ನಣ್ಣ ವಾಲೀಕಾರ, **ಕರ್ನಾಟಕ ದೇವದಾಸಿಯರ ಸಮಸ್ಯೆಗಳ ಸಮಗ್ರ ಅಧ್ಯಯನ,** ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೨೦೦೧, ಪು.೪೬

೨೮. ಶಂಕರರಾವ್ ಚ.ನ., **ಭಾರತದ ಸಾಮಾಜಿಕ ಸಮಸ್ಯೆಗಳು,** ಜೈ-ಭಾರತ ಪ್ರಕಾಶನ ಮಂಗಳೂರು, ಪು.೯

೨೯. ಚೆನ್ನಣ್ಣ ವಾಲೀಕಾರ, **ಪೂರ್ವೋಕ್ತ,** ೨೦೦೧, ಪು.೨೫೦

೩೦. ಅದೇ, ಪು.೩೫೨ ಮತ್ತು ೩೫೪

ಅಧ್ಯಾಯ ೩

ಬಿಸರಳ್ಳಿ ದೇವದಾಸಿ ಪದ್ಧತಿಯ ವಿಶ್ಲೇಷಣೆ

೩.೧. ಬಿಸರಳ್ಳಿ ಗ್ರಾಮ

೩.೨. ಮರುಳ ಸಿದ್ದೇಶ್ವರ ಮಠದ ದೇವದಾಸಿ ಪದ್ಧತಿಯ ಹಿನ್ನೆಲೆ

೩.೩. ಬಿಸರಳ್ಳಿಯ ದೇವದಾಸಿ ಸಂಪ್ರದಾಯದ ಪರಿಚಯ

೩.೪. ದೇವದಾಸಿಯರ ಊರೊಟ್ಟಿನ ಸಂಬಂಧ

೩

ಬಿಸರಳ್ಳಿಯ ದೇವದಾಸಿ ಪದ್ಧತಿಯ ವಿಶ್ಲೇಷಣೆ

೩.೧. ಬಿಸರಳ್ಳಿ ಗ್ರಾಮ

ಅಧ್ಯಯನಕ್ಕೆ ಒಳಪಡಿಸಲಿರುವ ಗ್ರಾಮದ ಭೌಗೋಳಿಕ ಪರಿಸರ, ಶೈಕ್ಷಣಿಕ ಮತ್ತು ಧಾರ್ಮಿಕ ಹಿನ್ನೆಲೆಯ ವಿವರಣೆ ಬಹುಮುಖ್ಯವಾದುದು. ಬಹಳಷ್ಟು ಸಲ ಭೌಗೋಳಿಕ ಪರಿಸರವೇ ಗ್ರಾಮೀಣ ಜೀವನ ಸ್ವರೂಪವನ್ನು ನಿರ್ಧರಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಒಂದು ಜನಾಂಗದ ಜೀವನ ಕ್ರಮ, ಆಹಾರ, ಉಡುಗೆ, ತೊಡುಗೆಗಳು ಆ ಭಾಗದ ಭೌಗೋಳಿಕ ಪರಿಸರವನ್ನು ಅವಲಂಬಿಸಿರುತ್ತದೆ. ಊರಿನ ಮೇರೆಗಳು, ಕೇರಿಗಳು, ದಾರಿಗಳು, ಊರಿನ ರಚನೆಯನ್ನು ತಿಳಿಸುತ್ತವೆ. ಧಾರ್ಮಿಕ ಹಿನ್ನೆಲೆಯು ಸಹ ಗ್ರಾಮವು ಐತಿಹಾಸಿಕವಾಗಿ ಪಡೆದ ಮಹತ್ವನ್ನು ತಿಳಿಸುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಬಿಸರಳ್ಳಿಯ ಭೌಗೋಳಿಕ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಯನ್ನು ವಿವರಿಸಲಾಗಿದೆ.

೩.೧.೧. ಭೌಗೋಳಿಕ ಪರಿಚಯ

ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಅಳವಂಡಿಯ ಹೋಬಳಿಯಲ್ಲಿ ಬರುವ ಒಂದು ಹಿರಿಯ ಗ್ರಾಮ 'ಬಿಸರಳ್ಳಿ' ಆಗಿದೆ. ಈ ಊರಿನ ಪೂರ್ವಕ್ಕೆ ೨ ಕಿ.ಮೀ. ಅಂತರದಲ್ಲಿ ಹಿರೇಹಳ್ಳ ಹರಿಯುತ್ತಿದ್ದು, ತುಂಗಭದ್ರ ಹಿನ್ನೀರಿನಿಂದ ಕೂಡಿದ್ದಾಗಿದೆ. ಈ ಊರಿನ 'ಪೂರ್ವಕ್ಕೆ' 'ಹಿರೇಸಿಂದೋಗಿ' ಗ್ರಾಮ. 'ಪಶ್ಚಿಮಕ್ಕೆ' ಅಳವಂಡಿ ಹೋಬಳಿ, 'ದಕ್ಷಿಣಕ್ಕೆ' ಕಾತರಕಿ ಗುಡ್ಲಾನೂರು, 'ಉತ್ತರಕ್ಕೆ' ೧೦ ಕಿ.ಮೀ. ಅಂತರದಲ್ಲಿ ಹಲಗೇರಿ ಗ್ರಾಮವಿದೆ. 'ಬಿಸರಳ್ಳಿ' ಎಂಬ ಗ್ರಾಮಕ್ಕೆ ಮೊದಲು 'ಬಸವನ ಹಳ್ಳಿ' ಮತ್ತು 'ಬೆಸ್ತವಳ್ಳಿ' ಎಂದು ಕರೆಯುತ್ತಿದ್ದರು.

ಬಿಸರಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ ಸುಮಾರು ೧೦೦೦ ಎಕ್ರೆ. ೧೯೯೧ರ ಜನಗಣತಿಯ ಪ್ರಕಾರ ಇಲ್ಲಿನ ಒಟ್ಟು ಜನಸಂಖ್ಯೆ ೫೦೦೦ ಅಂದಾಜಿಸಲಾಗಿದೆ. ಜನರ ಆಡುವ ಭಾಷೆ ಕನ್ನಡವಾಗಿದೆ. 'ಬಿಸರಳ್ಳಿ' ಹಿಂದೆ ಸುವ್ಯವಸ್ಥಿತವಾದ ಒಂದು ಗ್ರಾಮವಾಗಿತ್ತು. ೨೫ ವರ್ಷಗಳ ಹಿಂದೆ ೧೦೦ ನೀರಾವರಿ ಬಾವಿಗಳು, ೧೦೦ ನೀರಾವರಿ ಪಂಪುಸೆಟ್ಟುಗಳು ಇದ್ದವು. ಹಾಗೂ ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿತ್ತು.

[illegible]

[illegible]

[illegible]

[illegible]

[illegible]

[illegible]

[illegible]

ಬೇಸಿಗೆಗೆ ಅತಿ ಬಿಸಿಲನ್ನು, ಚಳಿಗಾಲದಲ್ಲಿ ಅತಿಚಳಿಯನ್ನು, ಸಾಮಾನ್ಯ ಮಳೆಗಾಲದಲ್ಲಿ ಸಾಮಾನ್ಯ ಮಳೆಯನ್ನು ಹೊಂದಿರುತ್ತದೆ. ಸಾಮಾನ್ಯ ಬೆಳೆಗಳು ಯಾವುವೆಂದರೆ, ಜೋಳ, ಸಜ್ಜೆ, ನವಣಿ, ಹುರಳಿ, ಶೇಂಗಾ, ಸೂರ್ಯಪಾನ ಹಾಗೂ ಅಕ್ಕಡಿ ಕಾಳು, ಹೆಸರು, ಮಡಿಕೆ, ತೊಗರಿ, ಅಲಸಂದೆ, ಹುಳಿಗಡಲೆಯನ್ನು ಬೆಳೆಯುತ್ತಾರೆ. ನೀರಾವರಿಯಲ್ಲಿ ಮೆಕ್ಕೆಜೋಳ, ಸೂರ್ಯಪಾನ, ಶೇಂಗಾ ಬೆಳೆಯುತ್ತಾರೆ. ಇಲ್ಲಿಯ ಮುಖ್ಯ ಆರ್ಥಿಕ ಬೆಳೆಗಳು ಯಾವುವುವೆಂದರೆ, ಹಸಿ ಮೆಣಸಿನಕಾಯಿ, ಮೆಕ್ಕೆಜೋಳ, ಸೂರ್ಯಪಾನ ಬೆಳೆಯುತ್ತಾರೆ. ಕಳೆದ ೨೫ ವರ್ಷಗಳಿಂದ ಹಿಂದೆ ಜವಾರಿ ಹತ್ತಿಯನ್ನು ಹಾಗೂ ವರಲಕ್ಷ್ಮಿ ಡಿಸಿಎಚ್ ಹತ್ತಿ ಬೆಳೆದು ದಾಖಲೆ ಮಾಡಿತ್ತು. ಉತ್ತಮ ಬೆಳೆ ತೆಗೆದು ಪ್ರಸಿದ್ಧವಾದ ಕೃಷಿಕರ ಗ್ರಾಮವಾಗಿತ್ತು.

೧೯೮೩ರಲ್ಲಿ ಮಂಡಲ ಪಂಚಾಯಿತಿಯನ್ನು ಹೊಂದಿತ್ತು. ಇತ್ತೀಚಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಯನ್ನು ಹೊಂದಿದೆ. ಈಗಿನ ಸರಾಸರಿ ಒಟ್ಟು ಜನಸಂಖ್ಯೆ ೭೦೦೦ ಇದೆ. ಬಿಸರಳ್ಳಿ ಗ್ರಾಮ ಪಂಚಾಯಿತಿಗೆ ಒಟ್ಟು ೩ ಹಳ್ಳಿಗಳು ಸೇರುತ್ತವೆ. ಅವುಗಳೆಂದರೆ ೧. ಬಿಕನಳ್ಳಿ, ೨. ಮೈನಳ್ಳಿ, ೩. ಬಿಸರಳ್ಳಿ. ಈ ೩ ಹಳ್ಳಿಗಳಿಗೆ ಬಿಸರಳ್ಳಿಯೇ ಮುಖ್ಯ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಕಳೆದ ಶತಮಾನದಿಂದ ಈಗಲೂ ಸಹ 'ಬುಧವಾರ' ದಿವಸದಂದೇ ಸಂತೆ ನಡೆಯುತ್ತದೆ. ೬೦ ವರ್ಷಗಳಿಂದಲೂ ಈವರೆಗೆ ಸುತ್ತಮುತ್ತಲಿನ ಈ ಮೇಲಿನ ೩ ಗ್ರಾಮಗಳಿಗೆ ಅಂಚೆ ಕಚೇರಿಯನ್ನು ಹೊಂದಿದೆ.

ಪ್ರಮುಖವಾಗಿ 'ಮಟ್ಟಿಹಾಳ ಕೆರೆ' ಮತ್ತು ಹಿರೇಬಾವಿಯ ಹತ್ತಿರ 'ಜೀರ ಮಡವು ಕೆರೆ' ಪ್ರಮುಖವಾಗಿ ಈ ಎರಡು ಕೆರೆಗಳು ಬಿಸರಳ್ಳಿಯಲ್ಲಿ ಇವೆ. ಗಾಂಧಿಕಟ್ಟೆ, ವ್ಯವಸಾಯ ಸಹಕಾರ ಸಂಘ ಹಾಗೂ ಹಾಲು ಉತ್ಪಾದನಾ ಸಂಘಗಳು ಸಹ ಇವೆ.

೩.೧.೨. ಶೈಕ್ಷಣಿಕ ವ್ಯವಸ್ಥೆ

೧೯೫೨ರವರೆಗೆ ಸರಕಾರಿ ಪ್ರಾಥಮಿಕ ಶಾಲೆ ಇತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಸರಕಾರಿ ಪ್ರಾಥಮಿಕ ಶಾಲೆ ಇದ್ದರೂ ಕೂಡ ಶಿಕ್ಷಕರು ಇರುತ್ತಿರಲಿಲ್ಲ. ಜೂನ್ ೧೯೫೨ರಲ್ಲಿ ಆರಂಭವಾದ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯನ್ನು ಮೊದಲು ಸ್ಥಾಪಿಸಲಾಯಿತು. ಪ್ರಸ್ತುತದಲ್ಲಿ ಖಾಸಗಿ ಶಾಲೆಯಾದ ನೃಪತುಂಗ ಹೈಸ್ಕೂಲ್, ೩ ಸರಕಾರಿ ಪ್ರಾಥಮಿಕ ಶಾಲೆ ಹಾಗೂ ೧ ಹಾಸ್ಟೆಲ್ ಇದೆ.

ಮಾಜಿ ಶಾಸಕರಾದ ಶ್ರೀ ಮಲ್ಲಿಕಾರ್ಜುನ ದಿವಟರ, ಅವರು ೧೯೮೫ರಲ್ಲಿ ನೃಪತುಂಗ ಶಿಕ್ಷಣ ಸಂಸ್ಥೆಯ ಮೂಲಕ, ಕೊಪ್ಪಳ ತಾಲೂಕಿನ ಬಿಸರಳ್ಳಿ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಜೊತೆಗೆ ಉಚಿತ ಪ್ರಸಾದ ನಿಲಯವನ್ನು ನಡೆಸಿಕೊಂಡು ಬರುತ್ತಿದ್ದಾರೆ.

೩.೧.೩. ಸಾಂಸ್ಕೃತಿಕ ಹಿನ್ನೆಲೆ : ಉತ್ತರ ಕರ್ನಾಟಕದ ಅದರಲ್ಲೂ ಹೈದ್ರಾಬಾದ್ ಕರ್ನಾಟಕ ಪ್ರದೇಶವಾದ, ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನಲ್ಲಿ, ಬರುವ ಈ 'ಬಿಸರಳ್ಳಿ' ಗ್ರಾಮವು ಜಾನಪದ ಸಾಹಿತ್ಯ ಕಲೆಗಳಿಗೆ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಒಂದು ಜನಾಂಗದ ಆಚಾರ-ವಿಚಾರ, ರೂಢಿ-

ಸಂಪ್ರದಾಯ, ಪರಂಪರೆಯ ಸಂಬಂಧಗಳನ್ನು ತಿಳಿದುಕೊಳ್ಳಬೇಕಾದರೆ, ಅದು ಜನಪದ ಕಲೆಗಳ ಮುಖಾಂತರವೇ ಎಂದು ಹೇಳಬಹುದಾಗಿದೆ.

೧. ಬಯಲಾಟಗಳು : ಕೊಪ್ಪಳ ಜಿಲ್ಲೆಯಲ್ಲಿ ಬಯಲಾಟಗಳು ವಿಶಿಷ್ಟವಾಗಿ ಪ್ರಸಿದ್ಧಿ ಪಡೆದುಕೊಂಡಿವೆ. ಈ ಕಲೆ ನಶಿಸಿ ಹೋದರೂ 'ಬಿಸರಳ್ಳಿ'ಯಲ್ಲಿ ಮಾತ್ರ ಇನ್ನೂ ಜೀವಂತವಾಗಿದೆ. ಬಿಸರಳ್ಳಿ ಗ್ರಾಮದ ಬಳಿ ಇರುವ ಸುಮಾರು ೪ ಕಿ.ಮೀ. ಅಂತರದಲ್ಲಿರುವ, ಹಿರೇಸಿಂದೋಗಿಯ ಗ್ರಾಮದಲ್ಲಿ ವೀರಭದ್ರಪ್ಪ ಬಡಿಗೇರ ಎಂಬುವರು 'ದೇವಿ ಪಾರ್ಟು' ಮಾಡುವುದರಲ್ಲಿ ಜನಪ್ರಿಯರಾಗಿದ್ದಾರೆ. ಬಿಸರಳ್ಳಿಯ ಹತ್ತಿರದಲ್ಲೇ ಇರುವ ಇನ್ನೊಂದು ಗ್ರಾಮವಾದ 'ಬೂದಿಹಾಳ'ದಲ್ಲಿ 'ಸೀಮಣ್ಣಚಿಕ್ಕಿ' ಎಂಬುವರು. 'ಸ್ತ್ರೀ-ಪಾತ್ರಧಾರಿ'ಯಾಗಿ ಜನಪ್ರಿಯತೆ ಗಳಿಸಿದ್ದಾರೆ. ನಟ ಹಾಗೂ ಬಯಲಾಟದ ಮಾಸ್ತರರು ಆದ 'ಭರಮ ಗೌಡ ಪೂಜಾರ' ಇವರು ಬಿಸರಳ್ಳಿಯಲ್ಲಿ ಇದ್ದುಕೊಂಡೇ ಅನೇಕ ಕಡೆ ಆಟ ಆಡಿಸಿ ಪ್ರಸಿದ್ಧರಾದವರು. ೨೪ ತಾಸುಗಳಿಗೂ ಮಿಕ್ಕಿ ಹಾಡಿದರೂ ಧ್ವನಿ ಕುಗ್ಗದಂಥ ಪ್ರತಿಭೆಯನ್ನು ಗುರುತಿಸಿ, ೧೯೯೩ರಲ್ಲಿ ನಾಟಕ ಅಕಾದೆಮಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

೨. ಡೊಳ್ಳು ಕುಣಿತ ಹಾಗೂ ಡೊಳ್ಳಿನ ಪದ : ಕುರುಬರು ತಮ್ಮ ಬೀರಪ್ಪ, ರೇವಣಸಿದ್ಧ, ಅಮೋಘಸಿದ್ಧ, ಸಿದ್ಧೇಶ್ವರ ಮುಂತಾದವರು ದೇವರಿಗಾಗಿ ಡೊಳ್ಳನ್ನು ಬಾರಿಸುತ್ತಾರೆ. ಅಲ್ಲದೇ ಇತ್ತೀಚೆಗೆ ಸಭೆ-ಸಮಾರಂಭ-ಮಹೋತ್ಸವ, ಸಮ್ಮೇಳನದಲ್ಲಿ ಡೊಳ್ಳನ್ನು ಆಕರ್ಷಕವಾಗಿ ಬಾರಿಸುತ್ತಾರೆ. ಪ್ರತಿಯೊಂದು ಹಳ್ಳಿಯಲ್ಲಿ ಡೊಳ್ಳುಗಳು ಇವೆ. ಹಾಗೆಯೇ 'ಬಿಸರಳ್ಳಿ' ಗ್ರಾಮದಲ್ಲಿ ಡೊಳ್ಳು ಕುಣಿತ ಹಾಗೂ ಡೊಳ್ಳಿನ ಪದವನ್ನು ಹಾಡುವವರು ಇದ್ದಾರೆ. ಅಂಥವರಲ್ಲಿ ಉಳಿಸಿಕೊಂಡು ಬಂದಿರುವ ಕೊಪ್ಪಳದ ಬಿಸರಳ್ಳಿಯ ಭೀಮಣ್ಣ ಕಾಟಿ, ಭರಮಣ್ಣ ಕಾಟಿ, ಕುಷ್ಟಗಿಯ ಬೆಂಚಿಮಟ್ಟಿಯ ಶಿವಪ್ಪ, ಯಲಬುರ್ಗಾದ ರೇವಣೆಪ್ಪ, ಕೊಪ್ಪಳದ ಹಲಗೇರಿಯ ರೇವಣಪ್ಪ ಮುಂತಾದ ಸಂಗಡಿಗರು ಡೊಳ್ಳು ಕುಣಿತ ಮತ್ತು ಹಾಡು ಹಾಡುವುದಕ್ಕೆ ಪ್ರಸಿದ್ಧರಾಗಿದ್ದಾರೆ.

೩. ಕರಡಿಮಜುಲು - ಹಲಗೆ ಮೇಳ : ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಬಿಸರಳ್ಳಿಯಲ್ಲಿ ಕೆಲ ಕಲಾವಿದರು ಕರಡಿ ಮಜಲು ಹಲಗೆಮೇಳದಲ್ಲಿ ಪ್ರಸಿದ್ಧಿಯನ್ನು ಹೊಂದಿದೆ. ಹಾಗೆಯೇ ಇತರ ತಾಲೂಕಿನ ಯಲಬುರ್ಗಾದ ಗೊರ್ಲೆಕೊಪ್ಪ, ಇಟಗಿ, ಕುಕನೂರು ಗಂಗಾವತಿಯ ಕಲಾವಿದರು ಸಹ ಕರಡಿಮಜಲು, ಹಲಗಿ ಮೇಳ ಬಾರಿಸುತ್ತಾರೆ.

೪. ಮೊಹರಂ(ರಿವಾಯತ್) ಪದ : ಕೊಪ್ಪಳ ಜಿಲ್ಲೆಯ, ಇದೇ ತಾಲೂಕಿನ 'ಬಿಸರಳ್ಳಿ'ಯಲ್ಲಿ ರಜಾಕಸಾಬ ಎಂಬುವರು ಪ್ರಸಿದ್ಧ ಕಲಾವಿದರು. ಜೊತೆಗೆ ಗಂಗಾವತಿಯ ಅಲ್ಲಾನಗರದ ಇಮಾಮಸಾಬ, ಕೊಪ್ಪಳ ತಾಲೂಕಿನ ಹುಲಗಿ-ಹೊಸಳ್ಳಿಯ ಮಾರುತೆಪ್ಪ, ಕವಲೂರಿನ ಗೌಸು ಸಾಬ ಮುಂತಾದವರು ಪ್ರಸಿದ್ಧ ಹಾಡುಗಾರರಾಗಿದ್ದರು. ಹಿಂದೂ-ಮುಸ್ಲಿಂ ಎನ್ನದೇ ಎಲ್ಲರು ಒಂದಾಗಿ ಆಚರಿಸುತ್ತಾರೆ. ಉರುಸಿನ ಸಂದರ್ಭದಲ್ಲಿ ರಿವಾಯತ್ ಮೊಹರಂ ಪದ ಹಾಡುವರು.

೫. ಡಪ್ಪಿನಾಟ : ಬಯಲಾಟದ ಮಾದರಿಯಲ್ಲಿಯೇ ಆಡುವ ಆಟವಿದು. ಕೊಪ್ಪಳ ತಾಲೂಕಿನ ಬಿಸರಳ್ಳಿಯ 'ರಘುನಾಥ' ಎಂಬುವವರು ಈ ಡಪ್ಪಿನಾಟಕ್ಕೆ ಪ್ರಸಿದ್ಧಿ ಹೊಂದಿದ್ದಾರೆ. ಹಾಗೆಯೇ ಗಂಗಾವತಿ ತಾಲೂಕಿನ ಹುಲಿಹೈದರ ಕರಿಯಪ್ಪ ಮಾಸ್ತರ, ಕುಷ್ಟಗಿ ತಾಲೂಕಿನ ಈರಪ್ಪ ತೋಟದ ಮುಂತಾದ ಕಲಾವಿದರು ಈ ಡಪ್ಪಿನಾಟಕ್ಕೆ ಪರಿಣಿತರಾಗಿದ್ದಾರೆ.

೬. ಚೌಡಕಿ : ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಸ್ಥಾನದಲ್ಲಿ ಜಾತ್ರೆ ಹಾಗೂ ದಿನನಿತ್ಯ ಜೋಗಮ್ಮರು ಇಲ್ಲಿ ಚೌಡಕಿ ಬಾರಿಸುತ್ತಾರೆ. ಬಿಸರಳ್ಳಿ ಹಾಗೂ ಹಂದ್ರಾಳ್‌ದಲ್ಲಿ ಹನುಮಂತಪ್ಪ, ಪರಸಪ್ಪ ಮುಂತಾದ ಕಲಾವಿದರು ೨೫ ವರ್ಷಗಳಿಗಿಂತ ಅಧಿಕವಾಗಿ ಚೌಡಕಿ ಬಾರಿಸುವಲ್ಲಿ ಪ್ರಸಿದ್ಧರಾಗಿದ್ದಾರೆ.

೭. ಹೆಣ್ಣು ಮಕ್ಕಳ ಹಾಡು : ಕೊಪ್ಪಳ ಜಿಲ್ಲೆಯ ಇದೇ ತಾಲೂಕಿನ ಬಿಸರಳ್ಳಿಯಲ್ಲಿ ಹೆಣ್ಣು ಮಕ್ಕಳ ಹಾಡು, ಕುಟ್ಟುವ, ಬೀಸುವ, ಮದುವೆ, ಗಂಡನ ಮನೆಗೆ ಕಳಿಸುವಾಗ, ಕುಬಸ ಮಾಡುವಾಗ, ಉಡಿ ತುಂಬುವ ಹಾಡುಗಳನ್ನು ಸಹ ಹೇಳುತ್ತಾರೆ. ಅಂತಹವರಲ್ಲಿ ಬಿಸರಳ್ಳಿಯ ಸ್ವಾರೆವ್ವ ಕಾಳಿ, ಹಟ್ಟಿಯ ಲಕ್ಷ್ಮವ್ವ, ಅಲ್ಲಾನಗರದ ಲಕ್ಷ್ಮವ್ವ ಹಾಗೂ ಸಂಗಡಿಗರು ಇಂತಹ ಹಾಡುಗಳನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದಾರೆ.

೮. ತತ್ವ ಪದಗಳು : ಈ ಜಿಲ್ಲೆಯ ವ್ಯಾಪ್ತಿಯಲ್ಲೇ ಬರುವ ಯಲಬುರ್ಗಾದ ತುಮರಗುದ್ದಿ ಮಾರೆಪ್ಪ ದಾಸರ ಎಂಬುವವರು ತತ್ವಪದಕ್ಕೆ ಪ್ರಸಿದ್ಧರಾದವರು. ಅದೇ ರೀತಿಯಾಗಿ 'ಬಿಸರಳ್ಳಿ'ಯಲ್ಲಿ ದಿ.ಸಿದ್ಧಯ್ಯ ಇವರು ಸಹ ಇಂತಹ ಪದಕ್ಕೆ ಖ್ಯಾತಿಯಾಗಿದ್ದರು.

೩.೧.೪. ಧಾರ್ಮಿಕ ಹಿನ್ನೆಲೆ

ಧಾರ್ಮಿಕ ಸಂಸ್ಥೆಗಳಾದ ಮಠ ಮಾನ್ಯಗಳಿಗೂ, ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಸಂಚಾರ ಮಾಡುವ ಸ್ವಾಮಿಗಳಿಂದ ಆಶ್ರಮಗಳು ಹುಟ್ಟಿ ಮಠವೆಂದು ಬೆಳಕಿಗೆ ಬಂದವು. ಈ ಮಠಗಳು ಸಮಾಜದ ಬದುಕನ್ನು ನಿಯಂತ್ರಿಸಬಲ್ಲ, ರೂಪಿಸಬಲ್ಲ ಮಹತ್ವದ ಸಂಸ್ಥೆಗಳಾಗಿ ಬೆಳೆದುಬಂದವು. ಐತಿಹಾಸಿಕವಾಗಿ ಬಿಸರಳ್ಳಿ ತುಂಬಾ ಮಹತ್ವ ಪಡೆದ ಗ್ರಾಮವಾಗಿತ್ತು. ಗ್ರಾಮದ ರಚನೆಯ ವೈಶಿಷ್ಟ್ಯತೆಯನ್ನು ಗಮನಿಸಿದರೆ ಇತಿಹಾಸ ಕಾಲದಲ್ಲಿ ಬಿಸರಳ್ಳಿ ಗ್ರಾಮ ಬಹಳಷ್ಟು ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು.

ಬಿಸರಳ್ಳಿಯಲ್ಲಿ ಸುಮಾರು ೧೫ ಗುಡಿಗಳನ್ನು ಕಾಣಬಹುದಾಗಿದೆ. ಹನುಮಪ್ಪನ ಗುಡಿ, ಈಶ್ವರನ ಗುಡಿ, ದ್ಯಾಮವ್ವನ ಗುಡಿ, ತೋಪಿನ ದುರ್ಗವ್ವನ ಗುಡಿ. ಬಂಡಿದುರ್ಗಮ್ಮನ ಗುಡಿ, ಬೀರಲಿಂಗನ ಗುಡಿ, ಕೇರಿ ದುರ್ಗಮ್ಮನ ಗುಡಿ, ಭರಮದೇವರ ಗುಡಿ, ತಾಯಮ್ಮನ ಗುಡಿ, ಕಾಳಿಕಾದೇವಿ ಗುಡಿ, ಗವಿಸಿದ್ದೇಶ್ವರ ಶಾಖಾಮಠ, ಹಜರತ್ ರಜಾವಲಿ ಷಾ ಖಾದ್ರಿ(ದರ್ಗಾ), ೩ ಮಸೀದಿ ೧ ದರ್ಗಾ ಇವೆ. ೫ ಕೋಟೆಗಳನ್ನು (ಹೂಡೇವು) ಹೊಂದಿದ್ದು ಈಗ ಕೇವಲ ೨ ಕೋಟೆಗಳು ಮಾತ್ರ ಉಳಿದಿವೆ. ಇವು ಸಹ ಶಿಥಿಲಾವಸ್ಥೆಯಲ್ಲಿ ಇವೆ. ಹಾಗೂ ಹಿರೇಕರ್ತನ ಗುಡಿಯು ಸಹ ಇದೆ. ಹಿಂದೂ-ಮುಸ್ಲಿಂ ಎನ್ನದೇ

ಎಲ್ಲರೂ ಒಂದಾಗಿ ಆಚರಿಸುತ್ತಾರೆ. ಉರುಸಿನ ಸಂದರ್ಭದಲ್ಲಿ ರಿವಾಯತ್ ಪದವನ್ನು ಹಾಡುತ್ತಾರೆ. ಬಿಸರಳ್ಳಿಯ ಪ್ರಮುಖ ಕಲಾವಿದನಾದ 'ರಜಾಕಸಾಬ' ಎಂಬುವರು ಮೊಹರಂ ಪದವನ್ನು ಸುಪ್ರಸಿದ್ಧವಾಗಿ ಹಾಡುತ್ತಾರೆ.

ಇವೆಲ್ಲಕ್ಕೂ ಕಳಸವಿದ್ದಂತೆ 'ಮರಳು ಸಿದ್ದೇಶ್ವರ' ದೇವಾಲಯವು ಇದೆ. ಇದು ಕಲ್ಲಿನ ಕಟ್ಟಡವನ್ನು ಹೊಂದಿದೆ. ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿರುವ ದೇವಾಲಯ ಮತ್ತು ಮಠವೆಂದು ಕರೆಯುತ್ತಾರೆ. ಎತ್ತರದ ಅನುಷ್ಠಾನದಲ್ಲಿ ಕಟ್ಟಲಾದ ಈ ದೇಗುಲದ ಗರ್ಭಗೃಹದಲ್ಲಿ ಮರುಳಸಿದ್ದೇಶ್ವರ ಮೂರ್ತಿ ಸ್ಥಾಪನೆ ಇದೆ.

ಗರ್ಭಗುಡಿಯ ಬಾಗಿಲವಾಡವು ಸರಳ ಕೆತ್ತನೆಯಲ್ಲಿದೆ. ಸಭಾಮಂಟಪ ವಿಶಾಲವಾಗಿದ್ದು, ಇದರಲ್ಲಿ ೧೨ ಕಂಬಗಳಿವೆ. ಇವುಗಳನ್ನು ಚಚೌಕ, ಅಷ್ಟಮುಖ ಮತ್ತು ವೃತ್ತಾಕಾರದಲ್ಲಿ ಕಡೆಯಲಾಗಿದೆ. ಇದೇ ಮರುಳಸಿದ್ದೇಶ್ವರ' ಮಠವೆಂದು ಕರೆಯಲಾಗಿದೆ. ಇದರ ಎದುರಿಗೆ ಇರುವ ಬೃಹತ್ ಎತ್ತರದ ಸ್ತಂಭ ಇದೆ. ಹಾಗೂ ಗುಡಿಯ ಎಡಭಾಗದಲ್ಲಿ ಹರಿಜನರ ಕೇರಿಗಳು ಮತ್ತು ಈ ಕೇರಿಯ ಹತ್ತಿರದಲ್ಲೇ ಇರುವ 'ಹಿರೇಕರ್ತ'ನೆಂಬ ಗುಡಿಯೂ ಇದೆ. ಈ ಕೇರಿಯ ಹಿಂದಗಡೇ ಇರುವ 'ಚೆಳ್ಳಮ್ಮ'ನ ಗುಡಿ ಹೀಗೆ 'ಬಿಸರಳ್ಳಿ'ಯಲ್ಲಿ ಹತ್ತು ಹಲವಾರು ಗುಡಿಗಳನ್ನು ಕಾಣಬಹುದಾಗಿದೆ.

ಬಿಸರಳ್ಳಿಯ ಗ್ರಾಮದಲ್ಲಿ ಮರುಳಸಿದ್ದೇಶ್ವರ ಗುಡಿಯೇ ಬಹಳ ಪ್ರಸಿದ್ಧವಾಗಿದೆ. ಈ ಗುಡಿಯ ಪೂಜಾರಿ ಶಿವಯ್ಯನವರು ಪೂಜೆ ಮಾಡುತ್ತಿದ್ದಾರೆ. ಒಟ್ಟಾರೆಯಾಗಿ ಬಿಸರಳ್ಳಿಯ ಭೌಗೋಳಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಹಿನ್ನೆಲೆಯು ಸಹ ಐತಿಹಾಸಿಕವಾದ ಸ್ಥಾನಮಾನ ಪಡೆದುಕೊಂಡಿದೆ.

೩.೨. ಮರುಳ ಸಿದ್ದೇಶ್ವರ ಮಠದ ದೇವದಾಸಿ ಪದ್ಧತಿಯ ಹಿನ್ನೆಲೆ

ಧಾರ್ಮಿಕ ಸಂಸ್ಥೆಗಳಾದ ಮಠಮಾನ್ಯಗಳಿಗೂ, ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಸಂಚಾರ ಮಾಡುವ ಸ್ವಾಮಿಗಳಿಂದ ಆಶ್ರಮಗಳು ಹುಟ್ಟಿ ಮಠವೆಂದು ಬೆಳಕಿಗೆ ಬಂದವು. ಈ ಮಠಗಳು ಸಮಾಜದ ಬದುಕನ್ನು ನಿಯಂತ್ರಿಸಬಲ್ಲ ರೂಪಿಸಬಲ್ಲ ಮಹತ್ವದ ಸಂಸ್ಥೆಗಳಾಗಿ ಬೆಳೆದು ಬಂದವು. ಮಠ ಎಂಬ ಪದವು ಮೂಲತಃ ಸಂಸ್ಕೃತದಲ್ಲಿ ಬಳಕೆಯಾಗಿದೆ. ಮಠ ಎಂದು ಪರ್ಯಾಯ ಕನ್ನಡಕ್ಕೆ ಬಳಸಿಕೊಳ್ಳಲಾಗಿದೆ. ಸನ್ಯಾಸಿಗಳ ವಾಸಸ್ಥಳ ಆಶ್ರಯಗಳಿಗೆ ವಿದ್ಯಾಲಯವೆನ್ನುವ ಅರ್ಥದಲ್ಲಿ ಬಳಕೆಯಾಯಿತೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಕಾಳಾಮುಖ, ಪಾಶುಪತ, ಕಾಪಾಲಿಕ ಮೊದಲಾದ ಪಂಥಗಳಿಗೆ ಸೇರಿದ ಸನ್ಯಾಸಿಗಳಿದ್ದರು. ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಮಠಗಳನ್ನು ನಿರ್ಮಿಸಿದರು. ಭಾರತ ದೇಶದ ನಾಲ್ಕು ದಿಕ್ಕಿಗೆ ಮಠಗಳನ್ನು ಸ್ಥಾಪಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ೧೨ನೇ ಶತಮಾನದಲ್ಲಿ ನಡೆದ

ಕ್ರಾಂತಿಯಿಂದಾಗಿ ಮಠಗಳು ಹೊಸ ಹೊಸ ರೂಪ ಪಡೆದುಕೊಂಡವು. ಈ ಕಾಲದಲ್ಲಿ ಅನೇಕ ಗುರುಮಠಗಳು ಹುಟ್ಟಿಕೊಂಡವು. ಅವುಗಳಲ್ಲಿ ಮರುಳಸಿದ್ಧರ ಮಠವು ಒಂದಾಗಿದೆ.

ಮರುಳಸಿದ್ಧರ ಜೀವನದ ಬಗ್ಗೆ ಪೌರಾಣಿಕ ಹಿನ್ನೆಲೆ ಈ ರೀತಿಯಾಗಿದೆ. ಮರುಳಸಿದ್ಧರು ಮಾದಿಗರ ಜನಾಂಗದ ಕುಚಿಮಾರ ಮತ್ತು ಸುಪ್ರಭೆಯರ ಮಗನಾಗಿ ಜನಿಸಿದರು. ಆದರೆ ತಾಯಿ, ಮಗು ಜನನವಾಗುತ್ತಲೇ ಮರಣ ಹೊಂದುತ್ತಾಳೆ. ಇದನ್ನು ಕಂಡ ಕುಚಿಮಾರನು ಸಾವನ್ನಪ್ಪುತ್ತಾನೆ. ಹೀಗಾಗಿ ಮಗು ಹುಟ್ಟಿದ್ದು ಕೆಟ್ಟ ನಕ್ಷತ್ರದಲ್ಲಿ ಎಂದು ಜನರು ಆಡಿಕೊಳ್ಳತೊಡಗುತ್ತಾರೆ. ಎಲ್ಲರ ತಿರಸ್ಕಾರದಿಂದ ಬೀದಿ ಪಾಲಾಗಿದ್ದ ಮಗುವನ್ನು ಕಗ್ಗಲುಪುರದ ಸಿರಿವಂತ ಬಾಚಣ್ಣಗೌಡ ಮತ್ತು ಮಲ್ಲವ್ವ ದಂಪತಿಗಳು ಮಗುವೆಂದು ಸ್ವೀಕರಿಸಿದರು.

ಪ್ರತಿಯೊಬ್ಬರು ದಂಪತಿಗಳನ್ನು ತಿರಸ್ಕಾರ ಮನೋಭಾವದಿಂದ ಕಾಣತೊಡಗಿದರು. ಆದರೂ ಮಗುವನ್ನು ಸ್ವೀಕರಿಸಿ ಪ್ರೀತಿಯಿಂದ ಸಾಕಲಾರಂಭಿಸಿದರು. ಮರುಳಸಿದ್ಧ ಎಂದು ನಾಮಾಂಕಿತಗೊಂಡು ಬೆಳೆಯತೊಡಗಿದನು. ಮನೆಯಲ್ಲಿ ಸುಮ್ಮನೇ ಕೂಡದೇ ದನಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದನು. ಕಾಯಕ ಮಾಡದೇ ಕೂತು ತಿನ್ನಲು ಮನಸ್ಸಿರಲಿಲ್ಲವಾದ್ದರಿಂದ ದನಕಾಯಲು ಹೊರಡುತ್ತಿದ್ದನು. ಇದಕ್ಕೆ ತಂದೆ-ತಾಯಿಯ ವಿರೋಧವಿತ್ತು. ಪುರೋಹಿತ ರಾಮಶಾಸ್ತ್ರೀಯವರು ಮರುಳನನ್ನು ಜಾತಿಯ ಮೂಲಕ ಹೀಯಾಳಿಸುತ್ತಿದ್ದರು. ಆದರೂ ಮರುಳ ಜಾತಿಗಿಂತ ಗುಣವೇ ಪ್ರಧಾನ ಎಂದು ನಂಬಿದ್ದನಲ್ಲದೆ, ಕೊಳಗೇರಿಯ ಜನರನ್ನು ಭೇಟಿ ಮಾಡುತ್ತಿದ್ದನು. ಇದು ಊರಿನ ಜನರಿಗೆ ಹಾಗೂ ತಂದೆ-ತಾಯಿಗೆ ಹಿಡಿಸದಾಯಿತು. ಊರು ಹೊಲಗೇರಿ ಎರಡು ಒಂದು ಮಾಡುತ್ತಿದ್ದಾನೆಂದು ಆರೋಪವನ್ನು ಹೊರಿಸಲಾಯಿತು. ಜಾತಿಯನ್ನು ದ್ವೇಷಿಸುತ್ತಿದ್ದ ಮರುಳ ಮರಕೋತಿ, ಗೋಲಿ, ಗಜ್ಜುಗ, ಚೆಂಡಾಟಗಳಲ್ಲಿ ಹೊಲಗೇರಿಯವರನ್ನು ಸೇರಿಸಿಕೊಂಡು ಆಟವಾಡುತ್ತಿದ್ದನು. ಗೆಳೆಯರು ತರುತ್ತಿದ್ದ ಬುತ್ತಿಯನ್ನೆಲ್ಲ ಒಂದು ಮಾಡಿ ಎಲ್ಲರಿಗೆ ಕೈ ತುತ್ತು ನೀಡುತ್ತಿದ್ದು, ಸಮಪಾಲು, ಸಮಬಾಳು ಎನ್ನುವುದು ಇದೆ ಎಂದು ತೋರಿಸಿಕೊಟ್ಟನು.

ಪ್ರಾಣಿ ಹತ್ಯೆ ಮಾಡುವುದನ್ನು ನಿಲ್ಲಿಸಲು ಪ್ರಯತ್ನಿಸಿದಾಗ ಪೂಜಾರಿಯಿಂದ ವಿರೋಧ ವ್ಯಕ್ತವಾಯಿತು. ಅಮ್ಮ ದೇವಿಗೆ ಬಲಿ ಕೊಡದಿದ್ದರೆ ಶಾಪ ನೀಡುತ್ತಾಳೆ ಎಂದು ನಂಬಿಕೆ ಇತ್ತು. ಆದರೆ ಅದನ್ನು ತಿರಸ್ಕರಿಸಿ ಪ್ರಾಣಿ ಬಲಿಯ ಬದಲಿಗೆ ಪಾನಕ, ಕೋಸಂಬ್ರಿ ನೀಡಿರೆಂದು ತಿಳಿಸಿದರು. ಇದನ್ನು ಕೇಳಿ ಸಹಿಸದಾದ ಪೂಜಾರಿಯು "ಈ ನನ್ನಮಗ ಗೌಡರ ಮನೆಯೊಳಗೆ ಬೆಳೆದಾಕ್ಷಣ ದೊಡ್ಡವ ಆಗ್ತಾನ? ಜಾತಿಗೆ ತಕ್ಕ ನೀತಿ, ನೀತಿಗೆ ತಕ್ಕ ಲದ್ದಿ, ಬಡ್ಡಿಮಗನ ತಂದು, ಹುಟ್ಟಿನಿಂದ ಚಾಂಡಾಳನಾದ್ರು ಅವನ ಮಾತಿನ ಗಾಂಭೀರ್ಯ ನೋಡು ಅಂದನು." ಇದನ್ನು ಕೇಳಿದ ಮರುಳ ದಿಗ್ಭ್ರಾಂತಗೊಂಡು ತನ್ನ ಜನ್ಮ ಪೂರ್ವದ ಬಗ್ಗೆ ತಿಳಿಯಲು ಪ್ರಯತ್ನಿಸಿದನು. ತಂದೆ-ತಾಯಿಯರಿಂದ ಸತ್ಯ ತಿಳಿದುಕೊಂಡನು. ತಂದೆ-ಮಗನ ನಡುವೆ ವಾದ-ವಿವಾದ ನಡೆಯಿತು. ಊರು ಹೊಲಗೇರಿ ಒಂದು ಮಾಡಬೇಡ ಎಂದು ಹೇಳಿದಾಗ

ಊರಲ್ಲಿ ಹೊಲಗೇರಿನೇ ಇರಬಾರದು ಎಂದು ಉತ್ತರಿಸಿದನು. ತಂದೆ ಈ ರೀತಿ ಇನ್ನೂ ಮುಂದೆ ಮಾಡುವುದಿಲ್ಲವೆಂದು ಮಾತುಕೊಟ್ಟು ಒಳಗೆ ಬಾ ಎಂದರು. ಅದಕ್ಕೆ ಒಪ್ಪದ್ದರಿಂದ ಊರಿನಿಂದ ಬಹಿಷ್ಕಾರ ಮಾಡುವ ಹೆದರಿಕೆ ಹಾಕಲಾಯಿತು. ತಂದೆ-ತಾಯಿಯ ದುಃಖವನ್ನು ಸಹಿಸಲಾಗದೇ ತಾನೇ ಊರನ್ನು ಬಿಟ್ಟು ಹೋಗುತ್ತೇನೆಂದು ಉಟ್ಟ ಬಟ್ಟೆಯಲ್ಲಿಯೇ ಎಲ್ಲವನ್ನು ಬಿಟ್ಟು ಊರಿನಿಂದ ಹೊರನಡೆದನು.

ಅನೇಕ ಪ್ರದೇಶಗಳಿಗೆ ಅಲೆದಾಡುತ್ತ ಕೊನೆಗೆ ರೇವಣಸಿದ್ಧರ ಆಶ್ರಯಕ್ಕೆ ಬಂದ. ರೇವಣಸಿದ್ಧರಿಂದ ದೀಕ್ಷೆ ಪಡೆದರು. ಶಿಷ್ಯನಾಗಿ, ವೃತ್ತಿ ಕೈಗೊಂಡು, ಸಿದ್ಧಿ ಪಡೆದರು. ಇವರಿಬ್ಬರ ನಡುವಿನ ಬಾಂಧವ್ಯ ಅನೇಕರಲ್ಲಿ ಅಸೂಯೆ ಮೂಡಿಸಿತ್ತು. ಶ್ರೀಕಂಠಶಾಸ್ತ್ರೀ ರೇವಣಸಿದ್ಧರಿಗೆ ಮರುಳಸಿದ್ಧ ಮಾದಿಗನೆಂದು ತಿಳಿಸಿದನು. ರೇವಣಸಿದ್ಧರು ಮರಳ ನೀನು ಮಾದಿಗನಲ್ಲ ಸಾದಿಗ ಎಂದು ನುಡಿದರು.

ಹುಟ್ಟುವಾಗಲೇ ತಂದೆ-ತಾಯಿ ಕಳೆದುಕೊಂಡ ಮಾದಿಗರ ಮರುಳಸಿದ್ದ ಬಾಚೇಗೌಡನ ಮನೆ ಸೇರಿ 'ಮಗ'ನಂತೆಯೇ ತಿಳಿದುಕೊಂಡು ಆ ನಂತರದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಬಂದು ಮನೆಯನ್ನು ಬಿಟ್ಟು ಗುರುವಿನ ಆಶ್ರಯಕ್ಕೆ ಹೋಗುತ್ತಾನೆ. ಮರುಳಸಿದ್ಧ ಮಾದಿಗರ ಮಗನೆಂಬುದನ್ನು ಬಹಳ ಕಾಲದವರೆಗೆ ನಿರಾಕರಿಸಲಾಯಿತು. ಈಗಲು ಸಹ ಜನತೆಯ ನಡುವೆ ಮರುಳಸಿದ್ಧ ಇನ್ನೂ ಜೀವಂತವಾಗಿದ್ದಾನೆ.

"ಮಾದಿಗರ ಮಗ, ಸಾದರಿಗೆ ಗುರು" ಎಂಬಂತಹ ನಾಣ್ಣುಡಿಗಳು ಜನರಲ್ಲಿ ಸಮ್ಮಿಳಿತಗೊಂಡಿದೆ. ಮರುಳಸಿದ್ಧನನ್ನು ಮತ್ತಷ್ಟು ಆಪ್ತಶಿಷ್ಯನನ್ನಾಗಿಸಿಕೊಂಡರು ರೇವಣಸಿದ್ಧರು. ಗುರುಗಳು ಉತ್ತರದ ಕಡೆ ಪ್ರವಾಸ ಹೋದರು. ಮರುಳಸಿದ್ದನು ಸಹ ಪ್ರವಾಸವನ್ನು ಕೈಗೊಂಡನು. ಮರುಳಸಿದ್ಧ ಎಂಬ ಹೆಸರಿನಿಂದ ಪ್ರವಾಸ ಕೈಗೊಂಡು ಅನೇಕ ಪವಾಡಗಳನ್ನು ಮಾಡಿದನು. ಎಲ್ಲೆಡೇ ಇವರಿಗೆ ಶಿಷ್ಯರು, ಭಕ್ತರು ದೊರೆತರು. ಕೊನೆಗೆ ಕಗ್ಗಲುಪುರಕ್ಕೆ ಹೋಗಿ ಆ ಊರನ್ನು 'ಉಜ್ಜಯಿನಿ' ಎಂದು ಕರೆದು ಸದ್ಧರ್ಮ ಪೀಠವನ್ನು ಸ್ಥಾಪಿಸಿದರು. ಅಲ್ಲೆಲ್ಲ ಮಹಾಮನೆ, ಶಿವಾಲಯ, ಮಠಗಳನ್ನು ಸ್ಥಾಪಿಸಿದರು. ಇಂದು ಅನೇಕ ಭಾಗಗಳಲ್ಲಿ ಮರುಳಸಿದ್ಧರ ಮಠಗಳನ್ನು ಕಾಣಬಹುದಾಗಿದೆ. ಅದರಲ್ಲಿ 'ಬಿಸರಳ್ಳಿಯ ಮರುಳಸಿದ್ಧೇಶ್ವರ ಮಠ' ಒಂದಾಗಿದೆ.

ಮರುಳ ಸಿದ್ಧೇಶ್ವರ ದೇವಾಲಯ ಕಲ್ಲಿನ ಕಟ್ಟಡವನ್ನು ಹೊಂದಿದೆ. ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ಕೂಡಿದೆ. ಇದನ್ನು ದೇವಾಲಯ ಮತ್ತು ಮಠವೆಂದು ಕರೆಯುತ್ತಾರೆ. ಎತ್ತರದ ಅನುಷ್ಠಾನದಲ್ಲಿ ಕಟ್ಟಲಾದ ಈ ದೇಗುಲದ ಗರ್ಭಗೃಹದಲ್ಲಿ ಮರುಳಸಿದ್ದೇಶ್ವರ ಮೂರ್ತಿ ಸ್ಥಾಪನೆ ಇದೆ. ಗರ್ಭಗುಡಿಯ ಬಾಗಿಲವಾಡವು ಸರಳ ಕೆತ್ತನೆಯಲ್ಲಿದೆ. ಸಭಾಮಂಟಪ ವಿಶಾಲವಾಗಿದ್ದು, ಇದರಲ್ಲಿ ೧೨ ಕಂಬಗಳಿವೆ. ಇವುಗಳನ್ನು ಚಚ್ಚೌಕ, ಅಷ್ಟಮುಖ ಮತ್ತು ವೃತ್ತಾಕಾರದಲ್ಲಿ ಕಡೆಯಲಾಗಿದೆ. ಇದನ್ನೇ

[illegible]

‘ಮರುಳಸಿದ್ದೇಶ್ವರ’ ಮಠವೆಂದು ಕರೆಯಲಾಗಿದೆ. ಇದರ ಎದರುಗಡೆ ಇರುವ ಬೃಹತ್ ಎತ್ತರದ ಸ್ತಂಭವು ಇದೆ.

ಶ್ರೀ ಮರುಳ ಸಿದ್ದೇಶ್ವರ ದೇವಸ್ಥಾನಕ್ಕೆ ಸುಮಾರು ನೂರಾರು ವರ್ಷಗಳ ಇತಿಹಾಸವಿದೆ. ಮೊದ ಮೊದಲು ಈ ಗುಡಿಯಲ್ಲಿ ಲಿಂಗಪೂಜೆ ಮಾಡುತ್ತಿದ್ದರು. ನಂತರದಲ್ಲಿ ಗರ್ಭಗುಡಿಯನ್ನು ಸ್ಥಾಪಿಸಿದರು. ೧೯೪೩ರಲ್ಲಿ ಶ್ರೀ ಮರುಳಸಿದ್ದೇಶ್ವರ ದೇವಾಲಯದ ಕಟ್ಟಡವನ್ನು ನಿರ್ಮಿಸಿದರು. ಬಿಸರಳ್ಳಿ ಮಂಡಲ ಪಂಚಾಯಿತಿ ಕ್ಷೇತ್ರಕ್ಕೆ ಬರುವ ‘ಬಿಕನಳ್ಳಿ’ ಈ ಗ್ರಾಮದ ನಾಗಪ್ಪ ಬಿಕನಳ್ಳಿಯವರು ಮಠದ ಆಕಾರವನ್ನು ಒಂದು ರಟ್ಟಿನಲ್ಲಿ ಮಾಡಿದರು. ನಂತರದಲ್ಲಿ ಈ ಮಠವನ್ನು ಸ್ಥಾಪಿಸಿದರು.

ಈ ಮಠದ ಪೂಜಾರಿ ಮರುಳಯ್ಯರಾಗಿದ್ದರು. ಮಠದ ಆಸ್ತಿಯು ಸರಕಾರದಿಂದ ೧೦ ಕೂರಿಗೆ ನೀಡಲಾಗಿದೆ. ಇಲ್ಲಿ ಮಠದ ಸೇವೆಯನ್ನು ಮಾಡಲು ಕೇರಿಯ ಜನರಿಗೆ ‘ಚಾಕರಿ’ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರತಿ ವರ್ಷಕ್ಕೆ ಒಬ್ಬೊಬ್ಬರಂತೆ ಮಠದ ಸೇವೆಯನ್ನು ಮಾಡಲು ವ್ಯವಸ್ಥೆ ಒದಗಿಸಲಾಗಿದೆ. ಮೊಟ್ಟ ಮೊದಲು ಚಾಕರಿ ಸೇವೆಯಲ್ಲಿ ಮಳಿಯಯ್ಯ ಸ್ವಾಮಿ ನಂತರದಲ್ಲಿ ಕರ್ಣಯ್ಯ, ರೇವಯ್ಯ, ಹೊಟ್ಟಿ ಮಳ್ಳಯ್ಯ, ಸಧ್ಯೆ ಈ ಮಠದ ಪೂಜಾರಿಯಾದ ‘ಶಿವಯ್ಯ’ನವರು ಸೇವೆಯನ್ನು ಮಾಡುತ್ತಿದ್ದಾರೆ.

ಬಿಸರಳ್ಳಿ ಮರುಳಸಿದ್ದೇಶ್ವರ ಮಠವು ‘ಉಜ್ಜಯಿನಿ’ ಪಂಚಪೀಠದ ಮೂಲ ಮಠಗಳಲ್ಲಿ ಇದು ಒಂದಾಗಿದೆ. ಇದರ ಶಾಖಾ ಮಠವೇ ಬಿಸರಳ್ಳಿಯ ಮರುಳ ಸಿದ್ದೇಶ್ವರ ಮಠವಾಗಿದೆ. ಅದರಂತೆ ಬಿಸರಳ್ಳಿಯ ಹತ್ತಿರದಲ್ಲೇ ಇರುವ ಗ್ರಾಮಗಳಾದ ಹಿರೇ ಸಿಂದೋಗಿ, ಬೂದಿಹಾಳ, ಅಳವಂಡಿ, ಡಂಬಳ ಮುಂತಾದ ಪ್ರದೇಶಗಳಲ್ಲಿ ಶಾಖಾಮಠಗಳನ್ನು ಕಾಣಬಹುದಾಗಿದೆ.

ಶಿವರಾತ್ರಿಯಲ್ಲಿ ಬಿಸರಳ್ಳಿಯ ಮರುಳ ಸಿದ್ದೇಶ್ವರ ಜಾತ್ರೆ ನಡೆಯುತ್ತದೆ. ಮೊದ ಮೊದಲು ೧೦ ದಿವಸಗಳವರೆಗೆ ಉತ್ಸವ ನಡೆಯುತ್ತಿತ್ತು. ಈಗ ೩ ದಿವಸಗಳವರೆಗೆ ಮಾತ್ರ ನಡೆಯುತ್ತಲಿದೆ. ಜಾತ್ರೆಯಲ್ಲಿ ವಿಶೇಷವಾಗಿ ಪಲ್ಲಕ್ಕಿ ಉತ್ಸವ, ಪಾಯಸ ನಡೆಯುತ್ತದೆ. ಇದೇ ಸಂದರ್ಭದಲ್ಲಿ ಈ ಗುಡಿಯ ಮುಂಭಾಗದಲ್ಲೇ ಇರುವ ದೀಪದ ಮೇಲದ ಕಂಬವನ್ನು ಪೂಜಾರಿಯು ಏರಿ ಒಂಟಿಗಾಲಿನಲ್ಲಿ ದೀಪವನ್ನು ಹಚ್ಚುತ್ತಾನೆ.

ಮೂರನೆಯ ದಿವಸಕ್ಕೆ ಜಾತ್ರೆಯು ಆರಂಭವಾಗುತ್ತದೆ. ಪ್ರತಿವರ್ಷವು ಸರಿಸುಮಾರು ೨೫ ರಿಂದ ೩೦ ಸಾಮೂಹಿಕ ವಿವಾಹಗಳು ಏರ್ಪಡುತ್ತವೆ. ಈ ಊರಿನ ಪ್ರಮುಖ ವ್ಯಕ್ತಿಗಳು, ಶ್ರೀಮಂತ ವ್ಯಕ್ತಿಗಳು ದೇವದಾಸಿಯರಿಗೆ ‘ಜಿನಗಿ’ ಕೊಡುತ್ತಿದ್ದರು. (ಜಿನಗಿ ಎಂದರೆ ಜಾತ್ರೆಯ ಸಂದರ್ಭಗಳಲ್ಲಿ, ಹಬ್ಬ-ಹರಿದಿನಗಳಲ್ಲಿ, ಬಟ್ಟೆ ಬರೆ, ಆಕಳು ಕರು ಮುಂತಾದವುಗಳನ್ನು ನೀಡುವುದು) ಮೊದ ಮೊದಲು ೧೦ ರಿಂದ ೧೨ ದೇವದಾಸಿಯರ ಕುಟುಂಬಗಳು ಇದ್ದವು. ಆದರೆ ಇಂದು ಸರಿಸುಮಾರು ೪೦ ರಿಂದ ೪೫ ಕುಟುಂಬಗಳಾಗಿವೆ. ಬಿಸರಳ್ಳಿಯಲ್ಲಿ ದೇವದಾಸಿ ಪದ್ಧತಿ ಏಕೆ ಬೆಳೆಯುತ್ತಾ ಬಂದಿದೆ ಎಂದರೆ

ದೇವದಾಸಿಯಾದ ಹೆಣ್ಣುಮಗಳು ಮಠದ ಪೂಜಾರಿಯ ಮಕ್ಕಳು ಆಗಿರುವದರಿಂದ ಇಂತಹವರನ್ನು ಮದುವೆಯಾದರೆ ಪಾಪಬರಬಹುದೆಂಬ ನಂಬಿಕೆ ಇತ್ತು. ಆದ್ದರಿಂದ ಯಾರೂ ಮದುವೆಯಾಗುವುದಕ್ಕೆ ಮುಂದೇ ಬರದೇ ಇರುವುದರಿಂದ ಈ ಪದ್ಧತಿಯು ಮುಂದುವರಿಯಲಿಕ್ಕೆ ಕಾರಣವಾಗಿದೆ.

೩.೩. ಬಿಸರಳ್ಳಿಯ ದೇವದಾಸಿಯರ ಸಂಪ್ರದಾಯದ ಪರಿಚಯ

ಸಂಪ್ರದಾಯ ಬದ್ಧವಾಗಿ ಜೀವನ ನಡೆಸುತ್ತಿರುವ ಒಂದು ಜನಾಂಗ ತನ್ನದೇ ಆದ ವಿವಿಧ ಆಚರಣೆಗಳನ್ನು ಜೀವನ ಪರ್ಯಂತ ಅಳವಡಿಸಿಕೊಂಡಿರುತ್ತದೆ. ದೇವದಾಸಿಯರ ಜೀವನವೂ ಹಲವಾರೂ ವೈಶಿಷ್ಟ್ಯ ಪೂರ್ಣವಾದ ಆಚರಣೆಗಳಿಂದ ಕೂಡಿತ್ತು. ಇಲ್ಲಿ ಪ್ರಮುಖವಾಗಿ ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ. ದೈವಭಕ್ತಿ ಮತ್ತು ಆ ಭಕ್ತಿಯ ಆಶ್ರಯದಲ್ಲಿ ಬೆಳೆದು ಬಂದಿರುವ ಸಾಂಪ್ರದಾಯಿಕ ಆಚರಣೆಗಳು, ಈ ಆಚರಣೆಗಳೆಲ್ಲ ಪರಂಪರಾಗತ ನಂಬಿಕೆಗಳಾಗಿ ಮುಂದುವರಿದುಕೊಂಡು ಬಂದಿದೆ. ಪ್ರಸ್ತುತ ಅಧ್ಯಾಯದಲ್ಲಿ ಬಿಸರಳ್ಳಿಯ ದೇವದಾಸಿಯರಿಗೆ ಸಂಬಂಧಿಸಿದ ಕೆಲವು ಆಚರಣೆಗಳನ್ನು ಉಲ್ಲೇಖಿಸಲಾಗಿದೆ.

೩.೩.೧. ಜೀವನಾವರ್ತನ ಆಚರಣೆಗಳು

ಈ ಆಚರಣೆಗಳು ದೇವದಾಸಿಯರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದವುಗಳು ಕೂಡ ಆಗಿರುತ್ತವೆ. ಇಲ್ಲಿ ದೇವದಾಸಿಯರ ಕುಟುಂಬದಲ್ಲಿ ನಡೆಯುವ(ಹೆಣ್ಣಿನ ಬಯಕೆ) ಜನನ, ಋತುಮತಿ, ಮದುವೆ, ಶೋಭನ, ಮರಣ ಮೊದಲಾದ ಆಚರಣೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

೩.೩.೧.೧. ಜನನ ಸಂಸ್ಕಾರ

ಜೀವ ವಿಕಾಸದಲ್ಲಿ ಸಂತಾನೋತ್ಪತ್ತಿಗೆ ಅತ್ಯಂತ ಮಹತ್ವವಿದೆ. ವಿವಾಹದ ಮೂಲ ಉದ್ದೇಶವೂ ಇದೆ ಆಗಿದೆ. ಆರೋಗ್ಯಕರ ಸಂತಾನವನ್ನು ಸಹಜವಾಗಿಯೇ ಎಲ್ಲರೂ ಬಯಸುತ್ತಾರೆ. 'ಸೃಷ್ಟಿಕ್ರಿಯೆ'ಗೆ ಸಿದ್ಧಳಾಗುವ ಈ ಅವಧಿ ಹೆಣ್ಣಿನ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಮತ್ತು ಅಷ್ಟೇ ಸೂಕ್ಷ್ಮವಾದದು. ಅದಕ್ಕಾಗಿ ಈ ಸಂದರ್ಭದಲ್ಲಿ ಗರ್ಭಿಣಿ ಸ್ತ್ರೀಯರನ್ನು ಎಲ್ಲ ಸಮುದಾಯಗಳಲ್ಲಿ ಹೆಚ್ಚು ಅಕ್ಕರೆಯಿಂದ ಪೋಷಿಸಲಾಗುವುದು. ಅದರಲ್ಲೂ ಚೊಚ್ಚಲ ಬಸುರಿಯನ್ನು ಅತ್ಯಂತ ಕಾಳಜಿಯಿಂದ ನೋಡಿಕೊಳ್ಳಲಾಗುವುದು. ಅವಳಿಂದ ಕಠಿಣವಾದ ಕೆಲಸಗಳನ್ನು ಮಾಡಿಸುವುದಿಲ್ಲ. ಈ ಸಂದರ್ಭದಲ್ಲಿ ಗರ್ಭಿಣಿಯ ಆರೈಕೆಯನ್ನು ಅವಳ ತಾಯಿ ಅಥವಾ ಅಜ್ಜಿ ನೋಡಿಕೊಳ್ಳುತ್ತಾರೆ.

ಗರ್ಭವತಿಯಾದ ದೇವದಾಸಿಗೆ 'ಸೀಮಂತ'ವನ್ನು ಮಾಡುತ್ತಾರೆ. ಇದನ್ನು 'ಹೂ ಮೂಡಿಸಿವುದು' ಅಥವಾ 'ಬಯಕೆ ಮದಿ' ಎಂದು ಬಿಸರಳ್ಳಿಯಲ್ಲಿ ಕರೆಯುತ್ತಾರೆ. ಸಾಮಾನ್ಯವಾಗಿ ಗರ್ಭಿಣಿಯಾಗಿ ಏಳು ತಿಂಗಳು ತುಂಬುವಾಗ ಈ ಸಂಸ್ಕಾರವನ್ನು ನೆರವೇರಿಸಲಾಗುವುದು. ಸೀಮಂತದ ನಂತರ ಮುಂದೆ ಮಗುವಿನ ಜನನವಾಗಿ ಮೂರು ತಿಂಗಳವರೆಗೆ ಅವಳು ದೇವಸ್ಥಾನಕ್ಕೆ ಹೋಗುವಂತಿಲ್ಲ.

ಪುರೋಹಿತರಲ್ಲಿ ಪ್ರಸಕ್ತವಾದ ದಿನ ಕೇಳಿ 'ಬಯಕೆ'ಗೆ ಮುಹೂರ್ತ ಇಡುತ್ತಾರೆ. ಅಂದು ಸಂಬಂಧಿಕರಿಗೆಲ್ಲ ಆಮಂತ್ರಣ ಇರುತ್ತದೆ. ದೇವದಾಸಿಯನ್ನು ಇಟ್ಟುಕೊಂಡವನು ಅವಳಿಗೆ ಹೊಸಬಟ್ಟೆ, ಚಿನ್ನದ ಆಭರಣಗಳನ್ನು ಉಡುಗೊರೆಯಾಗಿ ಕೊಡುತ್ತಾನೆ. ಅಂದು ಅವಳಿಗೆ ಹೊಸ ಸೀರೆ ಉಡಿಸಿ, ಕೈತುಂಬ ಬಳೆ ಮತ್ತು ಆಭರಣ ತೊಡಿಸಿ, ಶೃಂಗಾರ ಮಾಡುತ್ತಾನೆ. ಬಯಕೆಯಲ್ಲಿ ಇತರ ಹೂಗಳೊಂದಿಗೆ ಸಿಂಗಾರದ ಹೂವನ್ನು ಬಳಸುವ ಪದ್ಧತಿ ಇದೆ. ನಂತರ ಶುಭ ಮಹೂರ್ತದಲ್ಲಿ ಗೆಜ್ಜೆಕಟ್ಟಿದ ಐದು ಮಂದಿ ದೇವದಾಸಿಯರು ಹೂ ಮುಡಿಸಿ, ಮಡಿಲು ತುಂಬಿ, ಆರತಿ ಬೆಳಗುತ್ತಾರೆ. ಮಡಿಲು ತುಂಬುವಾಗ, ಎಲೆ, ಅಡಿಕೆ, ತೆಂಗಿನಕಾಯಿ, ಅಕ್ಕಿ ಮೊದಲಾದ ವಸ್ತುಗಳನ್ನು ಬಳಸುತ್ತಾರೆ. ಅಂದು ಊರಿನ ಪ್ರಧಾನ ದೇವರಾದ ಮರುಳ ಸಿದ್ದೇಶ್ವರನಿಗೆ ವಿಶೇಷ ಪೂಜೆ ನಡೆಯುತ್ತದೆ. ಆ ದಿನ 'ಗರ್ಭಿಣಿ' ಬಯಸುವ ತಿಂಡಿಯನ್ನೆಲ್ಲ ತಯಾರಿಸಿ ಉಣಬಡಿಸುತ್ತಾರೆ. ವಿಶೇಷವಾದ ಕರಿದ ತಿಂಡಿಗಳಾದ ಚಕ್ಕಲಿ, ಉಂಡೆ ಮುಂತಾದವುಗಳನ್ನು ಮಾಡುತ್ತಾರೆ.

ಸೀಮಂತಶಾಸ್ತ್ರ ಮುಗಿದ ಮೇಲೆ ಮುಂದೆ ಹೆರಿಗೆ ಆಗುವವರೆಗೆ ಆಕೆ ವಿಶ್ರಾಂತಿ ಪಡೆಯುತ್ತಾಳೆ. ನೆರೆ ಹೊರೆಯವರು, ಸಂಬಂಧಿಗಳು, ಊಟಕ್ಕೆ ಆಹ್ವಾನಿಸಿ ಇಷ್ಟವಾದ ತಿಂಡಿ ಮಾಡಿ ಬಡಿಸುತ್ತಾರೆ. ಆಕೆಯ ಶಾರೀರಿಕ ಲಕ್ಷಣವನ್ನು ಗಮನಿಸಿ ಅನುಭವಿ ಸ್ತ್ರೀಯರು ಮಗು ಗಂಡು, ಹೆಣ್ಣೋ? ಎಂದು ಲೆಕ್ಕ ಹಾಕುತ್ತಾರೆ. ಹೆರಿಗೆ ಸುಸೂತ್ರವಾಗಿ ಆಗುವಂತೆ ಕುಲದೈವಕ್ಕೆ ಹರಕೆ ಹೇಳಿಕೊಳ್ಳುವುದು ಇದೆ. ಹಿಂದೆ ಆಸ್ಪತ್ರೆಗಳು ಇರದ ಕಾಲದಲ್ಲಿ ಮನೆಯಲ್ಲಿಯೇ ಪ್ರಸೂತಿ ಕಾರ್ಯ ನಡೆಯುತ್ತಿತ್ತು.

ಗರ್ಭಿಣಿಗೆ ಪ್ರಸವ ವೇದನೆ ಪ್ರಾರಂಭವಾದ ಮೇಲೆ ಕೂಡಲೇ ಊರಿನಲ್ಲಿ ಈ ಕೆಲಸದಲ್ಲಿ ಅನುಭವ ಇರುವ ಹೆಂಗಸರನ್ನು ಕರೆಸುತ್ತಾರೆ. ನೆರೆಹೊರೆಯ ಹೆಂಗಸರು ಆಕೆಗೆ ಸಹಾಯ ಮಾಡುವರು. ಮನೆಯಲ್ಲಿ ತಾಯಿ ಮತ್ತಿತರರು ಹೆರಿಗೆ ಮಾಡಿಸುವ ಸ್ಥಳವನ್ನು ಶುಚಿಗೊಳಿಸಿ ಗರ್ಭಿಣಿಯನ್ನು ಅಲ್ಲಿ ಮಲಗಿಸುತ್ತಾರೆ. ಶಿಶು ಜನಿಸಿದ ಕೂಡಲೇ ಹುಟ್ಟಿದ ಸಮಯವನ್ನು ಗುರುತು ಹಾಕಿ ಊರಿನ ಜೋಯಿಸರಲ್ಲಿ ಮಗುವಿನ ಜನನದ ಗಳಿಗೆಯನ್ನು, ಒಳಿತು-ಕೆಡಕುಗಳನ್ನು ಕೇಳುತ್ತಾರೆ. ಮಗುವಿನ ಜನನ ಕುಂಡಲಿಯನ್ನು ಬರೆಸುತ್ತಾರೆ. ದೇವದಾಸಿಯರು ಹೆಣ್ಣು ಮಗು ಜನಿಸಿದರೆ ಸಂಭ್ರಮಪಡುತ್ತಾರೆ. ದೇವರಿಗೆ ಅರ್ಪಿಸುವ ಮಗು. ದೇವರ ಸೇವೆ ಮಾಡಲು ದೇವರೇ ನೀಡಿದ ಮಗು ಎಂಬ ಭಾವನೆ ಇರುತ್ತದೆ.

ಹೆರಿಗೆಯಾದ ನಂತರ ಹನ್ನೊಂದು ದಿನಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ಈ ಅವಧಿಯಲ್ಲಿ ಕುಟುಂಬದ ಯಾವುದೇ ಶುಭಕಾರ್ಯಗಳು ನಡೆಯುವುದಿಲ್ಲ. ಸೂತಕವಿರುವವರು ಯಾರು ದೇವಸ್ಥಾನವನ್ನು ಪ್ರವೇಶಿಸುವಂತಿಲ್ಲ. ಈ ಸಂದರ್ಭದಲ್ಲಿ ದೇವಾಲಯದ ನೃತ್ಯ ಸೇವೆಗೆ ಬೇರೆ ದೇವಾಲಯಗಳಲ್ಲಿರುವ ತಮ್ಮ ಪರಿಚಯದ ದೇವದಾಸಿಯರನ್ನು ಕರೆಸುತ್ತಾರೆ. ಇದರ ಜವಾಬ್ದಾರಿ ಸೂತಕದಲ್ಲಿರುವ ದೇವದಾಸಿಯರಿಗೆ ಸಂಬಂಧಿಸಿದ್ದು. ಹನ್ನೊಂದನೆಯ ದಿನ ನಾಮಕರಣ. ಅಂದು-ಪುರೋಹಿತರು ಬಂದು

[illegible]

[illegible]

[illegible]

[illegible]

[illegible]

'ಪುಣ್ಯಪ್ರವಚನ' ಮಾಡಿ ಮನೆಗೆಲ್ಲ ತೀರ್ಥ ಸಿಂಪಡಿಸುವುದರ ಮೂಲಕ ಸೂತಕ ತೆಗೆಯುವರು. ಅಂದೇ ಪುರೋಹಿತರ ಸಮ್ಮುಖದಲ್ಲಿ ನಾಮಕರಣ ಹಾಗೂ ಮಗುವನ್ನು ತೊಟ್ಟಿಲಿಗೆ ಹಾಕುವ ಸಿದ್ಧತೆಗಳು ನಡೆಯುತ್ತವೆ. ಮಗು ಹುಟ್ಟಿದ ಗಳಿಗೆ ಶುಭವಲ್ಲದಿದ್ದರೆ ಅದಕ್ಕೆ ಪರಿಹಾರ ಮಾಡುತ್ತಾರೆ.ಮಗು ಹುಟ್ಟಿದ ನಕ್ಷತ್ರಕ್ಕನುಗುಣವಾಗಿ ಯಾವ ಅಕ್ಷರದಿಂದ ಹೆಸರಿಡಬೇಕೆಂದನ್ನು ಪುರೋಹಿತರು ಸೂಚಿಸುವರು. ತೊಟ್ಟಿಲಿಗೆ ಶೃಂಗಾರ ಮಾಡಿ ಪೂಜೆ ಮಾಡಿದ ಬಳಿಕ ಗೆಜ್ಜೆ ಕಟ್ಟಿದ ದೇವದಾಸಿಯರು ಶಿಶುವನ್ನು ತೊಟ್ಟಿಲಿಗೆ ಹಾಕುವರು. ನಂತರ ಎಲ್ಲರಿಗೂ ಸಿಹಿ ತಿಂಡಿ ಹಂಚುವರು. ಗಂಡು ಮಗು ಹುಟ್ಟಿದರೂ ಇಂತಹ ಆಚರಣೆ ಮಾಡುತ್ತಿದ್ದರು.

ಹೆಣ್ಣು ಮಗು ಬೆಳೆದಂತೆ ತಾಯಿಯನ್ನೇ ಅನುಸರಿಸುವುದು. ತಾಯಿ ಕುಣಿದಂತೆ ಕುಣಿಯಲು, ಹಾಡಿದಂತೆ ಹಾಡಲು ಅಭ್ಯಾಸ ಮಾಡುವುದು. ವಿದ್ಯಾಭ್ಯಾಸ ಮಾಡುವ ವಯಸ್ಸಿಗೆ ಗುರುಮಠಕ್ಕೆ ಅಥವಾ ಸಂಗೀತ, ನೃತ್ಯ, ವಿದ್ವಾಂಸರಲ್ಲಿಗೆ ಕಳುಹಿಸುತ್ತಿದ್ದರು. ಶಾಲೆಗಳು ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಶಿಕ್ಷಣವು ವಿದ್ಯೆ ಕಲಿತ ವಿದ್ವಾಂಸರ ಮನೆಗಳಲ್ಲಿ ನಡೆಯುತ್ತಿದ್ದವು. ಐಗಳ ಮಠದಲ್ಲಿ ಅಂಗಳದಲ್ಲಿ ಮರಳನ್ನು ಹಾಕಿ ಬೆರಳಿನಿಂದ ಬರೆಯುವುದು ಪ್ರಾರಂಭವಾಗುತ್ತದೆ. ತಾಯಿ ಮಗುವನ್ನು ಐಗಳ ಮಠಕ್ಕೆ ಕರೆದುಕೊಂಡು ಹೋಗಿ "ಶ್ರೀ ಗಣಾಧಿಪತಯೇ ನಮಃ" ಎಂದು ಮರಳಿನಲ್ಲಿ ಬರೆಯಿಸುತ್ತಿದ್ದಳು. ಬರವಣಿಗೆ ಕಲಿತ ಮೇಲೆ ಹಾಗ, ವೀಸ, ಬೇಳೆ, ಮುಪ್ಪಾಗ ಮುಂತಾದ ಅಳತೆಯ ಲೆಕ್ಕಗಳನ್ನು ಕಲಿಸುತ್ತಿದ್ದರು. ಯಕ್ಷಗಾನ ಪ್ರಸಂಗಗಳನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದರು. ಶಾಲೆಗೆ ಹೋಗಲು ಅನುಕೂಲತೆ ಇಲ್ಲದವರು ಮನೆಯಲ್ಲೇ ಹಾಡು, ಕಾಲುಹೆಜ್ಜೆ, ಕೈಕಾಟಗಳನ್ನು ಮಗುವಿಗೆ ಕಲಿಸುತ್ತಿದ್ದರು.

೩.೩.೧.೨. ಗೆಜ್ಜೆ ಪೂಜೆ

'ಗೆಜ್ಜೆ ಪೂಜೆ' ಕಾರ್ಯಕ್ರಮದ ಮೂಲಕ ಚಿಕ್ಕ ಹುಡುಗಿಗೆ ದೇವದಾಸಿ ದೀಕ್ಷೆ ನೀಡಲಾಗುತ್ತದೆ. ಈ ಕಾಯಕ್ರಮವನ್ನು 'ಮರುಳ ಸಿದ್ದೇಶ್ವರ' ದೇವಸ್ಥಾನದಲ್ಲಿ ಸಾರ್ವಜನಿಕ ಸಮಾರಂಭದಲ್ಲಿ ನಡೆಸುತ್ತಿದ್ದರು. ಈ ಧಾರ್ಮಿಕ ಕ್ರಿಯೆಯನ್ನು ನಡೆಸುವುದರ ಮೂಲಕ ಆಕೆಯು ದೇವದಾಸಿಯಾಗಿ ನಿಯುಕ್ತಿಗೊಳ್ಳುತ್ತಿದ್ದಳು. ಹುಡುಗಿ ಇನ್ನೂ ಕನ್ಯೆಯಾಗಿರುವಾಗಲೇ ಅಂದರೆ ಹತ್ತು ಹನ್ನೊಂದು ವರ್ಷವಾಗುತ್ತಿರುವಾಗಲೇ ಈ ಕಾರ್ಯಕ್ರಮ ನೆರವೇರುತ್ತಿತ್ತು. ಆಕೆ 'ಮೈನೆರೆ'ಯುವ ಮೊದಲೇ ದೇವರಿಗೆ ಅರ್ಪಿತಳಾಗಬೇಕಾಗುತ್ತಿತ್ತು.

ಪ್ರಾರಂಭದಲ್ಲಿ ಹುಡಿಗಿಯ ಗುರುಬಲದ ಬಗ್ಗೆ ಪುರೋಹಿತರಲ್ಲಿ ವಿಚಾರಿಸಿ 'ಗೆಜ್ಜೆ ಪೂಜೆ'ಗೆ ಸೂಕ್ತ ದಿನ ಗೊತ್ತು ಮಾಡುತ್ತಾರೆ. ನಂತರ ಮದುವೆಯ ಪೂರ್ವಭಾವಿ ತಯಾರಿಗಳು ನಡೆಯುತ್ತವೆ. ಊರಿನ ಪ್ರಮುಖರಿಗೆ, ಬಂಧುಗಳಿಗೆ ಮತ್ತು ಓಲಗದವರಿಗೆಲ್ಲ ಹೇಳಿಕೆ ಮಾಡುತ್ತಾರೆ. ಮದುವೆಗೆ ಮುಖ್ಯವಾಗಿ ಬೇಕಾಗುವ ಕರಿಮಣಿ, ಗೆಜ್ಜೆ, ಕಾಲುಂಗುರಗಳನ್ನು ತಯಾರಿಸುತ್ತಾರೆ. ಹುಡುಗಿಗೆ ಮತ್ತು ಬಂಧುಗಳಿಗೆ ಬೇಕಾಗುವ ಹೊಸ ಬಟ್ಟೆಗಳನ್ನು ಖರೀದಿಸುತ್ತಾರೆ. ಮನೆಗೆ ಸುಣ್ಣ, ಬಣ್ಣ, ಹಚ್ಚಿ

ಶುಭದಿನದಂದು ಚಪ್ಪರ ಹಾಕುತ್ತಾರೆ. ಈ ಎಲ್ಲ ಕೆಲಸ ಕಾರ್ಯಗಳ ಜವಾಬ್ದಾರಿಯನ್ನು ಹುಡುಗಿಯ ಸೋದರ ಮಾವ ವಹಿಸುತ್ತಾನೆ. ಮದುವೆಯ ಹಿಂದಿನ ದಿನವೇ ನೆಂಟರಿಷ್ಟರೆಲ್ಲ ಬಂದು ಸೇರುತ್ತಾರೆ. ನಿಶ್ಚಿತ ದಿನದಂದು ದೇವಸ್ಥಾನದಲ್ಲಿ ಇವರ ವತಿಯಿಂದ ವಿಶೇಷ ಪೂಜೆ ಇರುತ್ತದೆ. ಅಂದು ಊರಿನ ದೇವದಾಸಿಯರೆಲ್ಲ ಬಂದು ಹುಡುಗಿಗೆ ಸ್ನಾನ ಮಾಡಿಸಿ, ಹೊಸ ಸೀರೆ ಉಡಿಸಿ ಅಲಂಕಾರ ಮಾಡುತ್ತಾರೆ. ನಂತರ ವಾದ್ಯಗಳ ಸಂಭ್ರಮ ದೊಂದಿಗೆ ದೇವಸ್ಥಾನಕ್ಕೆ ದಿಬ್ಬಣ ಹೋಗುತ್ತಾರೆ. ದಿಬ್ಬಣದಲ್ಲಿ ಮನೆಯವರೊಂದಿಗೆ ನೆಂಟರು ಇಷ್ಟ ಮಿತ್ರರೆಲ್ಲ ಭಾಗವಹಿಸುತ್ತಾರೆ. ದಿಬ್ಬಣದ ಜೊತೆಗೆ ಪೂಜೆಯ ಸಾಮಾನು, ಹಣ್ಣು-ಕಾಯಿ, ಗೆಜ್ಜೆ, ಕರಿಮಣಿ, ಹೂ-ಮಾಲೆಗಳನ್ನು ತೆಗೆದುಕೊಂಡು ಹೋಗುತ್ತಾರೆ.

ದಿಬ್ಬಣ ದೇವಾಲಯಕ್ಕೆ ಬಂದ ನಂತರ ಮದುವೆಯ ಧಾರ್ಮಿಕ ಕಾರ್ಯಗಳು ಅರ್ಚಕರಿಂದ ನಡೆಯುತ್ತದೆ. ಜೊತೆಯಲ್ಲಿ ತಂದಿರುವ ಗೆಜ್ಜೆ ಕರಿಮಣಿ, ಕಾಲುಂಗುರಗಳನ್ನು ಪೂಜೆಗೆ ಇಡಬೇಕು. ಹೂಮಾಲೆಯನ್ನು ಅರ್ಚಕರು ದೇವರ ಕೊರಳಿಗೆ ಹಾಕುತ್ತಾರೆ. ಮುಖ್ಯ ಅರ್ಚಕರಿಂದ ದೇವರಿಗೆ ಪೂಜೆಯಾದ ಬಳಿಕ ಮೂಹೂರ್ತದ ಸಮಯಕ್ಕೆ ಬ್ರಾಹ್ಮಣರಿಗೆ ಫಲದಾನ ಕೊಡುತ್ತಾರೆ. ಅರ್ಚಕರು ದೇವರ ಕೊರಳಿಗೆ ಹಾಕಿದ ಹೂ-ಮಾಲೆಯನ್ನು ಮತ್ತು ಪೂಜೆಗಿಟ್ಟ ಕರಿಮಣಿ ಕಾಲುಂಗುರಗಳನ್ನು ದೇವದಾಸಿಯರಿಗೆ ಕೊಡುತ್ತಾರೆ. ನಂತರ ಹೂ-ಮಾಲೆಯನ್ನು ಐದು ಮಂದಿ ದೇವದಾಸಿಯರು ಮುಟ್ಟಿ ಹುಡಿಗಿಯ ಕೊರಳಿಗೆ ಹಾಕುತ್ತಾರೆ. ಕರಿಮಣಿ ಕಟ್ಟಿ ಕಾಲುಂಗರ ಇಡುತ್ತಾರೆ. ಪೂಜೆಗೆ ಇಟ್ಟಿರುವ ಗೆಜ್ಜೆಯನ್ನು ಐದು ಮಂದಿ ದೇವದಾಸಿಯರು ಸೇರಿ ಹುಡುಗಿಯ ಕಾಲಿಗೆ ಕಟ್ಟುತ್ತಾರೆ. ಕರಿಮಣಿಯಲ್ಲಿ ಒಂದು ತಾಳಿ ಎರಡು ಗುಂಡು ಇರುತ್ತಿತ್ತು. ಈ ಮದುವೆಯಲ್ಲಿ ಇತರ ಸಮುದಾಯಗಳ ಮದುವೆಯಲ್ಲಿ ಇರುವಂತೆ 'ಧಾರೆ' ಎರೆಯುವ ಮತ್ತು 'ಸಪ್ತಪದಿ' ತುಳಿಯುವ ಪದ್ಧತಿಯಿಲ್ಲ. ಗೆಜ್ಜೆ ಕಟ್ಟಿದ ಹುಡುಗಿಯು ದೇವರಿಗೆ ಕೈಮುಗಿದು, ತಾಯಿ, ಅಜ್ಜಿ ಮತ್ತು ಹಿರಿಯರೆಲ್ಲರ ಆಶೀರ್ವಾದ ಪಡೆಯುತ್ತಾಳೆ.

''ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ 'ಗಂಡಾ ಕಟ್ಟುವುದು' ಎನ್ನುತ್ತಾರೆ. ಈ ಪದ್ಧತಿಯನ್ನು 'ಪಾತರದ' ಜನಾಂಗದವರು ಆಚರಿಸಿಕೊಂಡು ಬರುತ್ತಿದ್ದರು. ''ನೃತ್ಯವಾಗಲಿ, ಸಂಗೀತವಾಗಲೀ ಅದರಲ್ಲಿ ಪಾತರ ಹೆಣ್ಣು ಪ್ರವೇಶ ಪಡೆಯುವ ಸಂದರ್ಭದಲ್ಲಿ 'ಗಂಡಾ ಕಟ್ಟುವುದು' ಎಂಬ ಧಾರ್ಮಿಕ ಪದ್ಧತಿಯನ್ನು ಮಾಡುವರು. ಅವರ ಕಲಾ ಪರಂಪರೆಯಲ್ಲಿ ಅತ್ಯಂತ ಪ್ರಮುಖವಾದ ಧಾರ್ಮಿಕ ಕಾರ್ಯಕ್ರಮವಿದು. ಅವರಿಗೆ ಕಲೆಯ ನೃತ್ಯ, ಸಂಗೀತ, ಶಿಕ್ಷಣ ನೀಡುವ ಗುರುಗಳು ಈ ಪದ್ಧತಿಯನ್ನು ನೆರವೇರಿಸುತ್ತಿದ್ದರು. ಗುರು ಶಿಷ್ಯಳನ್ನು ಶಿಷ್ಯೆ ಗುರುವನ್ನು ಒಪ್ಪಿಕೊಂಡ ಹಾಗೆ ಪ್ರತಿಜ್ಞೆ ಗೈಯುವ ಕಾರ್ಯಕ್ರಮವೇ 'ಗಂಡಾ ಕಟ್ಟುವುದು'. ಗಂಡಾ ಕಟ್ಟಿಸಿಕೊಳ್ಳುವುದು ಅವರಿಬ್ಬರ ಮಧ್ಯೆ ಇಂತಿಷ್ಟು ವರ್ಷಗಳವರೆಗೆ ಶಿಕ್ಷಣ ಸಂಬಂಧದ ಒಪ್ಪಂದವಿರುತ್ತದೆ. ಈ ಅವಧಿ ಮುಗಿಯುವವರೆಗೆ ಆಕೆ ಬೇರೆ ಗುರುವನ್ನು ಸ್ವೀಕರಿಸುವಂತಿಲ್ಲ. ಗುರು ಶಿಷ್ಯೆಯನ್ನು ಒಪ್ಪಿಕೊಳ್ಳಬಹುದು.'' ಗಂಡಾ ಕಟ್ಟಿಸಿಕೊಳ್ಳುವುದು

ಪಾತರದ ಹುಡುಗಿಗೆ ದೀಕ್ಷೆ ಕೊಡಲಾಗುತ್ತದೆ.ಬಿಸರಳ್ಳಿಯಲ್ಲಿ ನೃತ್ಯ ಕಲಿತ ಹುಡುಗಿಗೆ ಗೆಜ್ಜೆ ಪೂಜೆಯ ಮೂಲಕ ದೇವದಾಸಿ ದೀಕ್ಷೆ ನೀಡಲಾಗುತ್ತಿತ್ತು.

ಸವದತ್ತಿ ಎಲ್ಲಮ್ಮನಿಗೆ ಹುಡುಗಿಯನ್ನು ಅರ್ಪಿಸುವ ದೀಕ್ಷಾ ಸಮಾರಂಭವನ್ನು 'ದೇವರಿಗೆ ಬಿಡುವುದು' ಅಥವಾ 'ದೇವರು ಕಟ್ಟುವುದು' ಎಂದು ಹೇಳುತ್ತಾರೆ. ಈ ಕಾರ್ಯಕ್ರಮ ಎಲ್ಲಮ್ಮನ ಗುಡ್ಡದಲ್ಲಿ ಹಿರಿಯ ಜೋಗತಿಯರ ನೆರವಿನಿಂದ ನಡೆಯುತ್ತದೆ. ''ಗುಡ್ಡದಲ್ಲಿ ಮುತ್ತು ಕಟ್ಟಿಸಿಕೊಳ್ಳಬೇಕೆನ್ನುವವರು ಬಂಧು ಬಾಂಧವರೊಡನೆ ಹಿರಿಯ ಜೋಗತಿಯರೊಂದಿಗೆ ಕಾಣಿಕೆ ಸಮೇತ ಪೂಜಾರಿಯ ಮನೆಗೆ ಹೋಗುವರು. ಅಲ್ಲಿ ಎಲ್ಲಮ್ಮ ಮತ್ತು ಪರಶುರಾಮನ ಪೂಜೆಯ ನಂತರ ಜೋಗತಿಯಾಗುವವರಿಗೆ ಹಿರಿಯ ಜೋಗತಿಯರು ಕೊರಳಲ್ಲಿ ಮಾಲೆ ಹಾಕುತ್ತಾರೆ. ಪೂಜಾರಿ ತಾಳಿ ಕಟ್ಟುತ್ತಾನೆ. ಆ ಮೇಲೆ ನಿತ್ಯ ಬದುಕಿನಲ್ಲಿ ಪಾಲಿಸಬೇಕಾದ ವಿಧಿಗಳನ್ನು ಹೇಳಿಕೊಡುತ್ತಾನೆ. ಊರಿಗೆ ಬಂದ ಮೇಲೆ ಐದು ಮನೆ ಜೋಗಾಡಿ ಐದು ದಿನ ಬಡವರಿಗೆ ಹಿರಿಯ ಜೋಗತಿಯರಿಗೆ ಊಟ ಹಾಕುವರು.''[೨]

೩.೩.೧.೩. 'ಮೈ ನೆರೆಯುವುದು' (ಋತುಶಾಂತಿ)

ಹೆಣ್ಣಿನ ಜೀವನದ ಎರಡು ಮಹತ್ವದ ಘಟ್ಟಗಳೆಂದರೆ ಪ್ರೌಢಾವಸ್ಥೆ ಮತ್ತು ಗರ್ಭಾವಸ್ಥೆ. ಈ ಅವಧಿಯಲ್ಲಿ ಹೆಣ್ಣು ದೈಹಿಕವಾಗಿ ಮತ್ತು ಮಾನಸಿಕವಾಗಿ ಬದಲಾವಣೆಗೆ ಒಳಪಡುತ್ತಾಳೆ. ಸೃಷ್ಟಿ ಕ್ರಿಯೆಯಲ್ಲಿ ಹೆಣ್ಣು ಗಂಡಿಗಿಂತ ಭಿನ್ನ ಪಾತ್ರವಹಿಸುವುದರಿಂದ ಹೆಣ್ಣಿನ ಬದುಕಿಗೆ ಸಂಬಂಧಿಸಿದಂತೆ ಈ ಸಂದರ್ಭವನ್ನು ವಿಶಿಷ್ಟವಾಗಿ ಪರಿಗಣಿಸಲಾಗುತ್ತದೆ. ಆದುದರಿಂದ ಪ್ರತಿಯೊಂದು ಸಮಾಜವು ಹೆಣ್ಣನ್ನು ಈ ಸಮಯದಲ್ಲಿ ಎಚ್ಚರಿಕೆಯಿಂದ ನೋಡಿಕೊಳ್ಳುವುದಕ್ಕಾಗಿ ಹಲವಾರು ಸಂಪ್ರದಾಯಗಳನ್ನು ಹೊಂದಿದೆ.

ದೇವದಾಸಿಯಾದ ಹೆಣ್ಣು ಋತುಮತಿಯಾದ ಬಳಿಕ ೫ ದಿನಗಳ ಸಂಭ್ರಮದ ಆಚರಣೆ ಮಾಡುತ್ತಾರೆ. ಇದನ್ನು ರೂಢಿಯಲ್ಲಿ ಹೆಣ್ಣು 'ದೊಡ್ಡವಳಾದಳು' ಎಂದು ಕರೆಯುತ್ತಾರೆ. ಮೊದಲ ದಿನ ಜಾತಿಯ ಹೆಂಗಸರನ್ನೆಲ್ಲ ಕರೆಯುತ್ತಾರೆ. ಜಾತಿಯ ಹೆಂಗಸರು ಮತ್ತು ದೇವದಾಸಿಯರು ಬಂದು ಹುಡುಗಿಯ ಕೈಯಿಂದ 'ಚಟ್ಟು' ಹೊಯ್ಯುತ್ತಾರೆ. ಅದಕ್ಕಾಗಿ ಅರಿಸಿನ ಕಡೆದು ಸುಣ್ಣ ಹಾಕಿ ಕೆಂಪು ಮಾಡಿದ ಬಣ್ಣ ತಯಾರಿಸುತ್ತಾರೆ. ಹುಡುಗಿಯ ಕೈಯನ್ನು ಆ ಬಣ್ಣದಲ್ಲಿ ಅದ್ದಿ ಗೋಡೆಗೆ ಬಡಿಯಬೇಕು. ಮೊದಲು ಒಂದು, ಕೆಳಗೆ ಮೂರು, ಮತ್ತೇ ಐದು ಹೀಗೆ ಮೇಲಿನಿಂದ ಕೆಳಗೆ ಚಟ್ಟು ಹೊಯ್ಯುತ್ತಾರೆ. ಇದಾದ ಬಳಿಕ ಹುಡುಗಿಯನ್ನು ಕೂರಿಸಿ. ಐದು ಮಂದಿ ದೇವದಾಸಿಯರು ಆರತಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಹುಡುಗಿಯು ದೇವರ ಕೋಣೆ, ಅಡಿಗೆ ಕೋಣೆಗಳಿಗೆ ಹೋಗುವಂತಿಲ್ಲ. ಮುಂದಿನ ನಾಲ್ಕು ದಿನವೂ ದಿನಕ್ಕೊಂದು ರೀತಿಯ ಕಜ್ಜಾಯ ಮಾಡಿ ತಿನಿಸಬೇಕು. ಅದರಲ್ಲಿ ಹೆಚ್ಚಾಗಿ ಬೆಲ್ಲದಿಂದ ಮಾಡಿದ ತಿನಿಸುಗಳನ್ನೇ ತಯಾರಿಸುತ್ತಾರೆ. ಸುಕುನುಂಡೆ, ಕರ್ಜಿಕಾಯಿ, ಶಾವಿಗೆ, ಮಾಲ್ ಪುರಿಗಳನ್ನು ಮಾಡಿ ಬಡಿಸುತ್ತಾರೆ ಮತ್ತು ಬಂದವರಿಗೆಲ್ಲ ಹಂಚುತ್ತಾರೆ.

ನಾಲ್ಕನೇ ದಿನ ಸ್ನಾನ ಮಾಡಿಸಲು ಮಡಿವಾಳ್ತಿ ಬರಬೇಕು. ಮಡಿವಾಳ್ತಿಯು ಎಣ್ಣೆ ಹಚ್ಚಿ ಐದು ಕೊಡ ನೀರು ಹಾಕಿ ಸ್ನಾನ ಮಾಡಿಸಬೇಕು. ಹೆಣ್ಣು ಋತುಮತಿಯಾದಾಗ ಉಟ್ಟಿದ್ದ ಬಟ್ಟೆಯನ್ನು ಮನೆಯವರು ತೊಳೆಯುವಂತಿಲ್ಲ. ಅದನ್ನು ಮಡಿವಾಳ್ತಿಯೇ ಒಗೆದು ತೆಗೆದುಕೊಂಡು ಹೋಗಬೇಕು. ಸ್ನಾನವಾದ ಬಳಿಕ ಗೋಡೆಗೆ ಹಚ್ಚಿರುವ ಹಳೆಯ ಚಟ್ಟನ್ನು ಅಳಿಸಿ ಹೊಸ ಚಟ್ಟು ಹೊಯ್ಯುತ್ತಾರೆ. ಹುಡುಗಿಗೆ ಹೊಸ ಬಟ್ಟೆ ಉಡಿಸಿ, ತಲೆಬಾಚಿ, ಕುಂಕುಮವಿಟ್ಟು ಶೃಂಗರಿಸುತ್ತಾರೆ, ನಂತರ ಹುಡುಗಿಯನ್ನು ಕೂರಿಸಿ ದೇವದಾಸಿಯರು ಆರತಿ ಮಾಡಿ ಮಡಿಲು ತುಂಬುತ್ತಾರೆ.

ಐದನೆಯ ದಿನ ಪರಿವಾರದವರು, ನೆಂಟರಿಷ್ಟರು ಬರುತ್ತಾರೆ, ಬರುವಾಗ ಹಾಲು, ತುಪ್ಪ, ತಿಂಡಿ, ತಿನಿಸುಗಳನ್ನು ತಂದು ಹುಡುಗಿಗೆ ಬಡಿಸಬೇಕು. ಮಧ್ಯಾಹ್ನ ನೆರೆದ ಬಂಧುಗಳಿಗೆಲ್ಲ ಊಟೋಪಚಾರದ ವ್ಯವಸ್ಥೆಯು ಇರುತ್ತಿತ್ತು. ಸಾಮಾನ್ಯವಾಗಿ ಅದೇ ದಿನ ಪ್ರಸ್ಥ ಮಾಡಿಸುವ ಪದ್ಧತಿಯೂ ಇತ್ತು. ಕೆಲವೊಮ್ಮೆ ಎರಡು ವರ್ಷಗಳ ನಂತರವೂ ಮಾಡಿಸುತ್ತಿದ್ದರು. ಪ್ರಸ್ಥ ಆಗುವವರೆಗೆ 'ದೊಡ್ಡವಳಾದ ದೇವದಾಸಿ'ಯು ಮನೆಯ 'ಹೊಸ್ತಿಲ ದಾಟಿ ಎಲ್ಲೂ ಹೊರಗೆ ಹೋಗಲಿಕ್ಕಿಲ್ಲ. ದೇವಸ್ಥಾನಕ್ಕೂ ಹೋಗಬಾರದು. ಪ್ರಸ್ಥವಾದ ಬಳಿಕವೇ ದೇವರ ಸೇವೆ ಎನ್ನುವ ನಿಯಮವಿತ್ತು.

೩.೩.೧.೪. ಶೋಭನ ಶಾಸ್ಥ

ಸಾಮಾನ್ಯವಾಗಿ ಹುಡುಗಿಯನ್ನು ಬಯಸಿದ ಶ್ರೀಮಂತರು ಹಣಕೊಟ್ಟು ಶಾಸ್ಥವನ್ನು ಮಾಡಿಸುತ್ತಿದ್ದರು. ಬ್ರಾಹ್ಮಣ, ಬಂಟ, ಜೈನ, ಗೌಡ, ಸಾರಸ್ವತ ಮೊದಲಾದ ಜಾತಿಯವರೊಂದಿಗೆ ಪ್ರಸ್ಥ ನಡೆಯುತ್ತಿತ್ತು. ಹಿಂದುಳಿದ ಜಾತಿಯವರೊಂದಿಗೆ ಶೋಭನ ಮಾಡಿಸುತ್ತಿರಲಿಲ್ಲ. ಊರಿನ ಪ್ರಬಲ ವ್ಯಕ್ತಿ, ಅವನ ದೈಹಿಕ ದಾರ್ಢ್ಯತೆ, ಶ್ರೀಮಂತಿಕೆ, ಗೌರವ ಮುಂತಾದವುಗಳನ್ನು ನೋಡಿ ಆಯ್ಕೆ ಮಾಡುತ್ತಿದ್ದರು. ಈ ಆಯ್ಕೆಯ ಕಾರ್ಯವನ್ನು ದೇವದಾಸಿಯ ತಾಯಿ ಮಾಡುತ್ತಿದ್ದಳು. ಹುಡುಗಿಯ ಸೋದರ ಮಾವ ಮಧ್ಯವರ್ತಿಯ ಕೆಲಸ ಮಾಡುತ್ತಿದ್ದ.

ಶಾಸ್ಥದ ದಿನ ಮನೆಯಲ್ಲಿ ಪುರೋಹಿತರು ಬಂದು ಹೋಮ ಮಾಡಬೇಕು. ಜೊತೆಯಲ್ಲಿ ಒಂದು ತೆಂಗಿನ ಕಾಯಿಯನ್ನು ಇಡುತ್ತಾರೆ. ಇಲ್ಲವೇ ತೆಂಗಿನ ಗಿಡವನ್ನು ಪುರುಷನ ಸ್ಥಾನದಲ್ಲಿ ಇಡುವುದು ಇದೆ. ಮನೆಯಲ್ಲಿ ಹವನಾದಿಗಳೆಲ್ಲ ಮುಗಿದ ಬಳಿಕ ತೆಂಗಿನ ಕಾಯಿ ಮದುಮಗಳು ಮತ್ತು ಪರಿವಾರದವರೆಲ್ಲ ಊರಿನ ಪ್ರಮುಖ ದೇವಸ್ಥಾನಕ್ಕೆ ದಿಬ್ಬಣ ಹೋಗಬೇಕು. ಅಲ್ಲಿ ಗಂಡಿನ ಪ್ರತೀಕವಾಗಿ ತಂದಿರುವ ತೆಂಗಿನ ಕಾಯಿಯನ್ನು ಪೂಜೆಗೆ ಇಡುತ್ತಾರೆ. ಅಂದು ದೇವರಿಗೆ ವಿಶೇಷ ಪೂಜೆಯ ಜೊತೆಗೆ ಪಂಚಕಜ್ಜಾಯ ಮತ್ತು ಹರಿವಾಣ ನೈವೇಧ್ಯ ಆಗಬೇಕು. ಬ್ರಾಹ್ಮಣರಿಗೆ ದಕ್ಷಿಣೆ, ಫಲದಾನ ಕೊಡುತ್ತಾರೆ.

ಪೂಜೆಯಾದ ಬಳಿ ಮಂತ್ರಿಸಿದ ತೆಂಗಿನ ಕಾಯಿಯನ್ನು ಮದುಮಗಳಿಗೆ ನೀಡುತ್ತಾರೆ. ಆ ಕಾಯಿ ಮದುಮಗನಂತೆ ಸದಾ ಆಕೆಯ ಜೊತೆಗಿರಲೇಬೇಕು. ನಂತರ ಐದು ಮಂದಿ ದೇವದಾಸಿಯರು

[illegible]

[illegible]

[illegible]

ಮದುಮಗಳನ್ನು ಕಾಯಿಯ ಜೊತೆಗೆ ಕೂರಿಸಿ ಆರತಿ ಬೆಳಗುತ್ತಾರೆ. ಈ ಧಾರ್ಮಿಕ ವಿಧಿಗಳೆಲ್ಲ ಮುಗಿದ ಮೇಲೆ ದೇವಸ್ಥಾನದಲ್ಲಿ ಬ್ರಾಹ್ಮಣರಿಗೆ ಮತ್ತು ಉಳಿದವರಿಗೆ ಊಟದ ವ್ಯವಸ್ಥೆ ಇರುತ್ತಿತ್ತು. ಮಧುಮಗಳಾದ ದೇವದಾಸಿಯು ತೆಂಗಿನ ಕಾಯಿಯ ಜೊತೆಗೆ ಊಟ ಮಾಡಬೇಕು. ಈ ಕಾರ್ಯಕ್ರಮದ ಖರ್ಚುವೆಚ್ಚವನ್ನೆಲ್ಲ ಅವಳನ್ನು ಬಯಸುವ ಧನಿಕ ಕೊಡಬೇಕಾಗುತ್ತದೆ.

ಆ ದಿನ ರಾತ್ರಿ ತೆಂಗಿನ ಕಾಯಿಯ ಜೊತೆಗೆ ಮದುಮಗಳನ್ನು ಶಯನಾಗಾರಕ್ಕೆ ಕಳುಹಿಸುತ್ತಾರೆ. ದೇವದಾಸಿಯು ಆ ಫಲವನ್ನೇ ಪರದೈವವೆಂದು ತಿಳಿದಿರಬೇಕು. ಆ ಫಲವನ್ನು ನೆಲದ ಮೇಲಿಡಬಾರದು ಎಂಬ ನಂಬಿಕೆ ಇದೆ. ರಾತ್ರಿ ತೆಂಗಿನ ಕಾಯಿಯನ್ನು ಹತ್ತಿರವಿಟ್ಟುಕೊಂಡು ಮಲಗಿ ಮರುದಿನ ಬೆಳಿಗ್ಗೆ ದೇವಾಲಯದ 'ಕ್ಷೇತ್ರ ಪಾಲ'ನಿಗೆ ಒಪ್ಪಿಸಿ ಬರಬೇಕು. ನಂತರದ ದಿನಗಳಲ್ಲಿಯೇ ಬಯಸಿ ಬಂದವನನ್ನು ಕೂಡಬೇಕು. ಮತ್ತು ಪತಿಯೆಂದು ಮನಸಾ ಸ್ವೀಕರಿಸಬೇಕು.

೩.೩.೧.೫. ಮರಣ ಸಂಸ್ಕಾರ

ಸೃಷ್ಟಿಯ ಪ್ರತಿಯೊಂದು ಜೀವಿಗಳಿಗೂ ಸಾವು ಅನಿವಾರ್ಯ. ಇದು ವ್ಯಕ್ತಿಯನ್ನು ಜಗತ್ತಿನ ಸಂಬಂಧಗಳಿಂದ ಮುಕ್ತಿಗೊಳಿಸುತ್ತದೆ. ಮೃತಪಟ್ಟ ವ್ಯಕ್ತಿಯ ಶವವನ್ನು ಸ್ವ-ಜಾತಿಯ ಬಂಧುಗಳೆಲ್ಲ ಸೇರಿ ಸಂಸ್ಕಾರ ಮಾಡಿ ಗೌರವದಿಂದ ಕಳುಹಿಸಿಕೊಡುತ್ತಾರೆ. ಈ ಸಂದರ್ಭದಲ್ಲಿ ಪ್ರತಿಯೊಂದು ಜನಾಂಗವು ತನ್ನದೇ ಆದ ಸಂಪ್ರದಾಯ ಹೊಂದಿದೆ. 'ಗೆಜ್ಜೆಕಟ್ಟಿದ' ದೇವದಾಸಿಯರು ನಿತ್ಯ ಸುಮಂಗಲೆಯಾಗಿರುವುದರಿಂದ ಸತ್ತ ಮೇಲೆ ಮೋಕ್ಷ ಹೊಂದುತ್ತಾರೆ ಎನ್ನುವ ನಂಬಿಕೆಯು ಬಿಸರಳ್ಳಿಯ ದೇವದಾಸಿಯರಲ್ಲಿ ಇದೆ. ಇವರಲ್ಲಿ ಅಂತಿಮ ಸಂಸ್ಕಾರವು ಹಿಂದೂ ಪದ್ಧತಿಯಂತೆ ನಡೆಯುತ್ತದೆ. ದೇವದಾಸಿಯು ಸತ್ತರೆ ಅವಳ ಮಗ, ಮಗನಿಲ್ಲದಿದ್ದರೆ ಅಕ್ಕ-ತಂಗಿಯ ಮಕ್ಕಳು ಅಂತ್ಯ-ಸಂಸ್ಕಾರವನ್ನು ಮಾಡುತ್ತಾರೆ. ಗಂಡಸು ಸತ್ತರೆ ಅಳಿಯ ಅಂತ್ಯಕ್ರಿಯೆಯನ್ನು ಮಾಡುತ್ತಿದ್ದ. ಸತ್ತ ವ್ಯಕ್ತಿಯ 'ಶವದಹನ' ಅದೇ ದಿನ ಮಾಡಬೇಕೆಂಬ ನಿಯಮವಿದೆ.

ಪ್ರಾಣ ಹೋಗುವ ಮುನ್ನ ವ್ಯಕ್ತಿಯನ್ನು ಮಲಗುವ ಕೋಣೆಯಿಂದ ಎತ್ತಿಕೊಂಡು ಬಂದು ಹೊರಗೆ ಜಗುಲಿಯಲ್ಲಿ ಮಲಗಿಸುವರು. ಪ್ರಾಣ ಮನೆಯ ಒಳಗೆ ಹೋಗಬಾರದೆನ್ನುವ ನಂಬಿಕೆ ಇದೆ. ವ್ಯಕ್ತಿಯ ಕೊನೆಯ ಉಸಿರು ಎಳೆಯುವಾಗ ಬಾಯಿಗೆ ಗರಿಕೆಯ ಮೂಲಕ ನೀರು ಬಿಡುವರು. ಆತ್ಮೀಯರು ಬಾಯಿಗೆ ನೀರು ಬಿಡುವವರೆಗೂ ಪ್ರಾಣ ಹೋಗುವುದಿಲ್ಲ ಎನ್ನುವ ನಂಬಿಕೆ ಇದೆ. ವ್ಯಕ್ತಿಯು ಮೃತಪಟ್ಟ ಕೂಡಲೇ ಆ ಕುಟುಂಬಕ್ಕೆ ಸೂತಕ ಸಂಭವಿಸುವುದು. ಮುಂದಿನ ಹನ್ನೊಂದು ದಿನಗಳವರೆಗೆ ಅವರು ಶುಭ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ.

ವ್ಯಕ್ತಿಯು ಮೃತಪಟ್ಟಿರುವುದು ಖಚಿತವಾದ ಮೇಲೆ ಕುಟುಂಬಿಕರು, ನೆರೆಹೊರೆಯವರು ಸಾವಿನ ಮನೆಗೆ ಧಾವಿಸಿ ಬರುವರು. ಕುಟುಂಬ ಹಿರಿಯ ದೇವದಾಸಿಯಾಗಿದ್ದರೆ 'ಡೋಲು' ಮತ್ತು ಓಲಗದವರನ್ನು

ಕರೆಸಿ ಶೋಕಗೀತೆ ನುಡಿಸುವರು. ಬಳಿಕ ಶವಕ್ಕೆ ಬಿಳಿ ಬಟ್ಟೆ ಹೊದಿಸಿ ತಲೆಭಾಗದಲ್ಲಿ ಕಾಯಿ ಕಡಿದೀಪ ಇಡುವರು. ನೆರೆದಿರುವ ಆತ್ಮೀಯರು ಮೃತವ್ಯಕ್ತಿಯ ಮೇಲಿನ ಗೌರವ ಮತ್ತು ಪೂಜ್ಯ ಭಾವನೆಯಿಂದ ಕಾಲುಮುಟ್ಟಿ ನಮಸ್ಕರಿಸುತ್ತಾರೆ. ನಂತರ ಕುಟುಂಬಿಕರು ದೇವದಾಸಿಯ ಶವಕ್ಕೆ ಅರಿಸಿನ ಹಚ್ಚಿ ತುಳಸೀ ಕಟ್ಟೆಯ ಸಮೀಪ ಮಲಗಿಸಿ ಸ್ನಾನ ಮಾಡಿಸುವರು. ಆ ಮೇಲೆ ಶವಕ್ಕೆ ಸೀರೆ ಉಡಿಸಿ, ಹಣೆಗೆ ಕುಂಕುಮವಿಟ್ಟು, ಹೂ ಮೂಡಿಸಿ, ಶೃಂಗಾರ ಮಾಡಿ 'ಚಟ್ಟ'ದಲ್ಲಿ ಮಲಗಿಸುವರು.

ತನ್ನನ್ನು ಅರ್ಪಿಸಿಕೊಂಡ ದೇವದಾಸಿ ಸತ್ತ ದಿನ ಅವಳ ದಹನ ಕ್ರಿಯೆ ಆಗುವವರೆಗೆ ದೇವರ ಪೂಜೆ ನಡೆಯುವಂತಿಲ್ಲ. ಅದಕ್ಕಾಗಿ ಶೀಘ್ರವಾಗಿ ಅಂತಿಮ ಯಾತ್ರೆಯ ಸಿದ್ಧತೆ ನಡೆಸುವರು. ಶವ ದಹನಕ್ಕೆ ನಿರ್ದಿಷ್ಟ ಪಡಿಸಿದ ಸ್ಥಳದಲ್ಲಿ ಕುಟುಂಬಿಕರೆಲ್ಲ ಸೇರಿ ಕಟ್ಟಿಗೆ ಕೂಡಿ 'ಕಾಟ' ಸಿದ್ದಪಡಿಸುವರು. ಶವವನ್ನು ಮಲಗಿಸಿ ಅಲಂಕಾರ ಮಾಡಿರುವ 'ಚಟ್ಟ'ಕ್ಕೆ ದೇವದಾಸಿಯ ಗಂಡು ಮಕ್ಕಳು ಮತ್ತು ತಮ್ಮಂದಿರು ಸೇರಿ ಹೆಗಲು ಕೊಡುವರು. ಮೃತಳ ಹಿರಿಯ ಮಗ ಹೆಣದ ಪಾದ ಪೂಜೆ ಮಾಡಿ ಅಗ್ನಿಸ್ಪರ್ಶ ಮಾಡುವನು. ಇದಕ್ಕೆ 'ಕೊಳ್ಳಿ ಇಡುವುದು' ಎನ್ನುತ್ತಾರೆ. ಹೆಂಗಸರು ಸ್ಮಶಾನಕ್ಕೆ ಹೋಗುವ ಪದ್ಧತಿ ಇಲ್ಲ. ಗಂಡಸರು ಹೆಣಸುಟ್ಟು ಸ್ನಾನಮಾಡಿ ಬಂದ ಬಳಿಕ ಹೆಣ ಹೊತ್ತವರ ಹೆಗಲಿಗೆ ತಾಯಿ ಅಥವಾ ಅಕ್ಕ ತೀರಿ ಹೋದರೆ ತಂಗಿ, ಇಲ್ಲವೇ ಸೊಸೆ ಹಾಲು ತಾಗಿಸಿ ಬಾಳೆಹಣ್ಣು, ಬೆಲ್ಲ ತಿನ್ನಲು ಕೊಡಬೇಕು. ಆ ಬಳಿಕ ಸಾವಿನ ಮನೆಯಲ್ಲಿ ಗಂಜಿ ಊಟ ಇರುತ್ತದೆ. ಸಾವು ಸಂಭವಿಸಿದ ಬಳಿಕ ಹಣ ತೆಗೆಯುವವರೆಗೆ ಮನೆಯಲ್ಲಿ ಒಲೆ ಹಚ್ಚುವ ಪದ್ಧತಿ ಇಲ್ಲ.

ವ್ಯಕ್ತಿಯು ಮೃತಪಟ್ಟ ಮೂರನೆಯ ದಿನದಂದು ಬಹಳಷ್ಟು ಕ್ರಿಯೆಗಳು ಪ್ರಾರಂಭವಾಗುತ್ತವೆ. ಆ ದಿನದ ಕಾರ್ಯಕ್ರಮಕ್ಕೆ ದಾಯಾದಿಗಳು ಮತ್ತು ರಕ್ತ ಸಂಬಂಧಿಗಳು ಮಾತ್ರಭಾಗವಹಿಸುತ್ತಾರೆ. ಐದನೆಯ ದಿನ ಕ್ರಿಯೆ ಹಿಡಿಯುವುದು. ಮೃತ ವ್ಯಕ್ತಿಯ ಗಂಡು ಮಕ್ಕಳು ಕ್ರಿಯೆ ಹಿಡಿಯುತ್ತಾರೆ. ಅಥವಾ ಮೊದಲನೆಯ ಮಗ ಒಬ್ಬನೇ ಕ್ರಿಯೆ ಹಿಡಿಯಬಹುದು. ಕ್ರಿಯೆ ಹಿಡಿಯುವವರು ತಲೆ ಕೂದಲು ತೆಗೆಯುವ ಪದ್ದತಿ ಇದೆ. ಅಂದು ಸ್ಮಶಾನದಲ್ಲಿರುವ ಬೂದಿ ಮತ್ತು ಅಸ್ತಿಯನ್ನೆಲ್ಲ ನದಿಯಲ್ಲಿ ವಿಸರ್ಜನೆ ಮಾಡುವರು. ಸ್ಮಶಾನದಲ್ಲಿ ಕಲಶ ಇಟ್ಟು ಬೋಂಡ, ದೀಪ ಇಡುವರು. ನಂತರ ಮಕ್ಕಳು ಮತ್ತು ಕುಟುಂಬಿಕರೆಲ್ಲ ನದಿಯಲ್ಲಿ ಮುಳುಗಿ ಏಳುವ ಪದ್ಧತಿ ಇದೆ. ಕ್ರಿಯೆ ಹಿಡಿದವನು, ಸತ್ತವ್ಯಕ್ತಿಯ ಪ್ರಾಣಬಿಟ್ಟ ಜಾಗದಲ್ಲಿ ರಾತ್ರಿಮಲಗಬೇಕು. ಆ ಹೊರಗೆಲ್ಲೂ ತಿರುಗಾಡಲು ಹೋಗುವಂತಿಲ್ಲ(ಈ ರೀತಿಯ ಪದ್ಧತಿಯು ದೇವದಾಸಿಯರಲ್ಲಿ ಕಂಡುಬರುತ್ತದೆ).

ಒಂಬತ್ತನೆಯ ದಿನ ಸ್ಮಶಾನದಲ್ಲಿ 'ಎಡೆ' ಹಾಕುವರು. ತೆಂಗಿನ ಹೆಣೆದ ಮೂರು ಗರಿಕೆಗಳನ್ನು ಒಂದಕ್ಕೊಂದು ತಾಗಿಸಿ ನಿಲ್ಲಿಸುವರು. ನಂತರ ಆ ಜಾಗದಲ್ಲಿ ತುಳಸಿ ನೆಟ್ಟು ಅನ್ನ ಮಾಡಿಬಡಿಸಿ ದೀಪ ಇಡಬೇಕು. ನಂತರ ಸ್ಮಶಾನಕ್ಕೆ ಹೋಗುವ ಅವಶ್ಯಕತೆ ಇಲ್ಲ.

[illegible]

[illegible]

[illegible]

[illegible]

ಹನ್ನೊಂದನೆಯ ದಿನಕ್ಕೆ ಸೂತಕ ಮುಗಿಯುತ್ತದೆ. ಅಂದು ಮನೆಯ ಒಟ್ಟೆಯನ್ನೆಲ್ಲ ಒಗೆದು ಶುದ್ಧ ಮಾಡುತ್ತಾರೆ. ನಂತರ ವೈದಿಕರು ನದೀ ದಡದಲ್ಲಿ ಹವನಾದಿಗಳನ್ನು ಮಾಡಿ ಕ್ರಿಯೆ ಹಿಡಿದ ವ್ಯಕ್ತಿಗಳಿಂದ 'ಪಿಂಡ' ಹಾಕಿಸುತ್ತಾರೆ. ಪಿಂಡ ಎಂದರೆ ಅನ್ನದಿಂದ ಉಂಡೆ ಮಾಡಿ ಎಲೆಯಲ್ಲಿ ಗರಿಕೆಯ ಮೇಲಿಟ್ಟು, ಮೃತ ವ್ಯಕ್ತಿಯ ಹೆಸರಿನಲ್ಲಿ ಅದಕ್ಕೆ ಎಳ್ಳು ನೀರಿನಿಂದ ತರ್ಪಣ ಕೊಡಬೇಕು. ಇದು ಮೃತವ್ಯಕ್ತಿಯ ಪ್ರೇತಾತ್ಮವು ಮೋಕ್ಷ ಹೊಂದಲೆಂದು ಮಾಡುವ ಕಾರ್ಯಕ್ರಮ. ನಂತರ ನೆರೆದವರೆಲ್ಲ ನದಿಯಲ್ಲಿ ಮುಳುಗಿ ಎದ್ದು ಅಲ್ಲಿಂದ ಕಲಶಾದಿಗಳನ್ನು ಮನೆಗೆ ತಂದು ಪ್ರೋಕ್ಷಿಸುತ್ತಾರೆ. ಈ ಕಾರ್ಯಕ್ರಮವನ್ನು 'ಬೊಜ್ಜ' ಎನ್ನುತ್ತಾರೆ. ಆ ದಿನ ಬಳೆಗಾರ ಬಂದ ಮೇಲೆ ಕಾಯಿ ಮಂತ್ರಿಸಿ ದೇವಿ ದೇವಾಲಯಕ್ಕೆ ತೆಗೆದುಕೊಂಡು ಹೋಗಬೇಕು. ಶವಸಂಸ್ಕಾರದಲ್ಲಿ ಭಾಗವಹಿಸಿದವರೆಲ್ಲ ಇಂದು ಆಗಮಿಸುತ್ತಾರೆ. ನಂತರ ಹೊರಗೆ ಅಡಿಗೆ ಮಾಡಿ ಎಲೆಯಲ್ಲಿ ಬಡಿಸಿ ಕಾಗೆಗೆ ಇಡುತ್ತಾರೆ. ಅಂದರೆ ಮೃತನ ಪ್ರೇತಾತ್ಮವು ಕಾಗೆಯ ರೂಪದಲ್ಲಿರುತ್ತದೆ ಎನ್ನುವ ನಂಬಿಕೆಯು ಇದೆ. ಕಾಗೆ ಒಂದು ವೇಳೆ ಅನ್ನ ತಿನ್ನದಿದ್ದರೆ ಮೃತನಿಗೆ ಸದ್ಗತಿಯಾಗಲಿಲ್ಲ ಎಂದರ್ಥ.

ಹನ್ನೆರಡನೇ ದಿನ ಸಮಾರಾಧನೆ ಮಾಡಿ ಕುಟುಂಬದವರಿಗೆ ಆತ್ಮೀಯರಿಗೆಲ್ಲ ಊಟ ಹಾಕಬೇಕು. ಇದನ್ನು 'ವೈಕುಂಠ ಸಮಾರಾಧನೆ' ಎನ್ನುತ್ತಾರೆ. ದೇವದಾಸಿಯ ಕೊನೆಯ ಈ ಸಮಾರಾಧನೆ ದೇವಸ್ಥಾನದಲ್ಲಿಯೇ ನಡೆಯುತ್ತಿತ್ತು. ಈ ಕಾರ್ಯಗಳಿಗೆ ದೇವಸ್ಥಾನದ ವತಿಯಿಂದ ಸಹಕಾರ ನೀಡುತ್ತಿದ್ದರು. ಹನ್ನೆರಡು ದಿನಗಳ ಬಳಿಕ ಅಂತ್ಯಕ್ರಿಯೆ ಮುಗಿದ ಮೇಲೆ ಪ್ರತಿ ತಿಂಗಳು ಮಾಸಿಕ ಮಾಡಿ ಕಾಗೆಗೆ ಅನ್ನ ಇಡಬೇಕು. ಪ್ರತಿ ತಿಂಗಳು ಮಾಸಿಕ ಮಾಡಿ ವರ್ಷ ಪೂರ್ತಿಯಾದಾಗ 'ವರ್ಷಾಂತಿಕ' ಮಾಡುತ್ತಿದ್ದರು. ಆ ದಿನ ಅನುಕೂಲ ಇರುವವರು ಸಂಬಂಧಿಗಳನ್ನು ಕರೆದು ಊಟ ಹಾಕುತ್ತಾರೆ. ಹೀಗೆ ದೇವದಾಸಿಯರ ಅಂತಿಮ ಸಂಸ್ಕಾರದಲ್ಲಿ ವೈದಿಕ ಮತ್ತು ಜಾನಪದ ಆಚರಣೆಗಳು ಸಮ್ಮಿಶ್ರಣವಾಗಿವೆ.

೩.೩.೨. ವಿಶೇಷ ಆಚರಣೆಗಳು

ನಂಬಿಕೆಯ ತಳಹದಿಯ ಮೇಲೆ ನಡೆಯುತ್ತಿರುವ ಜನಪದರ ಜೀವನ ಹಲವಾರು ಸಂಪ್ರದಾಯ ಆಚರಣೆಗಳಿಂದ ಬಂಧಿತವಾಗಿದೆ. ಧಾರ್ಮಿಕ ಹಿನ್ನಲೆಯಿಂದ ನಡೆಸಲ್ಪಡುವ ಜಾನಪದ ಆಚರಣೆಗಳು ಜೀವನದ ಅವಿಭಾಜ್ಯ ಅಂಗವಾಗಿರುವಷ್ಟರ ಮಟ್ಟಿಗೆ ಮಹತ್ವವನ್ನು ಪಡೆದುಕೊಂಡಿವೆ. ದೇವದಾಸಿಯರ ಕುಟುಂಬದಲ್ಲಿ ಹಿಂದಿನಿಂದಲೂ ತಮ್ಮ ಪೂರ್ವಿಕರು ನಡೆಸಿಕೊಂಡು ಬಂದಿರುವ ಕೆಲವು ಸಂಪ್ರದಾಯ, ಆಚರಣೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದರು.

ವ್ರತ ಆಚರಣೆಗಳು ಗೆಜ್ಜೆ ಕಟ್ಟಿದ ದೇವದಾಸಿಯರು ದೇವಾಲಯದೊಂದಿಗೆ ಸಂಬಂಧ ಹೊಂದಿರುವುದರಿಂದ ನಿಯಮ ನಿಷ್ಠೆಯಿಂದ ಜೀವನ ಮಾಡುತ್ತಿದ್ದರು. ವಿಶೇಷ ದಿನಗಳಲ್ಲಿ ಉಪವಾಸವಿದ್ದು ವ್ರತಾಚಾರಣೆ ಮಾಡುತ್ತಿದ್ದರು. ಪ್ರತಿ ಏಕಾದಶಿಯಂದು ಉಪವಾಸವಿದ್ದು, ಒಂದು ಹೊತ್ತು ಊಟ

[illegible]

ಮಾಡುತ್ತಿದ್ದರು. ಶ್ರವಣ ಮಾಸದಲ್ಲಿ ಬರುವ ಎಲ್ಲ ಶನಿವಾರ ಮತ್ತು ಕಾರ್ತಿಕ ಮಾಸದಲ್ಲಿ ಬರುವ ಎಲ್ಲ ಸೋಮವಾರಗಳಂದು ಉಪವಾಸವಿದ್ದು ವ್ರತ ಮಾಡುತ್ತಿದ್ದರು. ಪ್ರತಿ 'ಷಷ್ಠಿ'ಯೆಂದು ಉಪವಾಸ, 'ಶಿವರಾತ್ರಿ', 'ಕೃಷ್ಣಾಷ್ಟಮಿ'ಯೆಂದೂ ಕೂಡ ಉಪವಾಸ ಇರುತ್ತಿದ್ದರು. ವ್ರತಾಚರಣೆಯ ಈ ಎಲ್ಲಾ ಸಂದರ್ಭಗಳಲ್ಲಿಯೂ ದೇವಾಲಯದಲ್ಲಿ ಅಥವಾ ಬ್ರಾಹ್ಮಣರ ಮನೆಯಲ್ಲಿ 'ಬಿಳಿ ಅಕ್ಕಿ'ಯ ಅನ್ನ ಊಟ ಮಾಡುತ್ತಿದ್ದರು. ಮತ್ತು ಅವರಿಗೆ ಊಟವಾದ ನಂತರ ಹಣಕೊಡುತ್ತಿದ್ದರು. ವ್ರತನೇಮಗಳ ದಿನ ಧರ್ಮಾರ್ಥ ಊಟ ಮಾಡಿದರೆ ವ್ರತದ 'ಪುಣ್ಯಫಲ' ದೊರೆಯುವುದಿಲ್ಲ. ಅದಕ್ಕಾಗಿ ಊಟವಾದ ನಂತರ ಹಣ ಕೊಡುತ್ತಿದ್ದರು.

ದೇವದಾಸಿಯರ ಕೆಲವು ಮನೆತನಗಳವರು ಹಿಂದಿನಿಂದಲೂ ದೈವ, ದೇವರುಗಳನ್ನು ಆರಾಧಿಸಿಕೊಂಡು ಬಂದಿದ್ದಾರೆ. ಇವರ ಕುಟುಂಬದಲ್ಲಿ ದೇವಿ ಹುಲಿಗೆಮ್ಮ ಹಾಗೂ ಮೈಲಾರ ಲಿಂಗ ಮತ್ತು ಎಲ್ಲಮ್ಮನನ್ನು ಪೂಜಿಸುತ್ತಾರೆ. ಮನೆ ದೇವರಿಗಾಗಿ ಪ್ರತ್ಯೇಕವಾದ ಕೋಣೆಯು ಇದೆ. ದೇವರ ಕೋಣೆಯ ಮಡಿಮೈಲಿಗೆಯ ಬಗ್ಗೆ ಹೆಚ್ಚಿನ ಗಮನಕೊಡುತ್ತಾರೆ. ಸ್ನಾನ ಮಾಡದೇ ಯಾರೂ ದೇವರ ಕೋಣೆಯೊಳಗೆ ಪ್ರವೇಶಿಸುವುದಿಲ್ಲ. ನಿತ್ಯವು ಸ್ನಾನ ಮಾಡಿ ದೀಪಹಚ್ಚಿ ಹಾಲು ಇಟ್ಟು ಪೂಜಾ ಮಾಡುತ್ತಾರೆ. ನವರಾತ್ರಿಯ ಒಂಬತ್ತು ದಿನವೂ ದೇವಿಗೆ ವಿಶೇಷ ಪೂಜೆ ನಡೆಯುತ್ತದೆ. ಮನೆಯ ದೇವರ ಸಲುವಾಗಿ ಪ್ರತ್ಯೇಕವಾದ ದೇವರ ಕೋಣೆಯನ್ನು ಮಾಡಿಕೊಂಡಿದ್ದಾರೆ. ದೈವದ ಭಂಡಾರವನ್ನು ಪೂಜಿಸುತ್ತಾರೆ.

ಈ ಮೇಲೆ ತಿಳಿಸಿರುವ ಎಲ್ಲ ಆಚರಣೆಗಳನ್ನು ದೇವದಾಸಿಯರ ಕುಟುಂಬಿಕರು ಈಗಲೂ ಆಚರಿಸಿಕೊಂಡು ಬರುತ್ತಿದ್ದಾರೆ. ಜೊತೆಗೆ ಯುಗಾದಿ, ಗಣೇಶ ಚತುರ್ಥಿ, ದೀಪಾವಳಿ, ಹಬ್ಬಗಳನ್ನು ಕೂಡ ಅವರವರ ಅನುಕೂಲತೆಗಳಿಗೆ ತಕ್ಕಂತೆ ಆಚರಿಸಿಕೊಂಡು ಬರುತ್ತಾರೆ. ದೇವದಾಸಿಯರು ಹರಕೆಯ ರೂಪದಲ್ಲಿ ಇತರ ದೇವಸ್ಥಾನಗಳಲ್ಲಿ ಮಕ್ಕಳಾಗದಿದ್ದಲ್ಲಿ ಅಥವಾ ಖಾಯಿಲೆಗೆ ತುತ್ತಾದ ಸಂದರ್ಭಗಳಲ್ಲಿ ತಮ್ಮ ದೇವರುಗಳಿಗೆ ಹರಕೆ ಹೇಳಿಕೊಳ್ಳುತ್ತಿದ್ದರು.

ದೇವದಾಸಿಯರು ಕೂಡ ಮಾಟ ಮಂತ್ರಗಳನ್ನು ನಂಬುತ್ತಿದ್ದರು. ಅದರಲ್ಲಿ ವಿಶೇಷವಾಗಿ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಮನೆಯ ವ್ಯಕ್ತಿಗಳಿಗೆ ದೈಹಿಕ ಅಥವಾ ಮಾನಸಿಕ ಅಸಮತೋಲನ ಗಳುಂಟಾದಾಗ ತಮಗಾದವರು ಮಾಟ, ಮಂತ್ರ ಮಾಡಿರಬಹುದು ಎಂದು ತಿಳಿದುಕೊಳ್ಳುತ್ತಿದ್ದರು. ಶ್ರೀಮಂತನೊರ್ವನನ್ನು ವೇಶ್ಯೆಯೊಬ್ಬಳು ತನ್ನ ಕಡೆಗೆ ಸೆಳೆದುಕೊಂಡಿದ್ದರೆ, 'ಮೋಡಿ ಮಾಡಿ ವಶ ಮಾಡಿಕೊಂಡಿದ್ದಾಳೆ' ಎಂದು ಭಾವಿಸುತ್ತಿದ್ದರು. ಈ ಸಂದರ್ಭಗಳೆಲ್ಲ ಊರಿನ ಜೋಯಿಸರ ಮೊರೆ ಹೋಗುತ್ತಿದ್ದರು. ಇವರ ಆಹಾರ ಪದ್ಧತಿಯ ಸಹ ಸಮಿಶ್ರವಾಗಿದೆ. ಹಬ್ಬ ಹರಿದಿನ ವ್ರತ-ನೇಮಗಳಲ್ಲಿ ಶುದ್ಧ ಸಸ್ಯಾಹಾರವಾದರೆ, ಉಳಿದ ದಿನಗಳಲ್ಲಿ ಮಾಂಶಹಾರವನ್ನು ಸೇವನೆ ಮಾಡುತ್ತಿದ್ದರು. ಈ ರೀತಿಯಾಗಿ ಬಿಸರಳ್ಳಿಯ ದೇವದಾಸಿಯರ ಆಚರಣೆಗಳು ಕಂಡುಬರುತ್ತವೆ.

[illegible]

೩.೩.೩. ದೇವದಾಸಿಯರ ಮತ್ತು ಅವರ ಕುಟುಂಬ ರಚನೆಯ ಸ್ವರೂಪ

ದೇವದಾಸಿ ಕೌಟುಂಬಿಕ ಜೀವನದಲ್ಲಿ ಅವರದ್ದೇ ಆದ ವಿಶೇಷವಿತ್ತು. ಕುಟುಂಬವು 'ಮಾತೃ ಪ್ರಧಾನ'ವಾಗಿದ್ದು ಸ್ತ್ರೀಗೆ ಪ್ರಧಾನ್ಯತೆ ಹೆಚ್ಚು. ಮನೆತನದ ಆಸ್ತಿ ಸಂಪತ್ತುಗಳಿಗೆ ಸ್ತ್ರೀಯೇ ಹಕ್ಕನ್ನು ಪಡೆದುಕೊಂಡಿದ್ದಳು. ಮನೆಯಲ್ಲಿ ತಾಯಿ ಅಥವಾ ಹಿರಿಯ ದೇವದಾಸಿಯಾದವಳು ಯಜಮಾನಿಯಾಗಿರುತ್ತಿದ್ದಳು. ಕುಟುಂಬದಲ್ಲಿ ಅಧಿಕಾರವು ವಂಶ ಪಾರಂಪರ್ಯವಾಗಿ ತಾಯಿಯಿಂದ ಮಗಳಿಗೆ ಬರುತ್ತಿತ್ತು. ಇವರಲ್ಲಿ 'ಮಾತೃ ಮೂಲೀಯ' ಪದ್ಧತಿ ಪ್ರಚಲಿತದಲ್ಲಿದ್ದುದರಿಂದ ಮನೆಯ ಧಾರ್ಮಿಕ ಕ್ರಿಯಾಧಿಗಳನ್ನು ನಡೆಸುವ ಅಧಿಕಾರ ಹೆಣ್ಣಿಗೆ ಇರುತ್ತಿತ್ತು. ಆದ್ದರಿಂದ ಕುಟುಂಬದಲ್ಲಿ ಹೆಣ್ಣು-ಸಂತಾನಕ್ಕೆ ಪ್ರಾಧಾನ್ಯತೆಯಿತ್ತು.

ದೇವದಾಸಿಯರ ಕುಟುಂಬದಲ್ಲಿ ಗಂಡಸರಿಗೆ ಪ್ರಾಧಾನ್ಯತೆ ಇರುತ್ತಿರಲಿಲ್ಲ. ಗಂಡು ಮಕ್ಕಳಿದ್ದರೆ ಅವರಿಗೆ ಆಶ್ರಯ ನೀಡುತ್ತಿದ್ದರು. ಅಥವಾ ಕುಟುಂಬದಲ್ಲಿ ಹೆಣ್ಣು ಮಕ್ಕಳನ್ನು ಅವಲಂಬಿಸಿಕೊಂಡಿರುತ್ತಿದ್ದರು. ಮನೆಯ ವ್ಯವಹಾರವನ್ನು ಹೆಂಗಸರ ಆಡಳಿತದಲ್ಲಿ ಸೋದರಮಾವ ಅಥವಾ ಅಣ್ಣ, ತಮ್ಮಂದಿರು, ನೋಡಿಕೊಳ್ಳುತ್ತಿದ್ದರು. ವೇಶ್ಯಾವೃತ್ತಿ ಪ್ರಚಲಿತದಲ್ಲಿದ್ದ ಕಾಲದಲ್ಲಿ ಮನೆಯ ಹೆಂಗಸರಿಗೆ ಸಹಾಯಕರಾಗಿರುತ್ತಿದ್ದರು. ಯಾಕೆಂದರೆ ಹೆಂಗಸರಿಗೆ ವಿಟ ಪುರುಷರನ್ನು ಪೂರೈಕೆ ಮಾಡಲು ಪರಿಚಾರಕರು ಬೇಕಾಗಿತ್ತು. ಆ ಪರಿಚಾರಕರ ಕೆಲಸವನ್ನು ಇವರು ನಿರ್ವಹಿಸುತ್ತಿದ್ದರು. ಈ ರೀತಿಯ ವೃತ್ತಿಯು ಇಂದಿನ ಕಾಲಕ್ಕೆ ಅಸಮಂಜಸವೆಂದು ಕಾಣುತ್ತದೆ.

ಇವರು ಉತ್ತಮ ಕಲಾವಿದರು ಕೂಡಾ ಆಗಿದ್ದು ನೃತ್ಯ ಸಂಗೀತಗಳಿಗೆ ಹಿಮ್ಮೇಳ ಒದಗಿಸುತ್ತಿದ್ದರು. ನಂತರದ ದಿನಗಳಲ್ಲಿ ಕೆಲವರು ಹೊಲಿಗೆ, ಬೀದಿನಾಟಕ, ಮುಂತಾದ ವೃತ್ತಿಗಳಲ್ಲಿ ತರಬೇತಿ ಪಡೆದು ಅವರವರ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಗಂಡಸರಿಗೆ ಸಾಮಾಜಿಕ ಭದ್ರತೆ ಇರುತ್ತಿರಲಿಲ್ಲ. ಹಿಂದೆ ದೇವದಾಸಿ ಸಮಾಜದವರು ಮದುವೆಯಾಗಬಾರದೆನ್ನುವ ನಂಬಿಕೆ ಇತ್ತು. ಏಕೆಂದರೆ ಮಠದ ಪೂಜಾರಿಯು ಮಕ್ಕಳಾಗಿರುವುದರಿಂದ ಅಷ್ಟೇ ಅಲ್ಲದೇ ಗುರುವಿನ ಮಕ್ಕಳಾಗಿರುವುದರಿಂದ ಒಂದು ವೇಳೆ ದೇವದಾಸಿಯರನ್ನು ಮದುವೆಯಾದರೆ ಪಾಪ ಬರಬಹುದೆಂಬ ನಂಬಿಕೆ ಇತ್ತು. ಆದ್ದರಿಂದ ಈ ಪದ್ಧತಿಯು ಬೆಳೆದು ಬರಲಿಕ್ಕೆ ಕಾರಣವಾಗಿರಬಹುದು. ಗಂಡಿಗಾಗಲೀ ಹೆಣ್ಣಿಗಾಗಲೀ ಮದುವೆ ಈ ಸಮಾಜಕ್ಕೆ ನಿಷಿದ್ಧವಾಗಿತ್ತು. ಹೆಣ್ಣಿನ ಮದುವೆಯ ಬದಲಿಗೆ 'ಗೆಜ್ಜೆ ಪೂಜೆ' ನಡೆಯುತ್ತಿತ್ತು. ಗಂಡುಗಳು ತಮ್ಮ ಸಮಾಜದ ಇತರ ಹೆಣ್ಣುಗಳನ್ನು ಇಟ್ಟುಕೊಳ್ಳುತ್ತಿದ್ದರು. ಇವರಲ್ಲಿ 'ಕುಲಕಸುಬು' 'ವೇಶಾವೃತ್ತಿ'ಗೆ ಪ್ರಧಾನ್ಯತೆ ಇದ್ದುದರಿಂದ ಅಂದಿನ ಕಾಲದಲ್ಲಿ ಅದನ್ನೇ ಅನುಸರಿಸುತ್ತಿದ್ದರು. ಈ ಪದ್ಧತಿ ಹಿಂದಿನಿಂದ ಪರಂಪರಾನುಗತವಾಗಿ ಬೆಳೆದು ಬಂದಿರುವುದರಿಂದ ಮದುವೆಯ ಬಗ್ಗೆ ಯಾರೂ ಯೋಚನೆ ಮಾಡುತ್ತಿರಲಿಲ್ಲ.

ಉತ್ತರ ಕರ್ನಾಟಕದಲ್ಲಿ ಗ್ರಾಮ ದೇವತೆ, ದೇವರುಗಳಿಗೆ ಬಸವಿ ಬಿಡುವ ಪದ್ಧತಿ ಇದೆ. ಇಲ್ಲಿ ಕೆಲವು ಜಾತಿ, ಜನಾಂಗ, ವರ್ಗಗಳಿಗೆ ಅನುಗುಣವಾಗಿ ಅವಲಂಬಿಸಿರುತ್ತದೆ. ಬಿಸರಳ್ಳಿಯ ದೇವದಾಸಿಯರ ಜಾತಿಯ ಒಂದು ಕುಲ ಕಸುಬಾದಾರಿತವಾಗಿತ್ತು.

[illegible]

[illegible]

[illegible]

[illegible]

ಕೆಲವು ದೇವದಾಸಿಯರ ಅಭಿಪ್ರಾಯವೇನೆಂದರೆ, ಅವರಿಗೆ ಅವರದೇ ಆದ ನಿರ್ದಿಷ್ಟ ಧರ್ಮವೆಂಬುದು ಇರುವುದಿಲ್ಲ. ತಮಗೆ ಪೋಷಣೆ, ಒದಗಿಸುತ್ತಿದ್ದ ಧರ್ಮದವರೊಂದಿಗೆ ಗುರುತಿಸಿಕೊಳ್ಳಲು ಇಷ್ಟಪಡುತ್ತೇವೆ ಎಂದು ಹೇಳಿದ್ದಾರೆ. ಇವರಿಗೆ ಜಾತಿಯ ನಿರ್ದಿಷ್ಟತೆಯನ್ನು ಕಾಯ್ದುಕೊಳ್ಳುವ ಸಾಮಾಜಿಕ ನಿರ್ಬಂಧವಿದೆ. ಇಲ್ಲಿ ಅವರಿಗೆ ಎಲ್ಲ ವರ್ಗದ ವ್ಯಕ್ತಿಗಳ ಸಂಪರ್ಕ ಇರುವುದರಿಂದ ಪ್ರತ್ಯೇಕತೆ ಎನ್ನುವುದು ಈ ಸಮಾಜದಲ್ಲಿ ಎದ್ದು ಕಾಣುತ್ತದೆ. ದೇವದಾಸಿಯರನ್ನು ಇಟ್ಟುಕೊಂಡಿರುವ ವ್ಯಕ್ತಿಗಳು ಅವರನ್ನು ಎಂದಿಗೂ ತಮ್ಮ ಕುಟುಂಬದೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಅವರೊಂದಿಗೆ ದೈಹಿಕ ಸಂಬಂಧವನ್ನಷ್ಟೇ ಪಡೆದು ತಮ್ಮ ಕುಟುಂಬದಿಂದ ಹೊರಗೆ ಇರಿಸುತ್ತಿದ್ದರು. ಆದ್ದರಿಂದ ದೇವದಾಸಿಯರ ಮಕ್ಕಳು ತಮ್ಮ ತಾಯಿಯ ಜಾತಿಯನ್ನೇ ಅನುಸರಿಸುತ್ತಿದ್ದರು. ಕೆಲವರು ಇವರನ್ನು ಅತಿ ಹಿಂದುಳಿದ ಜಾತಿಯವರು ಎಂದು ಪರಿಗಣಿಸಿದರೂ, ಇವರಿಗೆ ಉನ್ನತ ಕುಲದವರೊಂದಿಗೆ ಸಂಪರ್ಕವಿರುವುದರಿಂದ ಮುಂದುವರಿದ ಜನಾಂಗವೆಂದು ಕೆಲವರು ಹೇಳುತ್ತಾರೆ. ಆದ್ದರಿಂದ ಈ ಮನೆತನದವರು ಪ್ರತ್ಯೇಕವಾದ ಒಂದು ಜನಾಂಗ ಎಂದು ಹೇಳಬಹುದಾಗಿದೆ.

ದೇವದಾಸಿಯರ ಮಕ್ಕಳು ಹುಟ್ಟಿಸಿದ ಅಪ್ಪನಿಗೆ 'ಅಪ್ಪ' ಎಂದು ಕರೆಯುವುದು ಈ ಸಾಮಾಜಿಕ ವರ್ಗದಲ್ಲಿ ನಿಷಿದ್ಧವಾಗಿದೆ. ಈ ಮಕ್ಕಳಿಗೆ ಸಾಮಾಜಿಕ ಮನ್ನಣೆ ಇತ್ತೇ ಹೊರತು ಇಂಥವರ ಮಕ್ಕಳು ಎಂದು ನಿರ್ದಿಷ್ಟವಾಗಿ ಸೂಚಿಸುವಂತಿರಲಿಲ್ಲ. ತಂದೆಯಾದವನ ಹೆಸರನ್ನು ಯಾವುದೇ ಸರಕಾರದ ಕಡತಗಳಿಗೆ ಸೂಚಿಸುವಂತಿರಲಿಲ್ಲ. ಮಕ್ಕಳು ತಾಯಿಯ ಹೆಸರನ್ನಷ್ಟೇ ಕಾಗದ ಪತ್ರಗಳಿಗೆ ಉಪಯೋಗಿಸುತ್ತಿದ್ದರು. ತನ್ನ ತಾಯಿಯಿಂದ ಬಂದಂತ ಜಾತಿಯನ್ನೇ ಅವಲಂಬಿಸುತ್ತಿದ್ದರು.

೩.೪. ದೇವದಾಸಿಯರ ಊರೊಟ್ಟಿನ ಸಂಬಂಧ

ದೇವದಾಸಿಯರು ನಿತ್ಯ ಸುಮಂಗಲೆಯರು. ಇವರು ಹಿಂದೂಗಳಲ್ಲಿ ಅತ್ಯಂತ ಘನವೆತ್ತ ಮಹಿಳೆಯರೆಂದು ನಂಬಿಕೆಯಿದೆ. ಇವರ ದರ್ಶನ ಶುಭಕರವೆಂದು, ಯಾವುದೇ ಶುಭಕಾರ್ಯದ ನಿಮಿತ್ಯ ಹೊರಡುವಾಗ ಇವರ ದರ್ಶನವಾದರೆ ಒಳ್ಳೆಯದಾಗುತ್ತದೆ ಎನ್ನುವ ಭಾವನೆ(ನಂಬಿಕೆ) ಜನರಲ್ಲಿ ಇತ್ತು. ಈ ಹಿಂದೆ ಊರಿನ ಯಾವುದೇ ಮಂಗಳ ಕಾರ್ಯಗಳು ನಡೆಯಬೇಕಾದರೂ ಅದರಲ್ಲಿ ದೇವದಾಸಿಯರು ಪಾಲ್ಗೊಳ್ಳಬೇಕಾಗಿತ್ತು. ವಿವಾಹ ಮೊದಲಾದ ಶುಭಕಾರ್ಯಗಳ ಮೆರವಣಿಗೆಗಳಲ್ಲಿ ದೇವದಾಸಿಯರು ಮುಂದೆ ಇರುತ್ತಿದ್ದರು. ಅಪಶಕುನಗಳಾಗದಂತೆ ನೋಡಿಕೊಳ್ಳಲು ಈ ರೀತಿಯ ಪದ್ಧತಿ ರೂಢಿಯಲ್ಲಿತ್ತು. ಮದುವೆಯಲ್ಲಿ ಬಳಸುವ ಕರಿಮಣಿಯನ್ನು ದೇವದಾಸಿಯರ ಕರಿಮಣಿಗೆ ತಾಗಿಸಿಕಟ್ಟಿದರೆ ನಿತ್ಯ ಸುಮಂಗಲೆಯಾಗುವರೆಂದು ಸಂಕೇತವು ಇದೆ. "ಹಿಂದೆ ತಮ್ಮ ಸೇವೆಯಿಂದ ನಿವೃತ್ತಿಯಾದ ದೇವದಾಸಿಯರನ್ನು ತಮಿಳುನಾಡಿನ ವೈಷ್ಣವ ದೇವಾಲಯಗಳಲ್ಲಿ 'ಕಲಿಯುಗ ಲಕ್ಷ್ಮಿ' ಎಂದೂ ಶೈವ ದೇವಾಲಯಗಳಲ್ಲಿ 'ಕಲಿಯುಗ ಪಾರ್ವತಿ' ಎಂದು ಕರೆಯುತ್ತಿದ್ದರು.[೨]

ದೇವರಿಗೆ ಮೀಸಲಾದ ದೇವದಾಸಿ ವಾಸ್ತವ ಜೀವನದಲ್ಲಿ ಯಾವ ಪುರುಷನ ಜೊತೆ ಬೇಕಾದರೂ ಸಂಬಂಧ ಇಟ್ಟುಕೊಳ್ಳಬಹುದು. ಆ ವಿಚಾರದಲ್ಲಿ ಆಕೆ ಸ್ವತಂತ್ರಳು. ದೇವದಾಸಿಯ ಶೋಭನ ಪ್ರಸ್ಥದ ದಿನ ಊರಿನ ಗಣ್ಯ ಅಥವಾ ಶ್ರೀಮಂತ ವ್ಯಕ್ತಿಯೊಂದಿಗೆ ಪ್ರಸ್ಥದ ಏರ್ಪಾಡು ಮಾಡಲಾಗಿರುತ್ತದೆ. ಈ ವ್ಯವಸ್ಥೆಯನ್ನು ಹುಡುಗಿಯ ತಾಯಿ ಮಾಡುತ್ತಾಳೆ. ಮಗಳನ್ನು ಉತ್ತಮ ಪುರುಷನ ಕೈಗೆ ಒಪ್ಪಿಸುವ ಬಯಕೆ ಹೊಂದಿರುತ್ತಾಳೆ. 'ಗೆಜ್ಜೆ ಕಟ್ಟಿದ' ದೇವದಾಸಿಯು ಶ್ರಾಸ್ಥದ ದಿನ ಯಾರೊಂದಿಗೆ ಕೂಡುತ್ತಾಳೋ ಅವನೊಂದಿಗೆ ಜೀವನಪೂರ್ತಿ ನಿಷ್ಠೆಯಿಂದ ಇರುತ್ತಿದ್ದಳು.

ಹಿಂದೆ ಹೆಣ್ಣೇ ವಂಶ ಪ್ರವರ್ತಕಳಾಗಿದ್ದ ವಿಷಯ ಪುರಾಣಗಳಲ್ಲಿ ಕಂಡುಬರುತ್ತದೆ. ತಾಯಿಯ ಹೆಸರಿನಿಂದ ಮಗುವನ್ನು ಗುರುತಿಸಲಾಗುತ್ತಿತ್ತು.

"ನಮ್ಮ ಪುರಾಣ ಕಥೆಗಳ ಸ್ತ್ರೀಯರಾದ ಅದಿತಿ, ದಿತಿ, ಜಬಾಲಾ, ಮಿನಿತಾ, ಮೊದಲಾದವರ ಹೆಸರಿನಿಂದಲೇ ಅವರ ಮಕ್ಕಳನ್ನು ಕರೆಯಲಾಗುತ್ತಿತ್ತು. ತಂದೆ ಯಾರೆಂದು ತಾಯಿ ಕೊಡುವ ಅಭಿಪ್ರಾಯವೇ ಸಾಕಾಗುತ್ತಿತ್ತು."[೪] ಒಟ್ಟಾಗಿ ಮಾತೃ ಮೂಲೀಯ ಪದ್ಧತಿಯ ಮಹತ್ವವನ್ನು ಇಲ್ಲಿ ಗಮನಿಸಬಹುದು.

ದೇವದಾಸಿಯರ ಸಮಾಜದಲ್ಲಿ ಗಂಡಸರು, ನಾಯಕ್ ರಾವ್ ಎಂದೂ ಹೆಂಗಸರು ನಾಯಕ್ ಸಾನಿ ಅಥವಾ ರೂಢಿಯಲ್ಲಿ 'ಬಾಯಿ' ಎಂದು ತಮ್ಮ ಹೆಸರಿನೊಂದಿಗೆ ಸೇರಿಸಿಕೊಳ್ಳುತ್ತಿದ್ದರು. ಇವರ ಮನೆಯನ್ನು ಮನೆತನದ ಪ್ರಸಿದ್ಧರ ಹೆಸರಿನಿಂದ ಕರೆಯುವುದು ವಾಡಿಕೆ ಇತ್ತು. ಕಲೆ ಅಥವಾ ಮನೆಯ ಪ್ರಸಿದ್ಧರಿಂದ ಗುರುತಿಸಲ್ಪಡುತ್ತಿತ್ತು. ದೇವದಾಸಿಯರಿಗೆ ಹೆಣ್ಣು ಮಕ್ಕಳಿಲ್ಲದಿದ್ದಲ್ಲಿ ದತ್ತು ಸ್ವೀಕರಿಸುತ್ತಿದ್ದರು. ತಮಗೆ ಇಷ್ಟವಾದ ಹೆಣ್ಣು ಮಗುವನ್ನು ಯಾರು ಕೊಡುತ್ತಾರೋ ಅವರಿಂದ ಪಡೆಯುತ್ತಿದ್ದರು. ಹೆಚ್ಚಾಗಿ ಕುಟುಂಬದೊಳಗೆ ದತ್ತು ಪಡೆಯುತ್ತಿದ್ದರು. ಈ ಮಗುವಿಗೆ ಶಾಸನ ಬದ್ಧವಾದ ಅಧಿಕಾರ ದೊರೆಯುತ್ತಿತ್ತು. ಈ ರೀತಿಯಲ್ಲಿ ಕುಟುಂಬ ರಚನೆಯು ವಿಶಿಷ್ಟ ರೀತಿಯಿಂದ ಕೂಡಿರುತ್ತಿತ್ತು.

ಸಾಮಾನ್ಯವಾಗಿ ಮದುವೆಯಾಗಿರುವ ಧನಿಕರಷ್ಟೇ ಇವರನ್ನು ಮತ್ತು ಇವರ ಸಂಸಾರವನ್ನು ಪೋಷಿಸುತ್ತಿದ್ದರು. ಇವರಿಗೆ ಆಶ್ರಯದಾತರಾಗಿದ್ದುಕೊಂಡು ಖರ್ಚುವೆಚ್ಚಗಳನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದರೆ ಅವರ ಆಸ್ತಿಯಲ್ಲಿ ಪಾಲು ದೊರೆಯುತ್ತಿರಲಿಲ್ಲ. ತಮಗೆ ಹುಟ್ಟಿದ ಮಕ್ಕಳನ್ನು ತಮ್ಮ ಸಂತಾನವೆಂದು ಯಾವತ್ತೂ ಪರಿಗ್ರಹಿಸುತ್ತಿರಲಿಲ್ಲ. ಆದರೂ ಕೆಲವರು ದೇವದಾಸಿಯಿಂದಾದ ತಮ್ಮ ಸಂತಾನಕ್ಕೆ ಸ್ವಂತ ಹೆಂಡತಿಯ ಮಕ್ಕಳಂತೆಯೇ ಶಿಕ್ಷಣ ಮುಂತಾದವುಗಳನ್ನು ಕೊಡಿಸುತ್ತಿದ್ದರು. ಇಟ್ಟುಕೊಂಡವಳನ್ನು ಕೂಡ ಒಳ್ಳೆಯ ರೀತಿಯಲ್ಲಿ ಉಪಪತ್ನಿಯಂತೆಯೇ ಪೋಷಿಸುತ್ತಿದ್ದರು. ಇಟ್ಟುಕೊಂಡವನ ಹೆಂಡತಿಯು ಕೂಡ ದೇವದಾಸಿಯನ್ನು ತನ್ನ ಸವತಿಯಂತೆಯೇ ಪರಿಗಣಿಸುತ್ತಿದ್ದಳು. ಅವನ ಕುಟುಂಬದಲ್ಲಿಯು ಸಹ ಇದಕ್ಕೆ ಯಾವುದೇ ರೀತಿಯ ವಿರೋಧವು ಇರುತ್ತಿರಲಿಲ್ಲ. ಈ ರೀತಿಯ

ವ್ಯಕ್ತಿಗಳು ಖಾಯಿಲೆ ಅಥವಾ ವೃದ್ಧ್ಯಾಪದಲ್ಲಿದ್ದಾಗ ಸೂಳೆಯರು ಬಂದು ಸೇವೆ ಮಾಡುತ್ತಿದ್ದರು. ಅದಕ್ಕೆ ಅವರ ಹೆಂಡತಿಯರು ಸಹ 'ನಿನ್ನ ಪಾಲು ಇದೆ ಸೇವೆ ಮಾಡು' ಎಂದು ಅವಕಾಶ ಕೊಡುತ್ತಿದ್ದರು.

ಆಗಿನ ಕಾಲದಲ್ಲಿ ವೇಶ್ಯೆಯರನ್ನು ಇಟ್ಟುಕೊಳ್ಳುವುದು ಎಂದರೆ ಶ್ರೀಮಂತರಿಗೆ ಅಥವಾ ಗಣ್ಯ ವ್ಯಕ್ತಿಗಳಿಗೆ ಗೌರವದ ಸಂಕೇತವಾಗಿತ್ತು. (ಇಂಥವನಿಗೆ ಬಿಸರಳ್ಳಿಯಲ್ಲಿ ಸೂಳೆ ಇದ್ದಾಳೆ ಎಂದರೆ ಅವನೊಬ್ಬ ದೊಡ್ಡ ವ್ಯಕ್ತಿ ಎಂದು ಗುರುತಿಸಿಕೊಳ್ಳುತ್ತಿದ್ದ.) ದೇವದಾಸಿಯರಿಗೂ ಶ್ರೀಮಂತನೋರ್ವ ತನ್ನನ್ನು ಇಟ್ಟುಕೊಂಡಿದ್ದಾನೆಂದರೆ ಪ್ರತಿಷ್ಠೆಯ ವಿಷಯವಾಗಿತ್ತು. ಇದಕ್ಕೆ ಅಂದು ವೇಶ್ಯಾವಾಟಿಕೆಗೆ ಇದ್ದ ಸಾಮಾಜಿಕ ಮನ್ನಣೆಯೇ ಕಾರಣವಾಗಿರಬಹುದಾದ ಸಾಧ್ಯತೆಯಿದೆ. ಊರಿನ ಶ್ರೀಮಂತ ವ್ಯಕ್ತಿಯೊಬ್ಬನನ್ನು ಪ್ರಶ್ನಿಸುವ ಅಧಿಕಾರ ಯಾವುದೇ ಸಾಮಾನ್ಯ ವ್ಯಕ್ತಿಗೂ ಇರುತ್ತಿರಲಿಲ್ಲ. ತನ್ನನ್ನು ಇಟ್ಟುಕೊಂಡ ವ್ಯಕ್ತಿಯೋರ್ವನಿರುವಾಗ ಆಕೆಯು ಪರಪುರುಷನ ಜೊತೆ ಸಂಬಂಧ ಹೊಂದುತ್ತಿರಲಿಲ್ಲ. ಮತ್ತು ಆಕೆಯ ತಂಟೆಗೂ ಯಾರೂ ಹೋಗುತ್ತಿರಲಿಲ್ಲ. ಆ ವ್ಯಕ್ತಿಯ ಸಂಪರ್ಕ ನಿಂತ ಮೇಲೆಯೇ ಅನ್ಯ ಪುರುಷರನ್ನು ಹುಡುಕುತ್ತಿದ್ದರು. ಕೆಲವು ದೇವದಾಸಿಯರು ಇಟ್ಟುಕೊಂಡವರು ಜೀವಿತದಲ್ಲಿ ಇರುವವರೆಗೂ ಅವರ ಉಪಪತ್ನಿಯಂತೆ ನಿಷ್ಠೆಯಿಂದ ಇರುತ್ತಿದ್ದರು. ಒಂದು ವೇಳೆ ಅವನು ಮೃತಪಟ್ಟರೆ ಅನ್ಯಪುರುಷರನ್ನು ಬಯಸದೇ 'ವಿಧವಾ ಜೀವನ'ವನ್ನು ಸ್ವೀಕರಿಸುತ್ತಿದ್ದರು. ಇಂತಹ ಹಲವಾರು ನಿದರ್ಶನಗಳು ಬಿಸರಳ್ಳಿಯಲ್ಲಿ ನಡೆದಿವೆ.

ಸಾಮಾನ್ಯವಾಗಿ ಶ್ರೀಮಂತರು 'ಇಟ್ಟುಕೊಂಡವಳು' ಅಥವಾ 'ಸೂಳೆ'ಯ ಮನೆಗೆ ಬರುವಾಗ ಮುಂಚಿತವಾಗಿಯೇ ಆಳುಗಳಿಂದ ಹೇಳಿ ಕಳುಹಿಸುತ್ತಿದ್ದರು. ಗಣ್ಯ ವ್ಯಕ್ತಿಗಳು ಮನೆಗೆ ಬರುತ್ತಾರೆಂದಾಗ ಸುಂದರವಾಗಿ ಅಲಂಕರಿಸಿಕೊಂಡು ಅವರನ್ನು ಸ್ವಾಗತಿಸುತ್ತಿದ್ದರು. ಹೊರಗಿನಿಂದ ಬರುವ ವಿಟ ಪುರುಷರನ್ನು ಒಳಗೆ ಚಾವಡಿಯಲ್ಲಿರುವ ಚೋಕಾಲಿಯಲ್ಲಿ ಕೂರಿಸಿ ತಾಂಬೂಲ ನೀಡುತ್ತಿದ್ದರು. ಅದರಲ್ಲಿ ಎಲೆ, ಅಡಿಕೆ ಮತ್ತು ಪರಿಮಳಯುಕ್ತವಾದ ಸುಗಂಧ ದ್ರವ್ಯಗಳನ್ನು ಹಾಕುತ್ತಿದ್ದರು. ಬಂದವನು ಆ ತಾಂಬುಲ ತಟ್ಟೆಗೆ ಎಷ್ಟು ಹಣ ಹಾಕುತ್ತಾನೆ ಎನ್ನುವುದರಲ್ಲಿ ಅವನ ಯೋಗ್ಯತೆಯನ್ನು ಅರ್ಥಮಾಡಿಕೊಳ್ಳುತ್ತಿದ್ದರು. ಕೆಲವರು ಅವನು ಹಾಕುವ ಹಣಕ್ಕೆ ಸರಿಯಾಗಿ ಸೇವೆ ಮಾಡಿದರೆ, ಕೆಲವರು ಮನಃಪೂರ್ವಕವಾಗಿ ಸೇವೆ ಮಾಡುತ್ತಿದ್ದರು. ಮೇಲೆ ಮಹಡಿಯಲ್ಲಿ ಕೂರಿಸಿ ಅವರಿಗೆ ಹಿತವಾಗುವಷ್ಟು ಹೊತ್ತು ತಂಬೂರಿ ಹಿಡಿದು ಹಾಡು ಹೇಳುತ್ತಿದ್ದರು. ಬಳಿಕ ಅವರ ಮೈಗೆ ಎಣ್ಣೆ ಉಜ್ಜಿ, ಸ್ನಾನ ಮಾಡಿಸಿ, ಕೈ ಕಾಲುಗಳನ್ನು ತಿಕ್ಕಿ ಆ ದಿನದ ಮಟ್ಟಿಗೆ ಅವನನ್ನೇ ಗಂಡ ಎನ್ನುವ 'ಅರ್ಪಣ ಭಾವದಿಂದ' ಪೂಜಿಸುತ್ತಿದ್ದರು.

ದೇವದಾಸಿಯನ್ನು ಪೋಷಿಸುತ್ತಿದ್ದ ಊರಿನ ದೊಡ್ಡ ಮನುಷ್ಯರು ಅವರ ಜೀವನ ನಿರ್ವಹಣೆಗೆ ತೊಂದರೆಯಾಗಬಾರದೆಂದು ಅವರ ಹೆಸರಲ್ಲಿ ಆಸ್ತಿ ಬರೆಸಿ ಹಾಕುತ್ತಿದ್ದರು. ಅಲ್ಲದೇ ಯುಗಾದಿ, ದೀಪಾವಳಿಯ ಹಬ್ಬದ ಸಂದರ್ಭದಲ್ಲಿ ಎತ್ತಿನ ಗಾಡಿಗಳಲ್ಲಿ ಆಳುಗಳ ಮೂಲಕ ಉಡುಗೊರೆಗಳನ್ನು

ಕೊಟ್ಟು ಕಳುಹಿಸುತ್ತಿದ್ದರು. ಉಡುಗೊರೆಗಳಲ್ಲಿ ಬೆಲ್ಲ, ಅಕ್ಕಿ, ಚಿನ್ನ, ಬಟ್ಟೆ, ತುಪ್ಪ, ಹಣ್ಣು, ತೈಲದ ಸೀಸೆ ಮುಂತಾದವುಗಳು ಇರುತ್ತಿದ್ದವು. ಈ ರೀತಿಯ ಉಡುಗೊರೆಗಳನ್ನು ಕಳುಹಿಸುವುದೆಂದರೆ ಶ್ರೀಮಂತರಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಕೆಲವೊಮ್ಮೆ ಇಟ್ಟುಕೊಂಡವರು ಕಷ್ಟದಲ್ಲಿದ್ದಾಗ ಸೂಳೆಯರು ಸಹ ಸಹಾಯ ಮಾಡುತ್ತಿದ್ದರೆಂದು ತಿಳಿಯುತ್ತದೆ. ಈ ರೀತಿಯ ಪರಂಪರಾನುಗತವಾದ ವೃತ್ತಿ ಅಂದು ನಾಡಿನ ರಸಿಕ ಜೀವನದ ಒಂದು ಗುರುತಾಗಿತ್ತೇ ಹೊರತು ನಿಂದೆಗೆ ಗುರಿಯಾಗಿದ್ದಂತೆ ಕಾಣಿಸುವುದಿಲ್ಲ.

ಅಡಿಟಿಪ್ಪಣಿಗಳು

೧. ಡಾ. ಶೈಲಜಾ ಹಿರೇಮಠ, **ಪಾತರದವರು,** ಪ್ರಸಾರಾಂಗ ಕನ್ನಡ ವಿ.ವಿ.ಹಂಪಿ, ೧೯೯೯, ಪು.೮೪

೨. ಡಾ. ವಿರೇಶ ಬಡಿಗೇರ, **ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು,** ವಿಮೋಚನ ಪ್ರಕಾಶನ ಪ್ರಕಾಶನ ಅಥಣಿ, ೧೯೯೯, ಪು.೬೫

೩. ಪಾಟೀಲ್ ಎಂ.ಬಿ., ೧೯೮೮, ಪು.೦೪

೪. ರೋಹಿಣಿ ಬಿ.ಎಂ., **ಸ್ತ್ರೀ-ಸಂಸ್ಕೃತಿ ಶಿಕ್ಷಣ,** ಮಂಗಳೂರು ೨೦೦೦, ಪು.೪೦

[illegible]

ಅಧ್ಯಾಯ ೪

ಬಿಸರಳ್ಳಿಯ ದೇವದಾಸಿಯರು

೪.೧. ದೇವದಾಸಿಯರ ಬದುಕಿನ ಸಾಂಸ್ಕೃತಿಕ ಸ್ಥಿತ್ಯಂತರಗಳು

೪.೨. ಪರ್ಯಾಯ ಸಾಧ್ಯತೆಗಳು

೪

ಬಿಸರಳ್ಳಿಯ ದೇವದಾಸಿಯರು

೪.೧. ದೇವದಾಸಿಯರ ಬದುಕಿನ ಸಾಂಸ್ಕೃತಿಕ ಸ್ಥಿತ್ಯಂತರಗಳು

ಸಂಸ್ಕೃತಿಯ ಅಧ್ಯಯನವೊಂದರಲ್ಲಿ ಸಾಂಸ್ಕೃತಿಕ ವ್ಯತ್ಯಾಸ ಬಹಳ ಪ್ರಮುಖವಾದ ಅಂಶ. ಸಂಸ್ಕೃತಿಯು ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತಿರುತ್ತದೆ. ಇದು ನಿರಂತರವಾಗಿ ವ್ಯತ್ಯಾಸ ಹೊಂದುವುದರಿಂದ ಸಾಂಸ್ಕೃತಿಕ ಸ್ಥಿರತೆ ಕೇವಲ ಸಾಪೇಕ್ಷವಾಗಿರುತ್ತದೆ. ಯಾವುದೇ ಒಂದು ವ್ಯವಸ್ಥೆಯು ಅಳಿದು ಹೋಗಲು ಅದಕ್ಕೊಂದು ಹಿನ್ನೆಲೆ ಬೇಕು. ಅದಕ್ಕೆ ಪರ್ಯಾಯವಾಗಿ ಬೇರೆ ಯಾವುದೇ ವ್ಯವಸ್ಥೆ ಆ ಸ್ಥಳವನ್ನು ಆಕ್ರಮಿಸಿದಾಗ ಮೂಲ ಸ್ವರೂಪವು ಸ್ಥಿತ್ಯಂತರ ಗೊಳ್ಳುತ್ತದೆ. ಅದೇ ರೀತಿ ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದಾಗ ಒಂದಲ್ಲ ಒಂದು ರೀತಿಯಲ್ಲಿ ಇನ್ನೊಂದರಲ್ಲಿ ಲೀನವಾಗಿ ಹೋಗಬಹುದು. ಅಥವಾ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬಹುದು. ಇದಕ್ಕೆ ಸಮೀಪದಲ್ಲಿ ವಾಸ ಮಾಡುವ ಸಾಮಾಜಿಕ ವರ್ಗಗಳು ಪರಸ್ಪರ ಸಾಂಸ್ಕೃತಿಕ ಮೂಲಾಂಶಗಳನ್ನು ಸ್ವಿಕರಿಸುವುದೇ ಮುಖ್ಯವಾದ ಕಾರಣವಾಗಿದೆ.

ಹಿಂದೆ ದೇವದಾಸಿಯರ ಜನಾಂಗದವರಲ್ಲಿ ನೃತ್ಯ ಸೇವೆಯೊಂದಿಗೆ 'ವೇಶ್ಯಾವೃತ್ತಿ'ಯು ಪರಂಪರೆಯಿಂದ ಬಂದಿರುವ ಕುಲವೃತ್ತಿಯಾಗಿತ್ತು. ರಾಜಾಶ್ರಯ, ವೀರಾಶ್ರಯ, ರಸಿಕಾಶ್ರಯಗಳಿಂದ ಪೋಷಿತವಾಗಿದ್ದ ಈ ವೃತ್ತಿ ನಾಡಿನ ರಸಿಕ ಜೀವನದ ಸಂಕೇತವಾಗಿತ್ತು. ಆದರೆ ಕಾಲಾ ನಂತರದಲ್ಲಿ ಶ್ರೀಮಂತ ರಸಿಕ, ವೀರರ ಸಂಖ್ಯೆ ಕಡಿಮೆಯಾದಂತೆಲ್ಲ, ವೇಶ್ಯೆಯರ ಬೆಲೆಯೂ ಸಹಕಡಿಮೆಯಾಯಿತು. ಆ ವೃತ್ತಿ ಘನತೆಯ ವೃತ್ತಿಯಾಗುವ ಬದಲು ಅಗ್ಗದ ವೃತ್ತಿಯಾದುದೇ ಅದಕ್ಕೆ ಕಾರಣವಾಗಿದೆ. ಅಂದಿನ ಸಮಾಜದ ಒಂದು ಅಂಗವಾಗಿಯೇ ಪರಿಗಣಿಸಲ್ಪಟ್ಟಿದ್ದ ಈ ವೃತ್ತಿಯು ನಂತರ ಬಿಡು ಕಸುಬಿನ ಜನಗಳಿಂದಾಗಿಯೇ ತನ್ನ ಹಿಂದಿನ ಘನತೆಯನ್ನು ಕಳೆದುಕೊಂಡಿತು.

ಆ ಪ್ರಾಚೀನ ಕಾಲದ ದಿವಸಗಳಲ್ಲಿ ಈ ಸಮಾಜದ ಯಾವುದೇ ವ್ಯಕ್ತಿ ಗಂಡಾಗಲೀ, ಹೆಣ್ಣಾಗಲೀ, ಮದುವೆಯಾಗುವ ಪದ್ಧತಿ ಇರಲಿಲ್ಲ. ಹೆಣ್ಣು ಜನಿಸಿದರೆ ಅವಳನ್ನು ದೇವರಿಗೆ ಅರ್ಪಿಸುವುದರ ಮೂಲಕ ಸಾರ್ವಜನಿಕರ ಉಪಯೋಗಕ್ಕೆ ಬಿಡುತ್ತಿದ್ದರು. ವಿವಾಹದ ಬಗ್ಗೆ ಯಾರು ಕಿಂಚಿತ್ತೂ ಆಸಕ್ತಿ ವಹಿಸುತ್ತಿರಲಿಲ್ಲ. ಹೆಂಗಸರಿಗೆ ಇದು ಒಂದು ರೀತಿಯ ಮೋಜಿನ ಜೀವನವಾಗಿತ್ತು. ಯಾರಾದರೂ ಅವರನ್ನು ಕಾಯಂ

[illegible]

[illegible]

[illegible]

[illegible]

[illegible]

[illegible]

ಆಗಿ ಇಟ್ಟುಕೊಳ್ಳುತ್ತೇವೆಂದರೆ ಹಿಂದೆ ಮುಂದೆ ನೋಡದೇ ಒಪ್ಪಿಕೊಳ್ಳುತ್ತಿದ್ದರು. ಹೆಂಗಸರು ಈ ರೀತಿಯಲ್ಲಿ ಸಂಪಾದನೆ ಮಾಡಿ ಜೀವನ ನಡೆಸಿದರೆ, ಪುರುಷರು ಕೆಳಮಟ್ಟದ ಜೀವನವನ್ನು ನಡೆಸುತ್ತಿದ್ದರು. ತಮ್ಮ ಮನೆಯ ಹೆಂಗಸರಿಗೆ ವಿಟಪುರುಷರನ್ನು ಪೂರೈಸುವಂತೆ ಪರಿಚಾರಕರ ಕೆಲಸವನ್ನು ಮಾಡುತ್ತಿದ್ದರು. ಇವರಲ್ಲಿ ಕೆಲವು ವ್ಯಕ್ತಿಗಳು ಸೋಮಾರಿಗಳಾಗಿದ್ದು, ಗಿರಾಕಿಗಳು ಕೊಡುತ್ತಿದ್ದ ಹೆಂಡ ಮಾಂಸಗಳಿಗೆ ಬಾಯಿ ಬಿಡುತ್ತ, ವಿಷಯ ಲಂಪಟರಾಗಿ ಕೆಟ್ಟ ರೀತಿಯ ಜೀವನವನ್ನು ನಡೆಸುತ್ತಿದ್ದರು. ಬರಬರುತ್ತ ಈ ಸಮಾಜ ಒಂದು ರೀತಿಯಲ್ಲಿ ಅನೈತಿಕತೆಯ ಜೀವನವನ್ನು ರೂಢಿಸಿಕೊಳ್ಳಲಾರಂಬಿಸಿತು. ಇವರನ್ನು ಕುಹಕ ಮಾಡುವುದಕ್ಕಾಗಿಯೇ ನಿಮ್ಮ ಜಾತಿ ಯಾವುದು, ಕುಲ ಯಾವುದು ಎಂದು ಗೊತ್ತಿದ್ದು ವಿಚಾರಿಸಿ ನೋವುಂಟು ಮಾಡುತ್ತಿದ್ದರು. ಅಲ್ಲದೇ ಸಮಾಜವು ಇವರನ್ನು 'ಸೂಳೆಯರು' ಎನ್ನುವುದರ ಮೂಲಕ ಅತ್ಯಂತ ನಿಕೃಷ್ಟವಾಗಿ ಕಾಣಲಾರಂಭಿಸಿತು. ಕ್ರಮೇಣ ಸಮಾಜದಲ್ಲಿ ಹಿಂದಿನ ಗೌರವ ಕಡಿಮೆಯಾದಂತೆ ಈ ಜನಾಂಗದವರು ಗೌರವದ ಜೀವನದ ಅನ್ವೇಷಣೆಯಲ್ಲಿ ತೊಡಗಿದರು. ಈ ಸಂದರ್ಭದಲ್ಲಿ ಆಧುನಿಕ ಶಿಕ್ಷಣದ ಪ್ರಭಾವದಿಂದ ಇವರಲ್ಲಿಯ ವಿದ್ಯಾವಂತ ಯುವಕರು ಸಂಪ್ರದಾಯ ವಾದಿಗಳ ಹಿಂದಿನ ಸಂಪ್ರದಾಯದ ಧೋರಣೆಯನ್ನು ವಿರೋಧಿಸ ತೊಡಗಿದರು.

ತಮ್ಮ ಸಮಾಜಕ್ಕೆ ಆಗುತ್ತಿರುವ ಅನ್ಯಾಯ, ಅವಮಾನ, ದೌರ್ಜನ್ಯ ಮತ್ತು ತಮ್ಮವರ ಕೆಟ್ಟ ಪ್ರವೃತ್ತಿಗಳನ್ನು ಇವರ ಸಮಾಜದ ಕೆಲವು ಹಿರಿಯರು ಪ್ರತಿಭಟನೆ ಮಾಡಿದರು. ಈಗಾಗಲೇ ಈ ಜನಾಂಗದವರು ಸಾಕಷ್ಟು ನೋವು ಅನುಭವಿಸಿರುವುದರಿಂದ ಒಂದು ವ್ಯವಸ್ಥಿತವಾದ ಬದುಕಿನ ನಿರೀಕ್ಷೆಯಲ್ಲಿದ್ದರು. ಸಮಾಜ ಸುಧಾರಣೆಯ ಹೆಸರಿನಲ್ಲಿ ಅನೇಕ ಸಂಪ್ರದಾಯಗಳೆಲ್ಲ ಸಡಿಲವಾಗ ತೊಡಗಿದವು. ದೇವಾಲಯಗಳು ಸಹ ಆರ್ಥಿಕವಾಗಿ ದುರ್ಬಲವಾಗುತ್ತ ತನ್ನ ಹಿಂದಿನ ಮಹತ್ವವನ್ನು ಕಳೆದುಕೊಂಡವು. ದೇವದಾಸಿಯರಿಗೆ ದೇವಾಲಯದಿಂದ 'ಮರ್ಯಾದೆ'ಯಾಗಿ ಸ್ವಲ್ಪಮಟ್ಟಿನ ಸಂಪಾದನೆ ಸಿಗುತ್ತಿತ್ತು. ಇದು ಅವರ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಸಂಸಾರ ದೊಡ್ಡದಾದಂತೆಲ್ಲಾ ಜೀವನ ನಿರ್ವಹಣೆ ಬಹಳ ಕಷ್ಟವಾಯಿತು. ಇದರಿಂದ ಕೆಲವು ಮನೆತನದವರು ಬಹಳಷ್ಟು ಬಡವರಾದರು.

ದೇವದಾಸಿ ಮನೆತನದ ಹಿರಿಯರೆಲ್ಲ ಸೇರಿ ಚಿಂತನೆ ಮಾಡಿ ತಮ್ಮ 'ಕುಲವೃತ್ತಿ'ಯನ್ನು ಬಿಡುವ ತೀರ್ಮಾನಕ್ಕೆ ಬಂದರು. ನಮಗೂ ಎಲ್ಲರಂತೆ ಮದುವೆ, ಸಂಸಾರ ಮೊದಲಾದ ಸಂಸ್ಕಾರಗಳು ಬೇಕು. ನಾವೂ ಕೂಡಾ ಎಲ್ಲರಂತೆ ಮಾನ, ಮರ್ಯಾದೆಯುತವಾದ ಜೀವನ ಮಾಡಬೇಕು ಎಂದು ನಿರ್ಧರಿಸಿದರು. ಹಿರಯ ಮುಖಂಡರಾದ ಹಿರೇಮಳ್ಳಯ್ಯ, ಹುಲಿಗೆವ್ವ ಮಳೆಸಿದ್ದಪ್ಪ, ಭಾರತಿ, ಮಲ್ಲವ್ವ ಹಿರೇಮಲ್ಲಯ್ಯ, ಪಾರ್ವತೆವ್ವ ಗವಿಸಿದ್ಧಯ್ಯ, ಸಾರೆವ್ವ ಹನುಮಪ್ಪ, ಮೈಲವ್ವ ಮದ್ದವ್ವ, ಯಮನವ್ವ, ಗಾಳೆವ್ವ ಮುಂತಾದವರ ನಾಯಕತ್ವದಲ್ಲಿ ಟೊಂಕಕಟ್ಟಿಕೊಂಡು ಸಮಾಜ ಪರಿವರ್ತನೆಯ ಕಾರ್ಯವನ್ನು ಕೈಗೊಂಡರು. ಅದರಂತೆ ತಮ್ಮ ಸಮಾಜವನ್ನು 'ಸೂಳೆಯರು' ಎನ್ನುವುದನ್ನು ಬಿಟ್ಟು'ಪ್ರಜ್ಞಾವಂತ ಸಮಾಜ' ಎಂದು ಪರಿವರ್ತಿಸಿಕೊಂಡರು. ತಮ್ಮಲ್ಲೇ ಇರುವ 'ಭಾರತಿ'ಯವರನ್ನು ತಮ್ಮ ಸಮುದಾಯದ ನಾಯಕಿಯನ್ನಾಗಿ

ನೇಮಿಸಿಕೊಂಡರು. ಸರಿ ಸುಮಾರು ೪ ವರ್ಷಗಳ ಹಿಂದೆ ಈ ತೀರ್ಮಾನವನ್ನು ಕೈಗೊಂಡರು. ತಮ್ಮ ಸಮಾಜವನ್ನು 'ಪ್ರಜ್ಞಾವಂತ ಸಮಾಜ' ಎಂದು ಪರಿವರ್ತಿಸಿಕೊಂಡ ಮೇಲೆ 'ದೇವಾಲಯದ ಸೇವೆ' ಮತ್ತು 'ಕುಲವೃತ್ತಿ'ಯನ್ನು ಬಿಟ್ಟು ತಮ್ಮ ಸಮಾಜದ ಬಂಧು ಬಾಂಧವರ ಹೆಣ್ಣು ಮಕ್ಕಳಿಗೆ ಮತ್ತು ಯುವಕರಿಗೆ ಮದುವೆ ಮಾಡಿಸುವ ಬಗ್ಗೆ ನಿರ್ಧಾರ ಮಾಡಿದರು. ಆದರೆ ಅದೇ ಸಂಪ್ರದಾಯವಾದಿಗಳಾದ ಕೆಲವು ದೇವದಾಸಿಯರೇ ತಮ್ಮ ಸೇವೆಯನ್ನು ನಿಲ್ಲಿಸುವುದಕ್ಕೆ ಒಮ್ಮತ ತೋರಿಸಲಿಲ್ಲ.

ನಾನು ಕೊಪ್ಪಳದಿಂದ ಗುಲಬರ್ಗಾಕ್ಕೆ 'ದೇವದಾಸಿ ಮಹಿಳೆಯರ ವಿಮೋಚನೆಗಾಗಿ' ರಾಜ್ಯಮಟ್ಟದ ಸಮಾವೇಶ(ದಿನಾಂಕ ೧೨-೨-೦೭) ಹೋಗುವ ಸಂದರ್ಭದಲ್ಲಿ ಎಲ್ಲ ಮಾಜಿ ದೇವದಾಸಿಯರು ತಮ್ಮ ತಮ್ಮಲ್ಲೇ ಕಹಿ-ಸುಖ-ದುಃಖಗಳನ್ನು ಹಂಚಿಕೊಂಡರು. ಕೊನೆಗೆ ನನಗೆ ಅನಿಸಿದ್ದು, ಈಗಲಾದರೂ 'ಜಾಗೃತಗೊಂಡ ಮಾಜಿ ದೇವದಾಸಿಯರ ಸಮಾವೇಶ' ಬಹಳ ಸುಗಮ ರೀತಿಯಲ್ಲಿ ನಡೆಸಿಕೊಡಬಹುದೆಂದೆನಿಸಿತು. ಆಗ ಒಬ್ಬ ಗ್ರಾಮೀಣ ದೇವದಾಸಿಯೊಬ್ಬಳು ಈ ರೀತಿ ಮಾತಾನಾಡುತ್ತಿದ್ದಳು. "ದೇವದಾಸಿ ಮತ್ತು ಜೋಗತಿ ಆಗೋದನ್ನ ನೋಡಿದರ ಪೋಲಿಸರು ಬಂದು ಕೇಸ್ ಮಾಡ್ತರಂತೆ. ಹುಲಿಗೆಮ್ಮನ, ಯಲ್ಲವ್ವನ ಗುಡ್ಡದಾಗ ಇಂಥವೆಲ್ಲ ನಡೆಂಗಿಲ್ಲವಂತೆ, ಮೈಯಾಗ ದೇವರ ಬರೋದು, ಜಡೀ ಬಿಡೋದು, ಬರೀಮೈಗ ಬೇವ ಸುತ್ಕೊಂಡು ಸೇವೆ ಮಾಡೋದು ಇಂತವ್ನೆಲ್ಲ ಬಂದ್ ಮಾಡ್ತಾರೆ" ಅಂತ ಹೇಳುತ್ತಿದ್ದರು. ಈ ರೀತಿಯಾಗಿ ಮಧ್ಯ ವಯಸ್ಕ ಗ್ರಾಮೀಣ ಮಹಿಳೆಯೊಬ್ಬಳದೇ ಅಷ್ಟೇ ಅಲ್ಲ ಅಲ್ಲಿದ್ದ ಎಲ್ಲಾ ದೇವದಾಸಿಯರು ಸಹ ಹೌದು ಈ ಪದ್ಧತಿ ನಿಷೇಧ ಆಗಲೇಬೇಕು ಎಂದು ಹಕ್ಕೋತ್ತಾಯ ಆಗಿತ್ತು.

"ನೂರಾರು ವರ್ಷಗಳಿಂದಲೂ ಅನಕ್ಷರತೆ, ಅಂಧ ಶ್ರದ್ಧೆ, ಮೂಢನಂಬಿಕೆ, ಪರಸ್ಪರ ಶೋಷಣೆ, ದೌರ್ಜನ್ಯಗಳಿಂದ ಬಳಲಿದ ಗ್ರಾಮೀಣ ಸಮಾಜವನ್ನು ಕಂಡು ಇದಕ್ಕೆಲ್ಲ ಪರಿಹಾರ ಹುಡುಕಲು ಹೊರಟ ಸಾವಿರಾರು ಬುದ್ಧಿಜೀವಿಗಳು, ಸಮಾಜ ಸೇವಕರು, ಸಂಘಟನೆಗಳು, ಅಧಿಕಾರಗಳ ಶ್ರಮದ ಫಲವಾಗಿ ಇಂದು ಇಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಹಿಂದುಳಿದ ಪ್ರದೇಶಗಳಾದ ಕೊಪ್ಪಳ, ರಾಯಚೂರ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ 'ದೇವದಾಸಿ ಪದ್ಧತಿಯು ಕಡಿಮೆಯಾಗುತ್ತಿರುವುದರ ಜೊತೆಗೆ ಮಹಿಳೆಯರು ಜಾಗೃತರಾಗಿದ್ದಾರೆ. ಸಮಾಜ ಸೇವಕರು, ಸರಕಾರೇತರ ಸಂಘ-ಸಂಸ್ಥೆಗಳ ಸಹಕಾರದಿಂದಾಗಿ 'ಕರ್ನಾಟಕ ರಾಜ್ಯ-ಮಹಿಳಾ ಅಭಿವೃದ್ಧಿ ನಿಗಮದ ದೇವದಾಸಿ ಪುನರ್ವಸತಿ ಯೋಜನೆ'ಯ ಹತ್ತು-ಹಲವಾರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ತಂದಿದೆ. ಅವುಗಳಲ್ಲಿ ಕೆಲವು ಈ ರೀತಿಯಲ್ಲಿವೆ.[೧]

೧. ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್ ಮೂಲಕ ಸಾಲ ಮತ್ತು ಈ ನಿಗಮದಿಂದ ಸಹಾಯಧನ ನೀಡುವ ಮೂಲಕ ಉತ್ತೇಜನ.

೨. ನಿಗಮವು ಗುರುತಿಸಿರುವ ೧೦೧ ಚಟುವಟಿಕೆಗಳ ಪೈಕಿ ಯಾವುದೇ ಆಯ್ಕೆ ಮಾಡಿದ ಒಂದು ಚಟುವಟಿಕೆ ಅಥವಾ ಇನ್ನಾವುದೇ ಲಾಭದಾಯಕ ಚಟುವಟಿಕೆಗೆ ಸಾಲ ಮತ್ತು ಸಹಾಯಧನ ನೀಡಲಾಗುವುದು.

೩. ಗರಿಷ್ಠ ಯೋಜನಾ ಅಂದಾಜು ವೆಚ್ಚ ರೂ.೧.೦೦ ಲಕ್ಷ.

೪. ಬ್ಯಾಂಕ್‌ಗಳು ಮತ್ತು ಇತರೇ ಆರ್ಥಿಕ ಸಂಸ್ಥೆಗಳು ಸಾಲವನ್ನು ಒದಗಿಸುವವು.

೫. ಕುಟುಂಬದ ವಾರ್ಷಿಕ ಆದಾಯ ೪೦,೦೦೦ ಮೀರದ ೧೮ ರಿಂದ ೪೫ ವರ್ಷದೊಳಗಿನ ಮಹಿಳೆಯರು ಈ ಯೋಜನೆಯ ಸೌಲಭ್ಯಕ್ಕೆ ಅರ್ಹರು.

೬. ವಿಶೇಷ ವರ್ಗದ ಮಹಿಳೆಯರಿಗೆ (ಪ.ಜಾತಿ/ಪ.ವರ್ಗ ವಿಧವೆಯರು ಮತ್ತು ಅಂಗ ವಿಕಲೆಯರು) ಯೋಜನಾ ವೆಚ್ಚದ ಶೇಕಡಾ ೩೦ರಷ್ಟು (ಗರಿಷ್ಟ ರೂ.೧೦೦.೦೦೦) ಹಾಗೂ ಇತರೆ ಮಹಿಳೆಯರಿಗೆ ಯೋಜನಾ ವೆಚ್ಚದ ಶೇ.೨೦ರಷ್ಟು (ಗರಿಷ್ಟ ರೂ.೭೫೦೦) ಸಹಾಯಧನವನ್ನು ನಿಗಮವು ಆಯಾಯ ಜಿಲ್ಲೆಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮವು ಉಪನಿರ್ದೇಶಕರ ಮೂಲಕ ನೀಡುವುದು)

೭. ವಿಧವೆ, ಸಂಕಷ್ಟಕ್ಕೊಳಗಾದ ಮಹಿಳೆ ಮತ್ತ ಅಂಗವಿಕಲ ಮಹಿಳೆಯರಿಗೆ ಆದಾಯದ ಮಿತಿ ಇರುವುದಿಲ್ಲ.

೮. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರ/ಉಪನಿರ್ದೇಶಕರ ಮೂಲಕ ಈ ಯೋಜನೆಯ ಅನುಷ್ಠಾನ.

೯. ಸಾಲ ಮಂಜೂರಾದ ನಂತರ ಸಾಲ ಬಿಡುಗಡೆಯ ಮೊದಲು ಈ ಯೋಜನೆಯ ಫಲಾನುಭವಿಗಳಿಗೆ ೩ ದಿನಗಳ ಉದ್ಯಮಶೀಲತೆ ತರಬೇತಿ ಕಡ್ಡಾಯವಾಗಿ ನೀಡಲಾಗುವುದು.

೧೦. ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಖಾಸಗಿ ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಹೆಚ್ಚಿನ ಬಡ್ಡಿ ತರುವುದನ್ನು ತಪ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ.

೧೧. ೨೦೦೬-೦೭ನೇ ಸಾಲಿನಲ್ಲಿ ರೂ.೫೦.೦೨ ಲಕ್ಷ ಆರ್ಥಿಕ ಗುರಿ ಮತ್ತು ೬೬೦ ಭೌತಿಕ ಗುರಿ ನಿಗದಿಪಡಿಸಲಾಗಿದೆ.

೧೨. ಯೋಜನೆಯಡಿ ಮಹಿಳಾ ಸ್ವ-ಉದ್ಯೋಗ ಸಲಹಾ ಕೇಂದ್ರ, ಲಿಂಗ-ತಾರತಮ್ಯ, ಕಾರ್ಯಾಗಾರ, ಬೀದಿನಾಟಕ, ಯೋಜನೆಗಳ ಬಗ್ಗೆ ಪ್ರಚಾರ, ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ಪುಸ್ತಕಗಳ ಖರೀದಿ ಮತ್ತು ಡಾಟಾ ಬ್ಯಾಂಕ್ ನಿರ್ವಹಣೆ ಕೈಗೊಳ್ಳಲಾಗುತ್ತದೆ.

೧೩. ನಿಗಮದ ಕೇಂದ್ರ ಕಚೇರಿಯಲ್ಲಿ, ಬೆಳಗಾವಿ, ಮಂಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ,

ಬಳ್ಳಾರಿ, ಬೆಂಗಳೂರು, ಗುಲಬರ್ಗಾ, ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸ್ವಯಂಸಂಸ್ಥೆಗಳ ಮೂಲಕ ಮಹಿಳಾ ಸ್ವ-ಉದ್ಯೋಗ ಸಲಹಾ ಕೇಂದ್ರಗಳ ನಿರ್ವಹಣೆ

೧೪. ಜಿಲ್ಲಾ ಮಟ್ಟದ ವಿವಿಧ ಇಲಾಖಾ ಅಧಿಕಾರಿಗಳಿಗೆ, ಕಾಲೇಜು ವಿದ್ಯಾರ್ಥಿನಿಯರಿಗೆ ಮತ್ತು ಜನ ಪ್ರತಿನಿಧಿಗಳಿಗೆ ಲಿಂಗತಾರತಮ್ಯದ ಬಗ್ಗೆ ಕಾರ್ಯಗಾರ ಏರ್ಪಡಿಸುವುದು.

೧೫. ಲಿಂಗ ತಾರತಮ್ಯ ಮತ್ತು ಸ್ತ್ರೀ-ಸಮಾನತೆ ಬಗ್ಗೆ ಅರಿವು ಮೂಡಿಸುವುದು.

೧೬. ಅರ್ಹ ಮಹಿಳೆಯರಿಗೆ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣವನ್ನು ಮೂಡಿಸುವಂತಹ ಪ್ರಕ್ರಿಯೆಯನ್ನು ಬಲಪಡಿಸುವುದು.

೧೭. ಈ ಮಹಿಳೆಯರಲ್ಲಿ ಸ್ವಾವಲಂಬನೆ ಮೂಡಿಸಿ, ಸಂಪನ್ಮೂಲಗಳ ಮೇಲೆ ಹತೋಟಿ ಹಾಗೂ ಸಾಮೀಪ್ಯವನ್ನು ಸಾಧಿಸುವುದರ ಜೊತೆಗೆ ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದು.

೧೮. ಪ್ರತಿ ಸ್ವಸಹಾಯ ಗುಂಪಿಗೆ ರೂ.೫೦೦೦ರಂತೆ ಸುತ್ತು ನಿಧಿಯನ್ನು ಈ ೪,೦೦೦ ಗುಂಪುಗಳಿಗೆ ನೀಡಲಾಗಿದೆ.

೧೯. ಅವರಲ್ಲಿ ಸ್ವಾವಲಂಬನೆ ಮೂಡಿಸಿ ಸಂಪನ್ಮೂಲಗಳ ಮೇಲೆ ಹತೋಟಿ ಸಣ್ಣ ವ್ಯಾಪಾರದಲ್ಲಿ ಮಹಿಳೆಯರನ್ನು ತೊಡಗಿಸುವುದರ ಮೂಲಕ ಅವರ ಆದಾಯವನ್ನು ಹೆಚ್ಚಿಸಿ ಅವರಲ್ಲಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು.

೨೦. ನಗರ ಸ್ತ್ರೀ-ಶಕ್ತಿ ಯೋಜನೆಯ ಅನುಷ್ಠಾನಕ್ಕಾಗಿ ೨೦೦೬-೦೭ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ.೧೯೪.೭೮ ಲಕ್ಷಗಳ ಆಯವ್ಯಯವನ್ನು ಒದಗಿಸಿದೆ.

ದೇವದಾಸಿ ಪದ್ಧತಿಗೆ ಬಲಿಯಾಗಿದ್ದ ಸಾವಿರಾರು ಮಹಿಳೆಯರು ತಮ್ಮದೇ ಆದ ಸಂಘ ರಚಿಸಿಕೊಂಡಿದ್ದಾರೆ. ಆರ್ಥಿಕ ಹಾಗೂ ಸಾಮಾಜಿಕವಾಗಿ ಬೆನ್ನೆಲುಬಾಗಿ ನಿಲ್ಲಬಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ೧೯೯೩-೯೪ರ ಸಮೀಕ್ಷೆಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ೩೬೦೦, ಬಿಜಾಪುರದಲ್ಲಿ ೧೯೬೪, ಬಾಗಲಕೋಟೆ ೪೮೦೪, ರಾಯಚೂರು ೨೪೯೪ 'ಕೊಪ್ಪಳದಲ್ಲಿ ૩೫૩೪' ಗದಗದಲ್ಲಿ ೧೪೭೧, ಬಳ್ಳಾರಿಯಲ್ಲಿ ೧೬೩೫, ಧಾರವಾಡದಲ್ಲಿ ೪೮೧, ಹಾವೇರಿ ೬೧೭ ಗುಲ್ಬರ್ಗಾದಲ್ಲಿ ೯೧೧ ದೇವದಾಸಿಯರನ್ನು ಗುರುತಿಸಲಾಗಿತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ನಮ್ಮ ಕೊಪ್ಪಳ ಜಿಲ್ಲೆಯೊಂದರಲ್ಲಿ ಪುನಃ ಸಮೀಕ್ಷೆ ಮಾಡಿದರೆ ಸುಮಾರು ೬೦೦೦ಕ್ಕೂ ಅಧಿಕ ದೇವದಾಸಿಯರು ಇರುವವರೆಂದು ಜಿಲ್ಲಾ ಯೋಜನಾಧಿಕಾರಿ ಯಾದ ಡಿ. ದೇವರಾಜ್‌ರವರು ತಿಳಿಸಿದ್ದಾರೆ.

ಕರ್ನಾಟಕ ದೇವದಾಸಿ (ಸಮರ್ಪಣೆ) ನಿಷೇಧ ಕಾಯ್ದೆ ಇತ್ತೀಚಿನ ವರ್ಷಗಳಲ್ಲಿ, ಇಂದು ಈ ಎಲ್ಲಾ ಜಿಲ್ಲೆಗಳಲ್ಲಿ ದೇವದಾಸಿ ಪದ್ಧತಿಯನ್ನು ತಡೆಗಟ್ಟಿ, ಮಾಜಿ ದೇವದಾಸಿಯರ ಆರ್ಥಿಕ ಹಾಗೂ

ಸಾಮಾಜಿಕ ಅಭಿವೃದ್ಧಿ ನಿಗಮವು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ. ಮಾಜಿ ದೇವದಾಸಿಯರ ಸ್ವಸಹಾಯ-ಗುಂಪುಗಳ ರಚನೆ, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಈ ಕಾರ್ಯಕ್ರಮಗಳು ಹಲವೆಡೆ ನಿರೀಕ್ಷಿತ ಫಲ ನೀಡಿವೆಯಾದರೂ ಇನ್ನೂ ಕೆಲವೆಡೆ ಇದಕ್ಕೆ ಹೆಚ್ಚಿನ ಸಮಯಬೇಕಾಗಬಹುದೆಂದು ಈ ಯೋಜನೆಯ ಕೊಪ್ಪಳ ಜಿಲ್ಲೆಯ ಯೋಜನಾಧಿಕಾರಿಯಾದ ಡಿ. ದೇವರಾಜರವರ ಅಭಿಪ್ರಾಯವಾಗಿದೆ.

ದೇವದಾಸಿಯರ ಆರ್ಥಿಕ ಅಭಿವೃದ್ಧಿಗೆ ಸರಕಾರ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಆದಾಯ ತರುವಂತಹ ಚಟುವಟಿಕೆಗಳಿಗಾಗಿ ಬ್ಯಾಂಕ್ ಮುಖಾಂತರ ಸಾಲ ಹಾಗೂ ಯೋಜನಾ ವೆಚ್ಚದಲ್ಲಿ ಗರಿಷ್ಠ ೬೦ರಷ್ಟು ಸಹಾಯ ಧನ ಒದಗಿಸಲಾಗುತ್ತದೆ. ಆರ್ಥಿಕವಾಗಿ ಸಹಾಯವಾಗುವಂತ ವಿವಿಧ ಚಟುವಟಿಕೆಗಳಲ್ಲಿ ದೇವದಾಸಿಯರು ತೊಡಗಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಸ್ವಸಹಾಯ ಸಂಘಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಇವರ ಮಕ್ಕಳು ಉತ್ತಮ ಅಭ್ಯಾಸ ಪಡೆಯುತ್ತಿದ್ದಾರೆ.

"ಇಷ್ಟು ವರ್ಷ ಅದ್ಯಾಂಗೋ ಜೀವನ ತೆಗದೇವ್ರಿ ಈಗ ಸರಕಾರ ನಮ್ಮ ಸಲುವಾಗಿ ಒಳ್ಳೆ ಕಾರ್ಯಕ್ರಮ ಹಾಕಿಕೊಂಡೈತ್ರಿ ಹಿಂಗ ಸಹಾಯ ಮಾಡ್ರೋರ ಇದ್ರಿ ನಾವ್ಯಾಕ ದೇವದಾಸಿ ಆಕ್ಕೇವ್ರಿ" ಎಂದು ಬಿಸರಳ್ಳಿಯ ದೇವದಾಸಿಯರು ಪ್ರಶ್ನಿಸುತ್ತಾರೆ. ಯಾವುದೇ ಸರಕಾರಿ ಕಾರ್ಯಕ್ರಮಗಳಲ್ಲಿ ಜನರು ಹಾಗೂ ಸಂಘ-ಸಂಸ್ಥೆಗಳು ಜವಾಬ್ದಾರಿಯುತವಾಗಿ ಪಾಲ್ಗೊಂಡರೆ ಉತ್ತಮ ಬದಲಾವಣೆ ಕಾಣಬಹುದಾಗಿದೆ.

ಬಿಸರಳ್ಳಿ ದೇವದಾಸಿ ಪದ್ಧತಿಯ ಸ್ಥಿತ್ಯಂತರ : ಬಿಸರಳ್ಳಿ ದೇವದಾಸಿ ಪದ್ಧತಿಯ ಸ್ಥಿತ್ಯಂತರಕ್ಕೆ ಶಿಕ್ಷಣವು ಒಂದು ಪ್ರಮುಖ ಕಾರಣವಾಗಿದೆ. ಶೈಕ್ಷಣಿಕ ಮುಂದುವರಿದ ಸಮಾಜದಲ್ಲಿ ಯಾವುದೇ ರೀತಿಯ ಅಜ್ಞಾನ ಮತ್ತು ಮೂಢನಂಬಿಕೆಗಳಿಗೆ ಅವಕಾಶ ಇರುವುದಿಲ್ಲ. ಅವಿದ್ಯಾವಂತನಾದವನು ಯಾವಾಗಲೂ ಗೊಡ್ಡು ಸಂಪ್ರದಾಯಗಳಿಗೆ ಆಶ್ರಯನಾಗಿರುತ್ತಾನೆ. ಮನುಷ್ಯ ಜೀವನದ ಪ್ರತಿ ಹಂತದಲ್ಲಿಯೂ ಮಾನವೀಯತೆಯನ್ನು ಮಾನವೀಕರಣಗೊಳಿಸುವಲ್ಲಿ ಶಿಕ್ಷಣ ಅತಿ ಅವಶ್ಯಕವಾಗಿದೆ. ಶಿಕ್ಷಣವು ಮನುಷ್ಯನನ್ನು ಅಸತ್ಯದಿಂದ ಸತ್ಯದ ಕಡೆಗೆ ಅಜ್ಞಾನದಿಂದ ಸುಜ್ಞಾನ ಕಡೆಗೆ ಕೊಂಡೊಯ್ಯುತ್ತದೆ. ಶಿಕ್ಷಣದಿಂದ ಮನುಷ್ಯನ ಮನಸ್ಸು ವಿಶಾಲವಾಗುತ್ತದೆ. ಯಾವುದೇ ಕಾರ್ಯ ಮಾಡಬೇಕಾದರೂ ವಿದ್ಯಾವಂತನಾದವನು ಯೋಚನೆ ಮಾಡುತ್ತಾನೆ.

ಬಿಸರಳ್ಳಿಯಲ್ಲಿ ಆಧುನಿಕ ಶಿಕ್ಷಣವು ೧೯೫೭ ರಿಂದ ಆರಂಭವಾದ ಸರಕಾರಿ ಪ್ರಾಥಮಿಕ ಶಾಲೆ, ಸ್ವಾತಂತ್ರ್ಯ ಪೂರ್ವದಲ್ಲಿ ಸರಕಾರಿ ಪ್ರಾಥಮಿಕ ಶಾಲೆ ಇದ್ದರೂ ಅಂದು ಆರ್ಥಿಕವಾಗಿ ಅನುಕೂಲವಾಗಿದ್ದವರು ಮಾತ್ರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದರು. ಆದರೂ ಯಾವಾಗ ಆಧುನಿಕಶಿಕ್ಷಣವು ಬಿಸರಳ್ಳಿಯಲ್ಲಿ ಆರಂಭವಾದಾಗ ದೇವದಾಸಿ ಸಮಾಜದವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರಾರಂಭಿಸಿದರು ಈ ಜನಾಂಗ ಶೋಷಣೆಗೆ ತುತ್ತಾಗಿರುವುದರಿಂದ ಶಿಕ್ಷಣವು ಅನಿವಾರ್ಯವಾಗಿ ಬೇಕಾಗಿತ್ತು. ಇವರು ಯಾವಾಗ ತಮ್ಮ ಮಕ್ಕಳನ್ನು ಶಾಲೆಗೆ ನೊಂದಾಯಿಸಲು ಆರಂಭಿಸಿದರೋ ಆಗಲೇ

[illegible]

[illegible]

ಸಮಸ್ಯೆಯನ್ನು ಎದುರಿಸಬೇಕಾಯಿತು. ಯಾಕೆಂದರೆ ಮಗುವನ್ನು ಶಾಲೆಯಲ್ಲಿ ನೊಂದಾಯಿಸುವಾಗ ಜಾತಿ ಮತ್ತು ತಂದೆಯ ಹೆಸರನ್ನು ಅಗತ್ಯವಾಗಿ ಸೂಚಿಸಬೇಕಾಗುತ್ತಿತ್ತು. ಅನಧಿಕೃತ ತಂದೆಯ ಹೆಸರನ್ನು ಸೂಚಿಸುವುದು ಈ ಸಮಾಜದ ಸ್ತ್ರೀಯರಿಗೆ ಬಹಳಷ್ಟು ಮುಜುಗರ ಆಗುತ್ತಿತ್ತು. ಶಿಕ್ಷಣ ಪಡೆದ ಈ ಸಮಾಜದ ಹೆಣ್ಣು ಮಕ್ಕಳು ತಮ್ಮ ಕುಲವೃತ್ತಿಯನ್ನು ಮುಂದುವರಿಸಲು ಆಸಕ್ತಿವಹಿಸುತ್ತಿರಲಿಲ್ಲ. ಎಷ್ಟೋ ಸಲ ಮುಂದುವರಿಸಿದರೂ ಅದು ಒತ್ತಾಯದ ಹೇರಿಕೆ ಆಗಿತ್ತೇ ಹೊರತು ಒಪ್ಪಿಗೆಯಿಂದಲ್ಲ. ಈ ಸಂದರ್ಭದಲ್ಲಿ ಸಾಂಪ್ರದಾಯಿಕ ಗೃಹಸ್ಥಜೀವನ ಪದ್ಧತಿ ಇವರಲ್ಲಿ ಪ್ರಚಲಿತದಲ್ಲಿ ಇಲ್ಲದೇ ಇದ್ದುದರಿಂದ ಕೆಲವೊಮ್ಮೆ ಅನಿವಾರ್ಯವಾಗಿ, ಕುಲವೃತ್ತಿಯನ್ನು ಒಪ್ಪಿಕೊಳ್ಳಲೇಬೇಕಾಗುತ್ತಿತ್ತು. ಈ ಜನಾಂಗದ ವಿದ್ಯಾವಂತ ಯುವಕರು ತಮ್ಮ ಕುಲದ ವೃತ್ತಿಯನ್ನು ವಿರೋಧಿಸುತ್ತಿದ್ದರು. ಎಷ್ಟೋ ಜನ ವಿದ್ಯಾವಂತರು ಉದ್ಯೋಗವನ್ನು ಅರಿಸಿ ಬೇರೆ ಬೇರೆ ಊರುಗಳಿಗೆ ಹೊರಟು ಹೋದರು. ಇದರ ಜೊತೆಯಲ್ಲಿ ತಮ್ಮ ಪರಿವಾರದವರನ್ನು ಕರೆದುಕೊಂಡು ಹೋದವರು ಇದ್ದಾರೆ. ಇದರಿಂದ ಈ ಪದ್ಧತಿಗೆ ದೊರೆಯಬೇಕಾಗಿದ್ದ ಬೆಂಬಲ ಕಡಿಮೆ ಆಯಿತು. ಇದರ ಮುಂದಿನ ಪೀಳಿಗೆಯು ಈ ಪದ್ಧತಿಯನ್ನು ಸ್ವೀಕಾರ ಮಾಡಲಿಲ್ಲ.

ದೇವದಾಸಿಯರು ದೇವಾಲಯದಲ್ಲಿ ತಮ್ಮ ನೃತ್ಯ ಸೇವೆಯನ್ನು ನಿಲ್ಲಿಸಿದಾಗಲೇ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮಾನಸಿಕ ಸಮಸ್ಯೆಗಳು ಹಲವಾರು ಸಂದರ್ಭಗಳಲ್ಲಿ ಎದುರಾದವು. ಕೆಲವು ಸಮಾಜದವರು ಪ್ರಭಾವ ವ್ಯಕ್ತಿಗಳು 'ಕುಲವೃತ್ತಿ'ಯನ್ನು ಮುಂದುವರೆಸುವಂತೆ ಒತ್ತಡ ಹೇರಲಾರಂಭಿಸಿದರು. ಕೆಲವರು ಇದು ಕೆಟ್ಟ ವೃತ್ತಿ, ಇದು ಊರಿಗೆ ಅಥವಾ ಗ್ರಾಮಕ್ಕೆ ಒಂದು ದೊಡ್ಡ ಕಳಂಕ ಇದರಿಂದ ಬಹಳಷ್ಟು ಜನ ಯುವಕರು ಕೆಟ್ಟ ದಾರಿ ಹಿಡಿಯಬೇಕಾಯಿತು. ಇನ್ನೂ ಮುಂದೆ ಈ ಪ್ರವೃತ್ತಿಯನ್ನು ಮುಂದುವರಿಸಕೂಡದೆಂದು ಒಳ್ಳೆಯ ನುಡಿ ಹೇಳಿದರು. ದೇವದಾಸಿಯರು ತಮ್ಮ ವೃತ್ತಿಯನ್ನು ನಿಲ್ಲಿಸಿದಾಗ ಇವರ ಕುಟುಂಬಗಳಲ್ಲಿ ಸಾಕಷ್ಟು ಸಮಸ್ಯೆಗಳು ಆದವು. ವಿವಾಹವಾದ ನಂತರ ಕೆಲವು ಮನೆಗಳಲ್ಲಿ ಒಂದೋ ಗಂಡು ಸಾಯುವುದು ಇಲ್ಲವೋ ಹೆಣ್ಣು ಸಾಯುವುದು. ಎಷ್ಟೋ ಜನ ಈ ಸಮುದಾಯದವರಿಗೆ ಹುಚ್ಚು ಹಿಡಿಯಿತು. ಅನೇಕ ವ್ಯಕ್ತಿಗಳು ಕಾಯಿಲೆಗಳಿಂದ ಮರಣವಾದರು ಆಗ ಅವರೆಲ್ಲ ದೇವರು ಸಿಟ್ಟಾದನೆಂದುಕೊಂಡು ನಾವು ಸಹ ನಾಶವಾಗುವೆಂದು ಭಾವಿಸಿದರು. ಆದರೂ ಎಷ್ಟೋ ಸಮಸ್ಯೆಗಳು ಬಂದರೂ ಸಹ ಇವರು ತಮ್ಮ ತೀರ್ಮಾನವನ್ನು ಪರಿವರ್ತನೆ ಮಾಡಿಕೊಳ್ಳಲಿಲ್ಲ ಎಲ್ಲವನ್ನು ಎದುರಿಸಲು ಸಿದ್ಧರೆಂದು ಪಣತೊಟ್ಟು ಒಂದು ನಿರ್ಧಾರವೇ ಇವರ ಪ್ರಮುಖ ಗುರಿಯಾಗಿತ್ತು. ಇದೇ ವೇಳೆಯಲ್ಲಿ ಊರಿನಲ್ಲಿ ಸಂಘರ್ಷವೇ ಆರಂಭವಾಯಿತು. ಕೆಲವು ವ್ಯಕ್ತಿಗಳು ಇವರನ್ನು ಹೆದರಿಸಿದರು. ನೀವು ಎಲ್ಲರೂ ಸಾಯುತ್ತೀರಿ, ನಿಮ್ಮ ವೃತ್ತಿಯನ್ನು ನಿಲ್ಲಿಸಬೇಡಿ, ಕುಲವೃತ್ತಿಯನ್ನು ಮುಂದುವರಿಸಿ ಎಂದು ಒತ್ತಡ ತರುವುದು ಅಷ್ಟೇ ಅಲ್ಲದೇ ಹೆದರಿಕೆಯನ್ನುಂಟು ಮಾಡಿದರು.

ಅಂದು ಜಮೀನ್‌ದಾರಿ ವ್ಯವಸ್ಥೆ ಮುಂದುವರೆದಿದ್ದರಿಂದ ಜನಸಾಮಾನ್ಯರ ಶೋಷಣೆ ಸಾಮಾನ್ಯವಾಗಿತ್ತು. ಆದರೂ ಕುಟುಂಬದ ಮುಖಂಡರ ಯಾವುದೇ ರೀತಿಯ ಹೆದರಿಕೆಗಳಿಗೆ ಬಗ್ಗದೇ ತಮ್ಮ ನಿರ್ಧಾರ ಬದಲಾಯಿಸಲಿಲ್ಲ. ನಾವು ಇಂದು ತೊಂದರೆ ಅನುಭವಿಸಿದರೂ ನಮ್ಮ ಮುಂದಿನ ಪೀಳಿಗೆ ನೆಮ್ಮದಿ ಇರಬಹುದೆಂದು ಭಾವಿಸಿ ತಮ್ಮ ಪ್ರಗತಿಯ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ತಮ್ಮ ಮಕ್ಕಳಿಗೆಲ್ಲಾ ಉತ್ತಮ ವಿದ್ಯಾಭ್ಯಾಸ ಕೊಡಿಸುತ್ತ ವಿವಾಹ ಮುಂತಾದ ಸಂಸ್ಕಾರಗಳನ್ನು ಮುಂದುವರಿಸಿಕೊಂಡರು.

ವಿವಾಹವಾದ ಕೆಲವು ಯುವತಿಯರು ಬೇರೆ ತೊಂದರೆಯನ್ನು ಅನುಭವಿಸಬೇಕಾಯಿತು, ಊರಿನ ಶ್ರೀಮಂತ ಯುವಕರು ಇವರ ಹೆಣ್ಣುಗಳು ಮದುವೆಯಾಗುವುದನ್ನು ವಿರೋಧ ಮಾಡುತ್ತಿದ್ದರು. ಮಾನಸಿಕವಾಗಿ ಅವರನ್ನು ಅತಿ ದುರ್ಬಲರನ್ನಾಗಿ ಮಾಡುತ್ತಿದ್ದರು. ವಿವಾಹವಾದ ಚೆಂದದ ಹೆಣ್ಣುಗಳನ್ನು ತಮ್ಮ ಗ್ರಾಮದಲ್ಲಿ ಸಂತೋಷದಿಂದ ಜೀವನ ಮಾಡುವುದಕ್ಕೆ ಬಿಡಲಿಲ್ಲ. ಇವರ ಕಿರುಕುಳಕ್ಕೆ ಕೆಲವರು ಮದುವೆಯಾಗಿ ಊರನ್ನು ಬಿಟ್ಟು ಹೋದರೂ ಇವರ ತೊಂದರೆ ತಪ್ಪಲಿಲ್ಲ. ಮದುವೆಯಾಗುತ್ತೇವೆಂದು ಬಂದ ಹೊರಗಿನ ಯುವಕರಿಗೆ ಊರಿನವರು ಒಪ್ಪಿಗೆ ಕೊಡುತ್ತಿರಲಿಲ್ಲ. ಎಷ್ಟೋ ಸಲ ವಿವಾಹ ಸಂಬಂಧಗಳನ್ನು ಕಡಿದು ತಪ್ಪಿಸುತ್ತಿದ್ದರು. ಈ ರೀತಿಯ ಎಷ್ಟೋ ಹೆದರಿಕೆಗಳಿಗೆ ಬಗ್ಗದೇ ಈ ಸಮುದಾಯದವರು ತಮ್ಮ ನಿರ್ಧಾರವನ್ನು ಬದಲಾವಣೆ ಮಾಡಿಕೊಳ್ಳಲಿಲ್ಲ. ಇದರಿಂದಾಗಿ ಆಧುನಿಕತೆಯಲ್ಲಿ ಇವರು ಸಂತೋಷದಿಂದ ಇರಲಿಕ್ಕೆ ಅವಕಾಶವಾಗಿದೆ.

೪.೨. ಪರ್ಯಾಯ ಸಾಧ್ಯತೆಗಳು

ಇಂದು ದೇವದಾಸಿ ಸಮಾಜದವರು ಸುವ್ಯವಸ್ಥಿತವಾದ ಸಾಮಾಜಿಕ ಬದುಕನ್ನು ನಿರ್ಮಿಸಿಕೊಂಡಿದ್ದಾರೆ. ಅವರಿಗೆ ನಿರ್ದಿಷ್ಟವಾದ ಜಾತಿ ಇಲ್ಲದೇ ಇರುವುದರಿಂದ ಸಾಮಾಜಿಕ ನೆಲೆಯ ದೃಷ್ಟಿಯಿಂದ ಪ್ರಜ್ಞಾವಂತ ಸಮಾಜವೆಂದು ನಿರ್ಮಿಸಿಕೊಂಡಿದ್ದಾರೆ. ತಮ್ಮ ಹಿಂದಿನದನ್ನು ಮರೆತು ಇಂದಿನ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಂಡಿದ್ದಾರೆ. ದೇವದಾಸಿಯರ ಮಕ್ಕಳು ಸಹ ವಿವಾಹವಾಗಿ ಗೃಹಸ್ಥ ಜೀವನವನ್ನು ನಡೆಸುತ್ತಿದ್ದಾರೆ. ಸಮಾಜದ ಬೇರೆ ಜಾತಿಯವರೊಂದಿಗೆ ಮದುವೆಯಾಗಿ ಸಂಬಂಧಗಳು ಏರ್ಪಟ್ಟು ಆಯಾ ಸಮುದಾಯದ ಸದಸ್ಯರಾಗಿ ಬದಲಾವಣೆ ಹೊಂದಿದ್ದಾರೆ.

ಇಂದಿನ ವಿದ್ಯಾವಂತ ಯುವ ಪೀಳಿಗೆಯವರಿಗೆ ತಮ್ಮ ಸಮುದಾಯದ ಹಿಂದಿನ ಸಂಪ್ರದಾಯ ಮತ್ತು ನಡವಳಿಕೆ ಬಹಳ ಬೇಸರ ತಂದಿದೆ. ಇವರು ತಾವು 'ಸೂಳೇರ ಸಮಾಜದವರು' ಎಂದು ಗುರುತಿಸಿಕೊಳ್ಳುವುದಕ್ಕೆ ಯಾರೂ ಇಷ್ಟ ಪಡುವುದಿಲ್ಲ. ಈ ಸಮಾಜದ ಎಷ್ಟೋ ಜನ ವಿದ್ಯಾವಂತ ಯುವಕರು ಬೇರೆ ಬೇರೆ ಊರುಗಳಲ್ಲಿ ವಿವಾಹವಾಗಿ ತಮ್ಮ ಸಂಸಾರಗಳೊಂದಿಗೆ ನೆಲೆಸಿದ್ದಾರೆ. ಇವರು ತಮ್ಮ ಸ್ವಂತ ಹುಟ್ಟೂರಿಗೆ ಬರುವುದಕ್ಕೆ ಆಸಕ್ತಿ ವಹಿಸುವುದಿಲ್ಲ. ತಮ್ಮ ಮುಖಂಡರು, ಹಿರಿಯರು

ಈ ರೀತಿಯ ಸಂಪ್ರದಾಯದವರೆಂದು ತಮ್ಮ ಹೆಂಡತಿ ಮಕ್ಕಳಿಗೆ ಹೇಳಿಕೊಳ್ಳುವುದಕ್ಕೆ ನಾಚಿಕೆ ಪಟ್ಟುಕೊಳ್ಳುತ್ತಾರೆ.

ಈ ಸಂಪ್ರದಾಯದ ಬಗ್ಗೆ ವಿವರ ನೀಡುವುದಕ್ಕೆ ಪ್ರಜ್ಞಾವಂತ ಸಮಾಜದವರು ಬಹಳಷ್ಟು ವಿರೋಧ ವ್ಯಕ್ತಪಡಿಸುತ್ತಾರೆ. ಅವರ ಬಗ್ಗೆ ನಡೆಯುವ ಯಾವುದೇ ರೀತಿಯ ಪ್ರಚಾರವನ್ನು ಅವರು ಇಷ್ಟಪಡುವುದಿಲ್ಲ. ಇವೆಲ್ಲ ಘಟನೆಗಳು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ನನ್ನ ಅರಿವಿಗೆ ಬಂದವು. ಅವರ ನೋವು ಹೇಗಿದೆ ಎಂದರೆ 'ಅದೆಲ್ಲ ಮುಗಿದು ಹೋದ ಕಥೆ. ನೀವು ಅದನ್ನು ಅಧ್ಯಯನ ಮಾಡಿಕೊಂಡು ಏನ್ ಮಾಡ್ತೀರಿ ಮತ್ತೇ ಮತ್ತೇ ಕೆರಳಿಸಿ ನಮ್ಮ ಮನಸ್ಸಿಗೆ ದಯವಿಟ್ಟು ನೋವು ತರಬೇಡಿ. ಹಿಂದೆ ನಮ್ಮಲ್ಲಿ ಈ ರೀತಿಯ ಸಂಪ್ರದಾಯ ಇದ್ದರೆ ಅದಕ್ಕೆ ನಾವು ಹೊಣೆಗಾರರಲ್ಲ ಯಾಕೆಂದರೆ ಎಲ್ಲ ಕುಲವೃತ್ತಿಗಳಂತೆ ಈ ವೃತ್ತಿಯು ಸಹ ನಮ್ಮ ಹಿರಿಯರಿಂದ ಪದ್ಧತಿಯಾಗಿ ಬಂದಿರುವುದು. ನಮ್ಮವರು ಮಳೇಶ್ವರನನ್ನು ಮದುವೆಯಾದವರು. ಇದೇ ದೃಷ್ಟಿಯಿಂದ ಇತರರಿಗೂ ಸೇವೆ ಮಾಡುತ್ತಿದ್ದರು. ಆಧುನಿಕತೆಯಲ್ಲಿ ಇದು ಅನೈತಿಕವಾಗಿ ಕಂಡುಬಂದರೂ ಹಿಂದೆ ಅದು ಅನೈತಿಕ ಜೀವನವಾಗಿರಲಿಲ್ಲ. ಅಂದು ಸಮಾಜವು ಒಪ್ಪಿಕೊಂಡು ಬಂದಂತಹ ಒಂದು ಸಂಪ್ರದಾಯವಾಗಿತ್ತು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಇಂದು ಈ ಸಮುದಾಯದವರು 'ಪ್ರತಿಭಾವಂತ'ರೆಂದು ಮತ್ತು ಪ್ರಜ್ಞಾವಂತರೆಂದು ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ವಿದ್ಯಾವಂತರು, ಕರ-ಕುಶಲ ಕರ್ಮಿಗಳು ಮತ್ತು ಉತ್ತಮ ಬೀದಿನಾಟಕ ಕಲಾವಿದರಾಗಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಕಲೆಯ ದೃಷ್ಟಿಯಿಂದ ನೋಡಿದಾಗ ಸಮುದಾಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ಕಲಾಭಿರುಚಿ ಎನ್ನುವುದು ಇವರಲ್ಲಿ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಬೀದಿನಾಟಕಗಳಲ್ಲಿ, ರಂಗಾಭಿನಯದಲ್ಲಿ ಇವರದು ಎತ್ತಿದ ಕೈ ಅಂತಹವರಲ್ಲಿ 'ಭಾರತಿ' ಬಿಸರಳ್ಳಿ ಬೀದಿ ನಾಟಕದಲ್ಲಿನ ನಟನೆ ಅಮೋಘವಾದುದು. ಇವರು ಮಾಜಿ ಕಾರ್ಯದರ್ಶಿಯಾಗಿ ದೇವದಾಸಿ ಮಹಿಳೆಯರ ವಿಮೋಚನೆಗಾಗಿ ಸಾಕಷ್ಟು ಶ್ರಮವಹಿಸಿ ದುಡಿದಿದ್ದಾರೆ.

ಪ್ರಸ್ತುತ ಬಿಸರಳ್ಳಿಯಲ್ಲಿ ಸುಮಾರು ೫೦ ರಿಂದ ೬೦ ಮನೆಗಳಿದ್ದು, ಇವರೆಲ್ಲರೂ ತಮ್ಮ ಮೊದಲಿನ ಸಂಪ್ರದಾಯವನ್ನು ತ್ಯಜಿಸಿ ಪ್ರತಿಭಾವಂತರಾಗಿ ಜೀವನ ಸಾಗಿಸುತ್ತಿದ್ದಾರೆ. ಈಗ ಕೃಷಿ, ವ್ಯಾಪಾರ, ಸಣ್ಣಪುಟ್ಟ ಗೃಹ ಕೈಗಾರಿಕೆ, ಬೀದಿನಾಟಕ, ಮುಂತಾದವುಗಳನ್ನು ನಡೆಸುತ್ತಿದ್ದಾರೆ. ಇವರೆಲ್ಲರಿಗೂ ತಮ್ಮ ಜನಾಂಗದ ಬೆಳವಣಿಗೆಗೆ ಪ್ರಾಮುಖ್ಯತೆ ಕೊಡುವುದು ಅಷ್ಟೇ. ಇದರಲ್ಲಿ ತುಂಬಾ ಹೆಮ್ಮೆ ಅವರಿಗಿದೆ. ಸರ್ಕಾರ ಇತರ ಹಿಂದುಳಿದ ಜನಾಂಗದವರಿಗೆಲ್ಲ ಬೆಳವಣಿಗೆಯ ಸುಳ್ಳಿನ ಕಂತೆಯಲ್ಲಿ ಪ್ರೋತ್ಸಾಹ ನೀಡುತ್ತದೆ. ಅವರಿಗೆ ಮೀಸಲಾತಿ ಅಂತಹ ಸೌಲಭ್ಯಗಳನ್ನು ಕೊಟ್ಟು, ಸಾಕಷ್ಟು ಮೇಲಕ್ಕೆ ತರುವುದಕ್ಕೆ ಪ್ರಯತ್ನಿಸುತ್ತದೆ. ಆದರೆ ನಾವು ಮಾತ್ರ ಯಾರ ಸಹಕಾರವೂ ಇಲ್ಲದೇ ಅಂಜದೇ, ಅಳುಕದೇ

[illegible]

[illegible]

[illegible]

[illegible]

ಅಭಿವೃದ್ಧಿ ಹೊಂದುತ್ತಾ ಇದ್ದೇವೆ. ಇದೇ ನಮಗೆಲ್ಲ ನೆಮ್ಮದಿಯ ವಿಷಯವೆಂದು ತಮ್ಮ ಸಮುದಾಯದವರ ಬಗ್ಗೆ ಸಾಕಷ್ಟು ಗೌರವ ಭಾವನೆಯಿಂದ ಹೇಳಿಕೊಳ್ಳುತ್ತಾರೆ. ಅಭಿವೃದ್ಧಿಯ ದೃಷ್ಟಿಯಿಂದ ಸರಕಾರ ಇವರನ್ನು ನಿರ್ಲಕ್ಷ್ಯ ಮಾಡಿದ್ದು, ಅತ್ಯಂತ ಖೇದಕರ ವಿಷಯವಾಗಿದೆ. ಈ ಸಮುದಾಯಕ್ಕೆ ವಿಶೇಷವಾದ ಪ್ರಾತಿನಿಧ್ಯವನ್ನು ನೀಡಲೇಬೇಕಾಗಿದೆ.

ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಂದು ಮಾನವ ಜೀವ ಸುಖ ಸಮೃದ್ಧಿ ಬಯಸುವುದು ಸಹಜವಾಗಿದೆ. ಕಡಲಲ್ಲಿ ಬಿದ್ದು ಸಾಯುವುದಕ್ಕೆ ಯಾರೂ ಆಶೆ ಪಡುವುದಿಲ್ಲ. ಇದು ಪುರೋಹಿತ ಜನ ರಚಿಸಿದ ಚಕ್ರವ್ಯೂಹವಾಗಿದೆ. ಈ ಚಕ್ರದೊಳಗೆ ಈ ಹೆಣ್ಣುಮಕ್ಕಳಿಗೆ ಬರುವುದಷ್ಟೇ ಗೊತ್ತು ಆದರೆ ಹೊರಗೆ ಹೋಗುವುದು ಗೊತ್ತಿಲ್ಲದೇ ಇರುವುದರಿಂದ ಈ ಹೆಣ್ಣು ಮಕ್ಕಳ ಸ್ಥಿತಿ ಬಹಳಷ್ಟು ಗಂಭೀರವಾಗಿದೆ. ಸಾವಿರಾರು ವರ್ಷಗಳಿಂದ ಹುಟ್ಟ ಹಾಕಿದ ದೇವದಾಸಿ ಜನಾಂಗವನ್ನು ಜರ್ಜರಿತರನ್ನಾಗಿ ಮಾಡಿದ ಅನಿಷ್ಠ ಪದ್ದತಿ ಆದಷ್ಟು ಬೇಗನೆ ಹೋಗಲು ಸಾಧ್ಯವಿಲ್ಲ. ಈ ಕೆಟ್ಟ ಪದ್ಧತಿಯನ್ನು ಸಂಪೂರ್ಣ ನಾಶಮಾಡಿ ಪರ್ಯಾಯ ವ್ಯವಸ್ಥೆ ಮಾಡಬೇಕಾಗುವುದು ಅನಿವಾರ್ಯವಾಗಿದೆ.

ಕಾಲ ಬದಲಾವಣೆಯಾದರೂ ಕೊಪ್ಪಳ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮನ ದೇವಸ್ಥಾನದಲ್ಲಿ ಜೋಗಮ್ಮ, ಜೋಗಪ್ಪ ಹಾವಳಿ ನಿಂತಿಲ್ಲ. ಈ ಮುಗ್ಧ ಜನತೆಯ ಮೇಲೆ ಸಮಾಜಘಾತುಕ ಶಕ್ತಿಗಳಿಂದ ನಡೆಯುತ್ತಿರುವ ಶೋಷಣೆ ಅಂತ್ಯಗೊಳಿಸಲು ಸರಕಾರ ಇಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಯತ್ನ ಮಾಡಿಲ್ಲ. ದೇವದಾಸಿ ಪದ್ಧತಿ ನಿಯಂತ್ರಣ ಮಾಡಲು ಜಾತ್ರೆ ಸಮಯಕ್ಕೆ ಸರಕಾರ ನೀಡುವ ಜಾಹೀರಾತು ಪ್ರಕಟಣೆ ಓದಿ ಅರಿತುಕೊಳ್ಳುವಷ್ಟು ಇಲ್ಲಿಯ ಜನ ವಿದ್ಯಾವಂತರಲ್ಲ ನಿರಕ್ಷರಿಗಳು. ಹುಲಿಗಿಯ ಹುಲಿಗೆಮ್ಮನ ದೇವಸ್ಥಾನದಲ್ಲಿ ಈ ದೇವದಾಸಿ ಪದ್ಧತಿ ನಿಯಂತ್ರಣಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯ ಅಗತ್ಯವಿದೆ. 'ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ' ಮತ್ತು ದೇವದಾಸಿ ಪುನರ್ವಸತಿ ಯೋಜನೆ, ಜಿಲ್ಲಾ ಯೋಜನೆ ಕೊಪ್ಪಳ ಜಂಟಿ ಇವರಿಂದ ಶತಶತಮಾನಗಳಿಂದ ಬಂದಿರುವ ಈ ಅನಿಷ್ಟ ಪರಂಪರೆಯನ್ನು ನಿರ್ಮೂಲನೆ ಮಾಡಲು ಸಾಕಷ್ಟು ಜನಜಾಗೃತಿಯನ್ನು ಮೂಡಿಸಿದ್ದಾರೆ. ಅಷ್ಟೇ ಅಲ್ಲದೇ ಸಾಕಷ್ಟು ಜಾತ್ರೆಯ ಕಾಲಕ್ಕೆ ಜಾಹೀರಾತು ಪ್ರಕಟನೆಗಳು ಮತ್ತು ಸ್ವಯಂ ಸೇವಕರು ಧ್ವನಿ ವರ್ಧಕಗಳ ಮೂಲಕ ಜನ ಜಾಗೃತಿಯನ್ನು ಮೂಡಿಸಲು ಯಶಸ್ವಿಯಾಗಿದ್ದಾರೆ. ಅಂತಹ ಕೆಲವು ಪ್ರಕಟನೆಗಳು ಈ ರೀತಿಯಲ್ಲಿ ಇವೆ.

ಸರ್ಕಾರಿ ಪ್ರಕಟಣೆ

ಕರ್ನಾಟಕ ಸರಕಾರ, ಕರ್ನಾಟಕ ರಾ.ಮ.ಅ.ನಿಗಮ ಕೊಪ್ಪಳ ದೇವದಾಸಿ ಪುನರ್ವಸತಿ ಯೋಜನೆ, ಜಿಲ್ಲಾ ಯೋಜನಾ ಕಚೇರಿ, ಕೊಪ್ಪಳ ಈ ರೀತಿ ಪ್ರಕಟಿಸಿದೆ.

ಕರ್ನಾಟಕ ದೇವದಾಸಿ (ಸಮರ್ಪಣೆ) ನಿಷೇಧ ಕಾಯ್ದೆ, ೧೯೮೨ರ ಪ್ರಕಾರ ಯಾವುದೇ ಹೆಣ್ಣು ಮಗುವಿಗೆ/ಮಹಿಳೆಗೆ ಮುತ್ತು ಕಟ್ಟಿ ದೇವದಾಸಿಯನ್ನಾಗಿ ಮಾಡುವುದು ಅಪರಾಧ. ಇದನ್ನು ಪ್ರೋತ್ಸಾಹಿಸಿದವರಿಗೆ ೫ ವರ್ಷ ಜೈಲು ಶಿಕ್ಷೆ ಹಾಗೂ ೫೦೦೦ ರೂ. ದಂಡ ವಿಧಿಸಲಾಗುತ್ತದೆ.

[illegible]

ತಲೆಕೂದಲನ್ನು ಹಿಕ್ಕದೇ ಸ್ವಚ್ಛ ಮಾಡದೇ ಇದ್ದಲ್ಲಿ ಅದು ಹೊಲಸಾಗಿ, ಗಂಟಾಗಿ ಜಿಡ್ಡುಗಟ್ಟುತ್ತದೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದನ್ನು ಸ್ವಚ್ಛ ಮಾಡಿಸಿಕೊಂಡು ಆರೋಗ್ಯಪೂರ್ಣ ಜೀವನ ನಡೆಸಿರಿ.

ಬೆತ್ತಲಾಗಿ ಬೇವಿನ ತೊಪ್ಪಲು ತೊಟ್ಟು ಹರಕೆ / ಸೇವೆ ಸಲ್ಲಿಸುವುದು ಅನಾಗರಿಕ ಪದ್ಧತಿ. ಬಟ್ಟೆ/ಅರಿವೆ ಉಟ್ಟು ಅದರ ಮೇಲೆ ಬೇವಿನ ತೊಪ್ಪಲು ಸುತ್ತಿ ಹರಕೆ/ಸೇವೆ ಸಲ್ಲಿಸಿರಿ. ದೇವರ ಹೆಸರಿನಲ್ಲಿ ಜೋಗ/ಭೀಕ್ಷೆ ಬೇಡಬೇಡಿ. ಜೋಗ/ಭೀಕ್ಷೆ ನೀಡಬೇಡಿ. ಅವರಿಗೆ ದುಡಿದು ಬದುಕಲು ತಿಳುವಳಿಕೆ ನೀಡಿ.

ಹೊಸ್ತಿಲು/ರಂಡೆ ಹುಣ್ಣಿಮೆಯಂದು ಬಳೆ ಒಡೆಯುವ ಪದ್ಧತಿಯ ಮೂಢ ನಂಬಿಕೆಯನ್ನು ಅಳಿಸಿ, ದೇವದಾಸಿ ಪದ್ಧತಿಯನ್ನು ನಿಲ್ಲಿಸುವ ಮೂಲಕ ದೇವಿಗೆ ನಿಜವಾದ ಭಕ್ತಿಯನ್ನು ಸಲ್ಲಿಸಿ ಎಂದು ಪ್ರಕಟಿಸಿದೆ.

'ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ' ದೇವದಾಸಿ ಪುನರ್ವಸತಿ ಯೋಜನೆ, ಜಿಲ್ಲಾ ಯೋಜನಾ ಕಚೇರಿ, ಕೊಪ್ಪಳ ಇವರು ಪ್ರಕಟಿಸಿದಂತೆ ಜನರಲ್ಲಿ ಜಾಗ್ರತಿ ಮೂಡಲು ಪ್ರಯತ್ನಿಸಲಾಗುತ್ತದೆ.

ಸಾಮಾಜಿಕ ಜಾಗ್ರತಿಗೆ ಸಲಹೆಗಳು : ಅನೇಕ ಶತಮಾನಗಳಿಂದಲೂ ಅನಕ್ಷರತೆ, ಮೂಢನಂಬಿಕೆ, ಪರಸ್ಪರ ಶೋಷಣೆ, ದೌರ್ಜನ್ಯಗಳಿಂದ ಬಳಲಿದ ಸಮಾಜವು ೨೧ನೇ ಶತಮಾನದಲ್ಲಿಯಾದರೂ ಶಾಂತಿ ನೆಮ್ಮದಿ ಪರಸ್ಪರ ಸೌಹಾರ್ದತೆಯಿಂದ ಬಾಳುವಂತಾಗಲಿ ಎಂದು ಪ್ರಯತ್ನಿಸೋಣ. ಹಲವು ಮೂಢನಂಬಿಕೆ, ಸ್ವಾರ್ಥದಿಂದ ಮಹಿಳೆಯರು ಮತ್ತು ಮಕ್ಕಳ ಮೇಲಾಗುತ್ತಿರುವ ಶೋಷಣೆ, ದೌರ್ಜನ್ಯಗಳನ್ನು ತಡೆಗಟ್ಟಲು ಸಾಮಾಜಿಕ ಜಾಗೃತಿಯ ಕಹಳೆಯನ್ನು ಮೊಳಗಿಸೋಣ. ಸಮಾಜದಲ್ಲಿ ನಾಗರಿಕರೂ ಸಹ ತಮಗೆ ತಿಳಿಯದೇ ಮಾಡುತ್ತಿರುವ ಕೆಲವು ಆಚರಣೆಗಳಿಂದ ದೇವರ ಹೆಸರಿನಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಬಲಿ ತೆಗೆದುಕೊಳ್ಳುವ ದೇವದಾಸಿ ಪದ್ದತಿಯಂತಹ ಅಂಧ ಆಚರಣೆಗಳು ಜನ ಜೀವನದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕಾಗಿದೆ.

ದೇವಿಯ ಜಗ ಹೊತ್ತು ಬರುವ ಜೋಗಮ್ಮ/ಜೋಗಪ್ಪಗಳಿಗೆ ಭಿಕ್ಷೆ ಜೋಗ ನೀಡುವುದನ್ನು ನಿಲ್ಲಿಸಿ. ದೇವದಾಸಿ ಮಹಿಳೆಯರನ್ನು ಮದುವೆ, ಗೃಹಪ್ರವೇಶ, ಜಾತ್ರೆ, ಸುಗ್ಗಿಗಳಲ್ಲಿ ನೀವು ಕರೆಯಿಸಬಾರದು. ನೀವು ಆದರಿಸಿ ನೀಡುವ ಕಾಳು, ಜೋಳ, ಬಟ್ಟೆ, ರೊಕ್ಕ, ಉಡುಗೊರೆಗಳ ಆಸೆಗಾಗಿ ಬಡ ದೇವದಾಸಿ ಮಹಿಳೆಯರ ಹಾಗೂ ಇತರರ ಮಕ್ಕಳು ಸಹ ಜೋಗ ಬೇಡುವ ಕಸುಬನ್ನೇ ಅವಲಂಬಿಸುತ್ತಾರೆ. ಇದರಿಂದಾಗಿ ಜೋಗಮ್ಮ ಅಥವಾ ಜೋಗಪ್ಪಗಳಾಗುವಂತೆ ಆಗುತ್ತದೆ. ತಮಗೆ ತಿಳಿಯದೇ ಆಗುತ್ತಿರುವ ಈ ಅನಾಹುತವನ್ನು ತಪ್ಪಿಸಿ ಜೋಗ/ಭಿಕ್ಷೆ ಬೇಡುವವರಿಗೆ ಅದನ್ನು ಬಿಟ್ಟು ಬದುಕಲು ತಿಳಿವಳಿಕೆ ನೀಡುವ ಅವಶ್ಯಕತೆ ಇದೆ.

ದೇವರು ಬಂದಂತೆ ಆಡುವುದು ಕೆಲವರಿಗೆ ಮಾನಸಿಕ ಸನ್ನಿ/ಖಾಯಿಲೆಯಾದರೆ ಇನ್ನು ಕೆಲವರಿಗೆ ಸಮಾಜದಲ್ಲಿ ಮನ್ನಣೆ ಗಳಿಸುವ ಮತ್ತು ಜೀವನ ಸಾಗಿಸುವ ಸುಲಭದ ದಾರಿಯಾಗಿದೆ. ಇಂತಹವರು ಜನರನ್ನು ವಂಚಿಸುತ್ತಾರೆ. ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುತ್ತಿರಬಹುದು. ಅಂತಹವರಿಗೆ ಸರಿಯಾಗಿ ತಿಳುವಳಿಕೆ ನೀಡಿ, ಮಾನಸಿಕ ದೌರ್ಬಲ್ಯವನ್ನು ಸರಿಪಡಿಸಿಕೊಳ್ಳಲು ನುರಿತ ವೈದ್ಯರ ಸಹಾಯ ಪಡೆಯಲು ತಿಳಿಸಬೇಕು. ನಿಮ್ಮ ನಿಜವಾದ ಭಕ್ತಿಯಿಂದ ದೇವರ ಶಕ್ತಿಯನ್ನು ಗೌರವಿಸಬೇಕು.

ತಲೆಕೂದಲನ್ನು ಹಿಕ್ಕದೇ (ಬಾಚದೇ) ಎಣ್ಣೆ ಹಾಕದೆ, ಸ್ವಚ್ಛ ಮಾಡದೇ ಇರುವುದರಿಂದ ಅದು ಗಂಟಾಗಿ ಜಿಡ್ಡು ಗಟ್ಟುತ್ತದೆ. ಇದರಿಂದ ಕೂದಲಿಗೆ 'ಪೈಕಾ ಫಲಾನಿಕಾ' ಎಂಬ ಸೋಂಕು ತಗುಲಿ, ಹೊಲಸಾಗಿ, ಜಿಡ್ಡುಗಟ್ಟಿದ ಸತ್ತ ಕೂದಲಾಗುತ್ತದೆ. ಇದನ್ನು ದೇವಿಯೆಂದು ಕೆಲವರು ಪೂಜಿಸುತ್ತಾರೆ. ಮತ್ತು ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇಂತಹ ಜನರಿಗೆ ತಿಳುವಳಿಕೆ ನೀಡಿ ಜಿಡ್ಡುಗಟ್ಟಿದ ಜಡೆಯನ್ನು ಸ್ವಚ್ಛಗೊಳಿಸಿಕೊಂಡು ಆರೋಗ್ಯ ಪೂರ್ಣ ಜೀವನ ನಡೆಸಲು ಸಹಾಯ ಮಾಡಬೇಕು.

ಮಹಾ ಪತಿವ್ರತೆಯಾದ ದೇವಿಯ ಹೆಸರಿನಲ್ಲಿ ಬೆತ್ತಲಾಗಿ ಬೇವಿನ ತೊಪ್ಪಲು ಧರಿಸಿ ಸೇವೆ ಸಲ್ಲಿಸುವುದು. ಅನಾಗರಿಕ ಪದ್ಧತಿ ಆದ್ದರಿಂದ ಮೈಮೇಲೆ ಬಟ್ಟೆ ಧರಿಸಿಕೊಂಡು ಮತ್ತು ಅದರ ಮೇಲೆ ಬೇವಿನ ತೊಪ್ಪಲು ಧರಿಸಿ ಸೇವೆ ಸಲ್ಲಿಸಿ ನಾಗರಿಕತೆಯನ್ನು ಉಳಿಸಬೇಕು.

ಗಂಡಸರು ಹೆಂಗಸರಂತೆ ನಟಿಸುತ್ತಾ, ಸೀರೆ ಧರಿಸಿ ಕೊಡಹೊತ್ತು ತಿರುಗುವುದು, ಮಾನಸಿಕ ದೌರ್ಬಲ್ಯದಿಂದ/ದೋಷಯುಕ್ತ ಅಂಗಾಂಗಗಳನ್ನು ಹೊಂದಿರುವುದರಿಂದ / ಇವೆರಡೂ ಇಲ್ಲದಿದ್ದಲ್ಲಿ ಜೀವನ ನಿರ್ವಹಣೆಗಾಗಿ ಸುಲಭದಾರಿ ಹಿಡಿಯಲು ನಟಿಸುತ್ತಲೂ ಇರಬಹುದು. (ದೇವರೇ ಸೃಷ್ಟಿಸಿದ ಪ್ರಕೃತಿ ನಿಯಮದಂತೆ ಹೆಣ್ಣು ಮತ್ತು ಗಂಡು ಎಂಬ ಎರಡು ನಿಯಮಗಳಿರುವಾಗ ದೇವರೆ ನಿಯಮದ ವಿರುದ್ಧವಾಗಿ ಗಂಡಸರನ್ನು ಹೆಂಗಸರಂತೆ ವರ್ತಿಸಲು ಕೇಳುತ್ತಾರೆನ್ನುವುದು ಸರಿಯೇ ನೀವೆ ಯೋಚಿಸಿ) ಅಂತಹವರಿಗೆ ಅಗತ್ಯವಿದ್ದಲ್ಲಿ ವೈದ್ಯರ ಸಹಾಯದಿಂದ ಸರಿಯಾದ ಒಳ್ಳೆ ಜೀವನ ನಡೆಸಲು ತಿಳುವಳಿಕೆ ನೀಡಬೇಕು.

'ಓಕುಳಿ'ಯಲ್ಲಿ ಹೆಂಗಸರಿಗೆ ರಾಡಿ ನೀರು ಎರಚುವ ಅಮಾನುಷ ಪದ್ಧತಿಯನ್ನು ನಿಲ್ಲಿಸಿ, ಬ್ರಹ್ಮಚಾರಿ ಹನುಮಂತ ದೇವರ ಹೆಸರಿನಲ್ಲಿ ಮಹಿಳೆಯರಿಗೆ ಈ ರೀತಿ ಅಪಮಾನ ಮಾಡುವುದು ಸರಿಯಲ್ಲ. ಬುದ್ಧಿವಂತ ಜನರೇ ೨೧ನೇ ಶತಮಾನದಲ್ಲಿಯಾದರೂ ಪರಿಶುದ್ಧ ನಾಗರಿಕ ಜೀವನವನ್ನು ಹೊಂದಲು ಪರಸ್ಪರ ತಿಳುವಳಿಕೆ ನೀಡಲೇಬೇಕು.

ಬಾಲ್ಯ ವಿವಾಹ ನಿಗ್ರಹ ಕಾಯ್ದೆ ೧೯೭೮ರ ಪ್ರಕಾರ ಹುಡುಗನಿಗೆ ೨೧ ಮತ್ತು ಹುಡುಗಿಗೆ ೧೮ ವರ್ಷ ವಯಸ್ಸಾಗುವುದರೊಳಗೆ ಮದುವೆ ಮಾಡುವುದು ಶಿಕ್ಷಾರ್ಹ ಅಪರಾಧ. ಈ ಅಪರಾಧದಲ್ಲಿ ತೊಡಗುವವರಿಗೆ ದಂಡ ಹಾಗೂ ಶಿಕ್ಷೆಯನ್ನು ವಿಧಿಸಲಾಗುತ್ತದೆ.

[illegible]

[illegible]

[illegible]

[illegible]

[illegible]

ಜಡೆಕಟ್ಟಿದ ಕೂದಲನ್ನು ಸ್ವಚ್ಛ ಮಾಡಿದಾಗ ದೇವಿ ಕಾಡುತ್ತಾಳೆ ಎನ್ನುವುದು ತಪ್ಪು ಕಲ್ಪನೆ ಕೆಲವರು ಇಂತಹ ಜಡೆಯನ್ನು ಹೊಂದಿ ಅದನ್ನು ದೇವರೆಂದು ಜನರಿಗೆ ನಂಬಿಸಿ, ಹೆದರಿಸಿ, ತಮ್ಮ ಹೊಟ್ಟೆ ಪಾಡಿನ ಸಾಧನವನ್ನಾಗಿ ಸಮಾಜದಲ್ಲಿ ಮನ್ನಣೆಗಳಿಸುವ ಉಪಾಯವನ್ನಾಗಿ ಮಾಡಿಕೊಂಡಿದ್ದಾರೆ. ಸಮಾಜವನ್ನು ತಪ್ಪು ದಾರಿಗೆ ಎಳೆಯುವ ಇಂತಹ ಸುಳ್ಳು ಆಚರಣೆಗಳನ್ನು ಭಕ್ತರು ನಂಬದೇ ಜಿಡ್ಡುಗಟ್ಟಿದ ಜಡೆಯನ್ನು ಸ್ವಚ್ಛಗೊಳಿಸಲೇ ಬೇಕಾಗಿದೆ. ಅರಿಯದ ಜನರನ್ನು ಮೂಢನಂಬಿಕೆಯಿಂದಾಗಿ ಕೂದಲು ಹಿಕ್ಕದೇ ಎಣ್ಣೆ ಹಾಕದೇ ಜಿಡ್ಡು ಗಟ್ಟಿಸಿಕೊಂಡಿರುವ ಸತ್ತ ಕೂದಲನ್ನು ನೀವು ದೇವಿ ಎಂದು ನಂಬಿ ಮಂಗಳವಾರ, ಶುಕ್ರವಾರಗಳಲ್ಲಿ ಪೂಜಿಸುತ್ತೀರಿ. ಅವರಿಗೆ ಭಿಕ್ಷೆ ಸಹ ನೀಡುತ್ತೀರಿ. ಹೊಲಸು ನಾರುವ ಕೂದಲನ್ನು ದೇವಿ ಬೇಡುವುದಿಲ್ಲ. ಅದಕ್ಕಾಗಿ ನಿಮ್ಮನ್ನು ಕಾಡುವುದು ಇಲ್ಲ. ಇದುವರೆಗೆ ಸಾವಿರಾರು ಜನ ಹೆಂಗಸರು, ಗಂಡಸರು ಮತ್ತು ಮಕ್ಕಳು ಜಿಡ್ಡುಗಟ್ಟಿದ ಹೊಲಸಾದ ತಮ್ಮ ಕೂದಲನ್ನು ಸ್ವಚ್ಛಗೊಳಿಸಿಕೊಂಡು ಆರೋಗ್ಯ ಪೂರ್ಣವಾದ ಜೀವನ ನಡೆಸುತ್ತಿರುವುದೋ, ಜಡೇ ದೇವಿಯ ಕಾಟವಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಜಾತ್ರೆಗಳಲ್ಲಿ ಹುಟ್ಟು ಉಡಿಗೆ (ಗಂಡು ಉಟ್ಟಿಗೆ) ಅಂದರೆ ಬೆತ್ತಲಾಗಿ ಬೇವಿನ ತಪ್ಪಲ ಸುತ್ತಿಕೊಂಡು ಹರಕೆ ತೀರಿಸುವ ಆಚರಣೆಯು ಅನಾಗರಿಕ ಸಂಸ್ಕೃತಿ ಎನಿಸಿಕೊಳ್ಳಬಹುದು. ಅಲ್ಲದೇ ಮೈತುಂಬ ಪತ್ತಲ ಧರಿಸಿರುವ ಪತಿವ್ರತೆ ಎಂದು ಒಂದು ಕಡೆ ಹೊಗಳುತ್ತಾ ಇನ್ನೊಂದು ಕಡೆ ಅವಳದೇ ಹೆಸರಿನಲ್ಲಿ ಬೆತ್ತಲಾಗಿ ಹೋಗುವುದು ಯಾವ ನ್ಯಾಯ?[೨]

ಪ್ರಚಾರದ ಗೀಳು ಇಲ್ಲದ ನಿಸ್ವಾರ್ಥ ಯೋಜನೆ ವರ್ಷದ ಉದ್ದಕ್ಕೂ ಜಾರಿಗೊಂಡಾಗ ಮಾತ್ರ ದೇವದಾಸಿಯರ ಶೋಷಣೆ ತಡೆಗಟ್ಟಲು ಸಾಧ್ಯವಾಗುತ್ತದೆ. ಬಡತನ ಅಥವಾ ಮೂಢನಂಬಿಕೆಯ ಅನಿವಾರ್ಯದ ಹೊಂದಾಣಿಕೆಯಲ್ಲಿ ದೇವದಾಸಿರಾಗುವ ಜನಕ್ಕೆ ಬೇರೆ ವ್ಯವಸ್ಥೆ ಅವಶ್ಯಕವಾಗಿದೆ. ಉತ್ತಮ ಶಿಕ್ಷಣ, ಪುನರ್ವಸತಿ ಯೋಜನೆ ಪರಿಣಾಮಕಾರಿಯಾದಾಗ ಹುಲಿಗಿಯ ಹುಲಿಗೆಮ್ಮ ದೇವಸ್ಥಾನದಲ್ಲಿ ಜಾರಿಗೊಂಡಾಗ ಈ ಕೆಟ್ಟ ಪದ್ಧತಿ ಕೊನೆಗೊಳಿಸಲು ಸಾಧ್ಯವಾಗುತ್ತದೆ. ಶತಮಾನಗಳಿಂದ ಬಂದಿರುವ ಈ ಅನಿಷ್ಟ ಪದ್ಧತಿ ಈಗ ಸಂಪೂರ್ಣವಾಗಿ ನಿಂತಿಲ್ಲವಾದರೂ ಸಾಕಷ್ಟು ಜನಜಾಗೃತಿ ಎಂಬುದು ಮೂಡಿಸಬೇಕಾಗಿದೆ. ಈ ಪದ್ಧತಿಯನ್ನು ಕಾಯ್ದೆ-ಕಾನೂನಿನಿಂದ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. ದೇವದಾಸಿ ಕುಟುಂಬಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು ಅಷ್ಟೇ ಅಲ್ಲದೇ, ಈ ಅಂಧಶ್ರದ್ಧೆಗೆ ಕಾರಣವಾಗುತ್ತಿರುವ ಇಲ್ಲಿ ನಡೆಯುವ ಜಾತ್ರೆಗಳನ್ನೇ ನಿಷೇಧಿಸಲೇಬೇಕು. ದೇವದಾಸಿಯರ ತವರೂರು ಎಂಬ ಅಪಖ್ಯಾತಿ ಹೊಂದಿರುವ ಪ್ರದೇಶಗಳಲ್ಲಿ ಈ ಪದ್ಧತಿಯನ್ನು ದೂರ ಮಾಡಲು ದೇವಸ್ಥಾನದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪನೆಯಾಗಲೇ ಬೇಕು.[೩]

[illegible]

[illegible]

[illegible]

ಪೋಲೀಸ್ ಗುಪ್ತದಳ ಕಾರ್ಯವು ಅಗತ್ಯವಾಗಿರುತ್ತದೆ. ಉತ್ತಮ ಪ್ರವಾಸಿ ಕೇಂದ್ರವಾಗಿ ಪರಿವರ್ತನೆ ಆದಾಗ ಸಾರ್ವಜನಿಕರ ಜೊತೆಯಲ್ಲಿ ಬೆರೆತಾಗ ಮಾತ್ರ ಈ ಅನಿಷ್ಟ ಪದ್ಧತಿಯ ಅಂತ್ಯವಾಗಬಹುದಾಗಿದೆ. ಜಾತ್ರೆಯ ಕಾಲಕ್ಕೆ ದೇವದಾಸಿಯರನ್ನು ದೇವರಿಗೆ ಸಮರ್ಪಿಸಿಕೊಳ್ಳುವುದರಿಂದ ಇದನ್ನು ಕಾನೂನಿಂದ ತಡೆಗಟ್ಟಲು ಸಾಧ್ಯವಿಲ್ಲ. ಆದರೆ ಶಿಕ್ಷಣ, ಬಡತನದ ನಿವಾರಣೆ ಉದ್ಯೋಗದ ಅವಕಾಶ ಈ ರೀತಿಯ ಪರ್ಯಾಯ ವ್ಯವಸ್ಥೆಯ ಮೂಲಕ ತಡೆಗಟ್ಟಲು ಸಾಧ್ಯವಿದೆ. ಸರಕಾರ ಮತ್ತು ಜನತೆಯ ಸಹಕಾರದ ಮೂಲಕ, ಒಗ್ಗೂಡಿದಾಗ ಮಾತ್ರ ಈ ಅನಿಷ್ಟ ಪದ್ಧತಿಯನ್ನು ನಾಶಮಾಡಲು ಸಾಧ್ಯವಾಗುತ್ತದೆ ಎಂದು ಹೇಳಬಹುದಾಗಿದೆ.[೪]

ಅಡಿಟಿಪ್ಪಣಿಗಳು

೧. ಕರ್ನಾಟಕ ರಾಜ್ಯ, ಮಹಿಳಾ ಅಭಿವೃದ್ಧಿ ನಿಗಮ, ದೇವದಾಸಿ ಪುನರ್ವಸತಿ ಯೋಜನೆ, ಬೆಂಗಳೂರು

೨. ಕರ್ನಾಟಕ ಸರಕಾರ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಕೊಪ್ಪಳ

೩. ಚೆನ್ನಣ್ಣ ವಾಲೀಕಾರ, ಕರ್ನಾಟಕ ದೇವದಾಸಿಯರ ಸಮಸ್ಯೆಗಳ ಸಮಗ್ರ ಅಧ್ಯಯನ, ಸಾಹಿತ್ಯ ಪ್ರಕಾಶನ, ಗುಲಬರ್ಗಾ, ೨೦೦೧, ಪು.೬೦೭

೪. ಅದೇ, ಪು.೬೧೦

ಅಧ್ಯಾಯ ೫

ಸಮಾರೋಪ

೫

ಸಮಾರೋಪ

ಇದುವರೆಗೆ ಇಲ್ಲಿ ನಡೆಸಿದ 'ಬಿಸರಳ್ಳಿ ದೇವದಾಸಿ ಪದ್ಧತಿ'ಯ ಅಧ್ಯಯನದಿಂದ ಈ ಕೆಳಗಿನ ಅಂಶಗಳು ವ್ಯಕ್ತವಾಗುತ್ತವೆ.

ಒಟ್ಟಾರೆ ಸಂಸ್ಕೃತಿಯಲ್ಲಿ ದೇವದಾಸಿ ಸಂಪ್ರದಾಯವು ಶುದ್ಧ ಧಾರ್ಮಿಕ ಹಿನ್ನೆಲೆಯಲ್ಲಿ ಉಗಮಗೊಂಡಿದ್ದರೂ, ನಂತರ ಅದು ಕೆಲವು ಪ್ರಭಾವೀ ವ್ಯಕ್ತಿಗಳಿಂದಾಗಿ ತನ್ನ ಮಹತ್ವ ಕಳೆದುಕೊಂಡಿತು. ಉತ್ತರ ಕರ್ನಾಟಕದ ದೇವದಾಸಿ ಪದ್ಧತಿಯು ಜಾತ್ಯಾತೀತವಾದುದು. ಇದು ಕುಲಕಸುಬು ಆಧಾರಿತ ವೃತ್ತಿಯಾಗಿತ್ತು. ಸ್ಥಳೀಯ ಸಂಸ್ಕೃತಿಯಲ್ಲಿ ರಾಜ ಮಹಾರಾಜರ ಐಷಾರಾಮದ ಜೀವನದ ಸಂಕೇತವಾಗಿ ಈ ಪದ್ಧತಿಯು ಪ್ರಚಲಿತಕ್ಕೆ ಬಂದಿದ್ದರೂ, ಮುಂದೆ ಅವರ ಅವನತಿಯೊಂದಿಗೆ ಈ ಪದ್ಧತಿಯು ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿರುವುದು ವಿಷಾದಕರ ಸಂಗತಿ.

ಹಳೆಯ ಕಾಲದ ರಾಜಾಶ್ರಯ, ರಸಿಕಾಶ್ರಯಗಳಿಂದ ಪೋಷಿಸಲ್ಪಡುತ್ತಿದ್ದ ಈ ವೃತ್ತಿಯು ನಾಡಿನ ರಸಿಕ ಜೀವನದ ಒಂದು ಕುರುಹಾಗಿತ್ತೇ ಹೊರತು ನಿಂದೆಗೇ ಗುರಿಯಾಗಿದ್ದಂತೆ ಕಾಣಿಸುವುದಿಲ್ಲ. ಕಾಲಗತಿ ಕೆಡುತ್ತ ಸರಿದಂತೆ ಶ್ರೀಮಂತ ರಸಿಕ ವೀರರ ಸಂಖ್ಯೆ ಕಡಿಮೆಯಾದಂತೆ, ನೃತ್ಯ, ಗೀತಾದಿಗಳಿಗೆ ಬೆಲೆ ಕಡಿಮೆಯಾದಂತೆ ದೇವದಾಸಿಯರ ಬೆಲೆಯೂ ಕಡಿಮೆಯಾಯಿತು. ಆ ಕಸುಬು ಘನತೆಯ ಕಸುಬಾಗುವ ಬದಲು ಅಗ್ಗದ ಕಸುಬಾದುದೇ ಅದಕ್ಕೆ ಕಾರಣವಾಗಿದೆ.

''ಗೆಜ್ಜೆಕಟ್ಟಿದ'' ದೇವದಾಸಿಯರನ್ನು ಇಟ್ಟುಕೊಂಡ ವ್ಯಕ್ತಿಯು ಅವಳನ್ನು ದೈಹಿಕ ಮೋಹದಿಂದ ನೋಡುತ್ತಿದ್ದನೇ ಹೊರತು ತನ್ನ ಕುಟುಂಬದೊಂದಿಗೆ ಎಂದಿಗೂ ಸೇರಿಸಿಕೊಳ್ಳುತ್ತಿರಲಿಲ್ಲ. ಅವಳ ದೇಹ ಸೌಂದರ್ಯ ಮಾಸಿದಂತೆ ತಿಪ್ಪೆಗೆಸೆದ ಕಸದಂತೆ ಅನಾಥೆಯಾಗುತ್ತಿದ್ದಳು. ಆದರೆ ಮದುವೆಯಾದ ಹೆಣ್ಣೊಬ್ಬಳ ಗಂಡನಾದವನು ಜೀವನದ ಕೊನೆಯವರೆಗೂ ಅವಳ ಕಷ್ಟ-ಸುಖದಲ್ಲಿ ಭಾಗಿಯಾಗಿರುತ್ತಾನೆ. ಅವಳು ನನ್ನವಳೆಂದು ಮನಃ ಪೂರ್ವಕವಾಗಿ ಒಪ್ಪಿಕೊಳ್ಳುತ್ತಾನೆ. ದೇವದಾಸಿಯರ ಕುಟುಂಬದಲ್ಲಿ ಗಂಡು ಮಕ್ಕಳು ತಮ್ಮ ಮನೆಯ ಹೆಣ್ಣುಗಳಿಗೆ ಹೊರಗಿನಿಂದ ವಿಟ-ಪುರುಷರನ್ನು ಪೂರೈಕೆ ಮಾಡುವ ಕಾರ್ಯಮಾಡುತ್ತಿದ್ದರು. ಇದು ಯಾವ ಸಂಸ್ಕೃತಿಯೂ ಒಪ್ಪಿಕೊಳ್ಳದಂತಹ ಶೋಚನೀಯ ಪದ್ಧತಿಯಾಗಿದೆ.

ಆರ್ಥಿಕತೆ ಹಾಗೂ ಅಧಿಕಾರ ಬಲಗಳು ಪುರುಷರ ವಶದಲ್ಲಿ ಇರುವಂತಹ ಎಲ್ಲ ಸಂಸ್ಕೃತಿಗಳಲ್ಲಿಯೂ ಹೆಣ್ಣನ್ನು ಪುರುಷನ ಆಸ್ತಿಯಂತೆ ಭಾವಿಸಲಾಗಿದೆ. ಈ ಅಂಶವು ಆಯಾ ಸಾಂಸ್ಕೃತಿಕ ಪರಿಸರದಲ್ಲಿ ಬೇರೆ

ಬೇರೆಯಾಗಿ ಅಭಿವ್ಯಕ್ತವಾಗಿದೆ. ಈ ಮನೋಧರ್ಮದಿಂದಾಗಿ ಹೆಣ್ಣನ್ನು ಹೇಗೆ ಬೇಕೋ ಹಾಗೇ ಬಳಸಬಹುದು. ಬೇಕಾದವರಿಗೆ ಕೊಡಬಹುದು. ಬೇಡವೆಂದರೆ ಬಿಡಬಹುದು. ಇಂದು ಈ ಜನಾಂಗದವರು ತಮ್ಮ ಕುಲವೃತ್ತಿಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರೂ, ವೇಶ್ಯಾವೃತ್ತಿಯು ಸಮಾಜದಿಂದ ನಿರ್ಮೂಲನೆಯಾಗಿಲ್ಲ. ಅಂದು ಸಮಾಜದಲ್ಲಿ ನೈತಿಕವೆಂದು ಪರಿಗಣಿಸಲ್ಪಟ್ಟಿದ್ದ ಈ ವೃತ್ತಿಯು ಇಂದು ಅನೈತಿಕವೆಂದು ಪರಿಗಣಿಸಲಾಗಿದೆ.

ಸಂಗೀತ, ನೃತ್ಯ, ರಂಗಭೂಮಿ ಹಾಗೂ ಇತರ ಕಲೆಗಳು ಮುಂದೆ ಶಿಷ್ಟ ಸಂಪ್ರದಾಯದ ಕಲೆಗಳಾಗಿ ರೂಪುಗೊಂಡಾಗ ಅವುಗಳಿಗೆ ಒಂದು ಮಾದರಿಯನ್ನು, ಮೂಲಭೂತವಾದ ಒಂದು ಆಕಾರವನ್ನು ಕೊಟ್ಟದ್ದು ಈ ದೇವದಾಸಿ ಸಮಾಜವೇ ಆಗಿದೆ. ಇದರಿಂದ ಬೆಳೆದು, ಪೋಷಿಸಿಕೊಂಡು ಬಂದಿರುವ ನೃತ್ಯ, ಸಂಗೀತ, ಲಲಿತ ಕಲೆಗಳು ಇಂದು ಎಲ್ಲರ ಸೊತ್ತಾಗಿ ಸಾಮಾಜಿಕ ಮಾನ್ಯತೆ ಪಡೆದುಕೊಂಡಿದೆ. ದೇವದಾಸಿಯರು ಅನುಸರಿಸುತ್ತಿದ್ದ 'ಗೆಜ್ಜೆಪೂಜೆ' ಸಂಪ್ರದಾಯವು ಇತರ ಕೆಲವು ಕಲೆಗಳಲ್ಲಿ ಈಗಲೂ ಮುಂದುವರಿದುಕೊಂಡು ಬಂದಿದೆ. ಭರತನಾಟ್ಯ, ಯಕ್ಷಗಾನಗಳಲ್ಲಿ ರಂಗ ಪ್ರವೇಶದಂದು 'ಗೆಜ್ಜೆಪೂಜೆ'ಯಾಗಬೇಕಾಗಿದೆ.

ಎಲ್ಲಾ ಕಾಲದಲ್ಲಿಯೂ ಸಮಾಜವು ಸಂಪ್ರದಾಯದ ನಿಯಮದಂತೆ ಸಾಗುವುದಿಲ್ಲ. ನಿಯಮಗಳ ಉಲ್ಲಂಘನೆ, ಹೊಸತರ ಆಕರ್ಷಣೆಯು ಎಲ್ಲ ಕಾಲದಲ್ಲಿಯೂ ಸಮಾಜದಲ್ಲಿ ನಡೆಯುತ್ತಲೇ ಇರುತ್ತದೆ. ಒಟ್ಟಿನಲ್ಲಿ ವಸಾಹತು ಪೂರ್ವದ ಮತ್ತು ಆನಂತರದ ಕರ್ನಾಟಕದ ಸಮಾಜವೊಂದರ ರೀತಿ-ನೀತಿಗಳನ್ನು 'ದೇವದಾಸಿ'ಯರ ಸಮಾಜದ ಅಧ್ಯಯನದ ಮೂಲಕ ತಿಳಿದುಕೊಳ್ಳಲು ಸಾಧ್ಯವೆಂದು ಈ ಸಂಶೋಧನೆಯ ಮೂಲಕ ತಿಳಿಸಲು ಪ್ರಯತ್ನಿಸಲಾಗಿದೆ.

ವಿದ್ವಾಂಸರೊಂದಿಗಿನ ಚರ್ಚೆ ಮತ್ತು ಸಾಹಿತ್ಯ ಗ್ರಂಥಗಳ ಪರಾಮರ್ಶೆಯನ್ನು ಮಾಡಲಾಗಿದೆ. ಐದು ಅಧ್ಯಾಯಗಳನ್ನೊಳಗೊಂಡಿರುವ ಈ ಅಧ್ಯಯನದ ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆಯ ಬಗ್ಗೆ ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ದೇವದಾಸಿ ಪದ್ಧತಿಯ ಸ್ತ್ರೀವಾದಿ ನಿರ್ವಚನದಲ್ಲಿ ಪಾತರದವರು, ದೇವದಾಸಿಯರು ಬಸವಿಯರು, ಜೋಗತಿಯರು, ವೇಶ್ಯೆಯರ ಬಗ್ಗೆ ತುಲನಾತ್ಮಕ ವಿವರಣೆಯನ್ನು, ದೇವದಾಸಿ ಪದದ ಅರ್ಥ, ಈ ಪದ್ಧತಿಯ ವಿಕಾಸ, ಚಾರಿತ್ರಿಕ ಹಿನ್ನೆಲೆಯನ್ನು ಸಹ ಕೊಡಲಾಗಿದೆ. ಇದರ ಜೊತೆಗೆ ದೇವದಾಸಿ ಪರಂಪರೆ ಮತ್ತು ಪಿತೃ ಪ್ರಧಾನತೆಯ ಸಂಬಂಧವನ್ನು ಕಲ್ಪಿಸಲಾಗಿದೆ. ಧಾರ್ಮಿಕ ವ್ಯವಸ್ಥೆ ಮತ್ತು ದೇವದಾಸಿಯರ ಬಗ್ಗೆ ವಿವರಿಸಲಾಗಿದೆ. ದೇವದಾಸಿಯರನ್ನು ಈ ಸ್ಥಿತಿಗೆ ಇಳಿಸಿದವರು ಯಾರು? ದೇವದಾಸಿಯರ ಬದುಕಿನ ಪ್ರಮುಖ ಘಟ್ಟಗಳು ಯಾವುವು? ಇವೆಲ್ಲ ಅಂಶಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಬಿಸರಳ್ಳಿ ಗ್ರಾಮದ ಭೌಗೋಳಿಕ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ಭೌಗೋಳಿಕ ಪರಿಚಯದಲ್ಲಿ ಊರಿನ ವಿಸ್ತೀರ್ಣ, ಊರಿನ ವಿಭಿನ್ನ ಸಮುದಾಯಗಳು ಮತ್ತು ಅವರ ಭಾಷೆ, ಊರಿನ ಗುಡಿ-ಗೋಪುರಗಳ ವಿವರಗಳೆಲ್ಲವನ್ನು ನಮೂದಿಸಲಾಗಿದೆ. ಗ್ರಾಮದ ದಾಖಲೆಗಳು, ಜನಗಣತಿ, ದೇವಸ್ಥಾನ ಮತ್ತು ಮಠದ ದಾಖಲೆಗಳು, ಸರ್ಕಾರಿ ಆಜ್ಞೆಗಳು ಮತ್ತು ಪುರಾಣಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮರುಳಸಿದ್ಧೇಶ್ವರ ಮಠದ ದೇವದಾಸಿ ಪದ್ಧತಿಯ ಹಿನ್ನೆಲೆಯನ್ನು ಸ್ಪಷ್ಟಪಡಿಸಲಾಗಿದೆ. ಬಿಸರಳ್ಳಿಯ ದೇವದಾಸಿಯರ ಸಂಪ್ರದಾಯದ ಪರಿಚಯಕ್ಕೆ ಹೆಚ್ಚಿನ ಗಮನ ನೀಡಲಾಗಿದೆ. ಹಾಗೂ ದೇವದಾಸಿಯರ ಒಳಪಂಗಡಗಳು, ಕುಟುಂಬ ರಚನೆಯ ವಿಕಾಸ, ಊರೊಟ್ಟಿನ ಸಂಬಂಧದ ವಿವರಗಳೆಲ್ಲವನ್ನು ನಮೂದಿಸಲಾಗಿದೆ.

ನಾಲ್ಕನೇ ಅಧ್ಯಾಯವು ಬಿಸರಳ್ಳಿಯ ದೇವದಾಸಿಯರ ಬದುಕಿನ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ಉಲ್ಲೇಖಿಸಲಾಗಿದ್ದು, ಇದರಲ್ಲಿ ದೇವದಾಸಿ ಪುನರ್ವಸತಿ ಯೋಜನೆಯ ಮುಖಾಂತರ ಹತ್ತು ಹಲವಾರು ಕಾರ್ಯಕ್ರಮಗಳನ್ನು ನಮೂದಿಸಲಾಗಿದೆ. ಹಾಗೂ ದೇವದಾಸಿ ಪದ್ಧತಿ ಪರ್ಯಾಯ ಸಾಧ್ಯತೆಗಳನ್ನು ವಿವರಿಸಲಾಗಿದೆ. ಅಲ್ಲದೇ ಪ್ರಸ್ತುತ ಬದಲಾದ ಸಂದರ್ಭದಲ್ಲಿ ಈ ಸಮುದಾಯದ ಸ್ಥಿತಿಗತಿ ಹೇಗಿದೆ? ಕ್ಷೇತ್ರಕಾರ್ಯ ಮತ್ತು ವಿದ್ವಾಂಸರೊಂದಿಗಿನ ಚರ್ಚೆಯನ್ನು ಮೂಲ ಆಕರವಾಗಿ ಬಳಸಿಕೊಳ್ಳಲಾಗಿದೆ. ಅಲ್ಲದೇ ತಮ್ಮ ಪರಂಪರೆಯ ಬಗ್ಗೆ ಈ ಜನಾಂಗದ ವಿದ್ಯಾವಂತ ಯುವಕರ ನಿಲುವೇನು? ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಒಟ್ಟಾಗಿ ಅಧ್ಯಯನದಿಂದ ವ್ಯಕ್ತವಾದ ಸಂಶೋಧನೆಯ ಮುಖ್ಯ ಅಂಶಗಳನ್ನು ರೂಪಿಸಲಾಗಿದೆ. ಇದಕ್ಕೆ ಹೊಂದಿಕೊಂಡ ಅನುಬಂಧದಲ್ಲಿ ದೇವದಾಸಿ ವಕ್ತೃಗಳು ಆಧಾರ ಗ್ರಂಥಗಳು ಮತ್ತು ಬಿಸರಳ್ಳಿಗೆ ಸಂಬಂಧಿಸಿದ ಕೆಲವು ಛಾಯಾಚಿತ್ರಗಳನ್ನು ಸಹ ಕೊಡಲಾಗಿದೆ.

ಅನುಬಂಧಗಳು

೧. ಬಿಸರಳ್ಳಿ ದೇವದಾಸಿ ವಕ್ತೃಗಳು

೨. ಗ್ರಂಥಋಣ

೩. ಛಾಯಾ ಚಿತ್ರಗಳು

೧. ಅನುಬಂಧ

ಬಿಸರಳ್ಳಿ ದೇವದಾಸಿ ವಕ್ತೃಗಳು

೧. ಹೆಸರು : ಗುರುಲಿಂಗವ್ವ

ತಾಯಿ : ಮಾಳವ್ವ

ವಯಸ್ಸು : ೭೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೨. ಹೆಸರು : ಮಾಳವ್ವ

ತಾಯಿ : ಸಿದ್ಧವ್ವ

ವಯಸ್ಸು : ೫೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೩. ಹೆಸರು : ಸೋಮವ್ವ

ತಂದೆ : ಹಿರೇಮಲ್ಲಯ್ಯ

ವಯಸ್ಸು : ೨೭

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೪. ಹೆಸರು : ನಿಂಗವ್ವ

ತಾಯಿ : ಸಾರೆವ್ವ

ವಯಸ್ಸು : ೫೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೫. ಹೆಸರು : ಹುಲಿಗೆವ್ವ

ತಂದೆ : ಮಲ್ಲಯ್ಯನವರ

ತಾಯಿ : ಗಂಗವ್ವ

ವಯಸ್ಸು : ೪೨

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೬. ಹೆಸರು : ಮಲ್ಲವ್ವ

ತಂದೆ : ಹಿರೇಮಲ್ಲಯ್ಯ

ವಯಸ್ಸು : ೩೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೭. ಹೆಸರು : ಪಾರ್ವತೆವ್ವ

ತಂದೆ : ಗವಿಸಿದ್ಧಯ್ಯ

ವಯಸ್ಸು : ೪೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೮. ಹೆಸರು : ಹುಚ್ಚವ್ವ

ತಾಯಿ : ಮಳಿಯವ್ವ

ವಯಸ್ಸು : ೪೮

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೯. ಹೆಸರು : ಅಂಬವ್ವ

ತಾಯಿ : ಶರಣವ್ವ

ವಯಸ್ಸು : ೪೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೦. ಹೆಸರು : ಶಿವವ್ವ

ತಾಯಿ : ಸಿದ್ಧವ್ವ

ವಯಸ್ಸು : ೫೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೧. ಹೆಸರು : ಮಲ್ಲವ್ವ

ತಂದೆ : ಸಿದ್ಧಪ್ಪ

ವಯಸ್ಸು : ೬೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೨. ಹೆಸರು : ರೇಣುಕವ್ವ

ತಾಯಿ : ಮಾಳವ್ವ

ವಯಸ್ಸು : ೨೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೩. ಹೆಸರು : ಶಂಕ್ರವ್ವ

ತಾಯಿ : ಮೈಲವ್ವ

ವಯಸ್ಸು : ೪೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೪. ಹೆಸರು : ಯಮನವ್ವ

ತಾಯಿ : ಗಾಳೆವ್ವ

ವಯಸ್ಸು : ೬೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೫. ಹೆಸರು : ಹುಲಿಗೆವ್ವ

ತಂದೆ : ಮಳೆಸಿದ್ಧಪ್ಪ

ವಯಸ್ಸು : ೩೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೬. ಹೆಸರು : ತಟ್ಟೆನವ್ವ

ತಂದೆ : ಸಿದ್ದಪ್ಪ

ವಯಸ್ಸು : ೫೮

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೭. ಹೆಸರು : ಹುಲಿಗೆವ್ವ

ತಂದೆ : ದುರಗಪ್ಪ

ವಯಸ್ಸು : ೩೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೧೮. ಹೆಸರು : ಸಾರೆವ್ವ
ತಂದೆ : ಹನುಮಪ್ಪ
ವಯಸ್ಸು : ೨೯
ಊರು : ಬಿಸರಳ್ಳಿ
ಜಾತಿ : ಹರಿಜನ
ಉದ್ಯೋಗ : ಕೂಲಿ

೧೯. ಹೆಸರು : ಹುಲಿಗೆಮ್ಮ
ತಂದೆ : ನೀಲಪ್ಪ
ವಯಸ್ಸು : ೩೫
ಊರು : ಬಿಸರಳ್ಳಿ
ಜಾತಿ : ಹರಿಜನ
ಉದ್ಯೋಗ : ಕೂಲಿ

೨೦. ಹೆಸರು : ಲಕ್ಷ್ಮವ್ವ
ತಂದೆ : ಮರಲಿಂಗಪ್ಪ
ವಯಸ್ಸು : ೪೫
ಊರು : ಬಿಸರಳ್ಳಿ
ಜಾತಿ : ಹರಿಜನ
ಉದ್ಯೋಗ : ಕೂಲಿ

೨೧. ಹೆಸರು : ಮೈಲವ್ವ
ತಾಯಿ : ಮದ್ದವ್ವ
ವಯಸ್ಸು : ೫೦
ಊರು : ಬಿಸರಳ್ಳಿ
ಜಾತಿ : ಹರಿಜನ
ಉದ್ಯೋಗ : ಕೂಲಿ

೨೨. ಹೆಸರು : ಸುಶೀಲವ್ವ
ತಾಯಿ : ಮೈಲವ್ವ
ವಯಸ್ಸು : ೩೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೨೩. ಹೆಸರು : ನಿಂಗವ್ವ

ತಾಯಿ : ಹನುಮವ್ವ

ವಯಸ್ಸು : ೫೦

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

೨೪. ಹೆಸರು : ಮಲ್ಲವ್ವ

ತಾಯಿ : ಹುಚ್ಚಬಸವ್ವ

ವಯಸ್ಸು : ೪೫

ಊರು : ಬಿಸರಳ್ಳಿ

ಜಾತಿ : ಹರಿಜನ

ಉದ್ಯೋಗ : ಕೂಲಿ

ಅನುಬಂಧ ೨

ಗ್ರಂಥ ಋಣ

೧. ಕಡತೋಟದ ಎನ್ .ಕೆ., ೧೯೮೩, **ಎಲ್ಲಮ್ಮನ ಜೋಗತಿಯರು ಹಾಗೂ ದೇವದಾಸಿ ಪದ್ಧತಿ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಕನರಾಡಿ ವಾದಿರಾಜ ಭಟ್ಟ, ೧೯೮೭, **ದೇವದಾಸಿಯರ ಹಾಡುಗಳು,** ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬಸ್ರೂರು

೩. ಕನ್ನಡ ವಿಶ್ವಕೋಶ ಸಂಪುಟ-೯

೪. ಕಲಬುರ್ಗಿ ಎಂ.ಎಂ., ೧೯೮೭, **ಜಾನಪದ ಸಾಹಿತ್ಯ ದರ್ಶನ,** ಭಾಗ-೨, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೫. ಕಲಬುರ್ಗಿ ಎಂ.ಎಂ., ೧೯೯೪, **ಕರ್ನಾಟಕ ಕೈಫಿಯತ್ತುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಕಲಬುರ್ಗಿ ಎಂ.ಎಂ., ರಾಮಭಟ್ಟ ಬಿ.ಎಸ್., ೧೯೯೪, **ಕೆಳದಿ ಸಂಸ್ಥಾನದ ಸಮಗ್ರ ಅಧ್ಯಯನ ಮಲೆನಾಡು,** ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ.

೭. ಕೆಮ್ಮೂರು ರಘುಪತಿ, ೧೯೭೯, **ತುಳುನಾಡಿನ ಸ್ಥಳನಾಮಗಳು,** ಕ.ಸಾ.ಸಂ. ಬೆಂಗಳೂರು.

೮. ಕೃಷ್ಣರಾವ್ ಎಂ.ವಿ., ಕೇಶವ ಭಟ್ಟ ಎಂ., ೧೯೭೦, **ಕರ್ನಾಟಕದ ಇತಿಹಾಸ ದರ್ಶನ,** ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ನಿಯಮಿತ, ಬೆಂಗಳೂರು

೯. ಖಂಡೋಲ ಪಿ.ಕೆ., ೧೯೯೩, **ಜಾನಪದ ಮುನ್ನೋಟ,** ಸಂಗೀತ ಪಬ್ಲಿಕೇಷನ್ಸ್ , ಗುಲಬರ್ಗಾ.

೧೦. ಗಂಗೂಲಿ, ಡಿ.ಸಿ. ರುಕ್ಕಮ್ಮ(ಅನು) , ೧೯೭೧, **ಯುಗಯಾತ್ರಿ ಭಾರತೀಯ ಸಂಸ್ಕೃತಿ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೧. ಗುಂಡಾ ಜೋಯಿಸ್ ಕೆಳದಿ, ೧೯೭೬, **ಲಿಂಗಣ್ಣ ಕವಿಯ ಕೆಳದಿ ನೃಪವಿಜಯ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨. ಗುರುಮೂರ್ತಿ ಕೆ.ಜಿ., **ಹರಕೆಯ ಹೆಣ್ಣು ಕಿರುಪ್ರಬಂಧ,** ವಿಮೋಚನ ಪ್ರಕಾಶನ, ಅಥಣಿ.

೧೩. ಚಂದ್ರಶೇಖರ್ ಕಂಬಾರ (ಸಂ), ೧೯೮೫, **ಕನ್ನಡ ಜಾನಪದ ವಿಶ್ವಕೋಶ**, ಸಂ-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೪. ಚಿದಾನಂದಮೂರ್ತಿ ಎಂ., ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೫. ಜಿ.ಜಿ. ಜೋಶಿ, ೧೯೯೧, **ಕೌಟಿಲ್ಯನ ರಾಜ್ಯ ಪದ್ಧತಿಯ ಸಮೀಕ್ಷೆ**, ಶರತ್ ಪ್ರಕಾಶನ ಮಂದಿರ, ಬೆಳಗಾವಿ

೧೬. ಜೋಗನ್ ಶಂಕರ್, ೧೯೯೩, **ದೇವದಾಸಿ ಸಂಪ್ರದಾಯ**, ವಿಮೋಚನ ಪ್ರಕಾಶನ, ಅಥಣಿ.

೧೭. ದೀಕ್ಷಿತ್, ಜಿ.ಎಸ್ .ರಾಮಸ್ವಾಮಿ, ಭಾರ್ಗವಿ ಶಿವಯ್ಯ ೧೯೯೭, **ಶ್ರೀ ಕೃಷ್ಣದೇವರಾಯನ ಜೀವನ ಸಾಧನೆಗಳು**, ಪ್ರಾಚ್ಯ ವಸ್ತು ಮತ್ತು ಸಂಗ್ರಹಗಳ ನಿರ್ದೇಶನಾಲಯ, ಮೈಸೂರು.

೧೮. ನಾಗೇಗೌಡ ಎಚ್.ಎಲ್.(ಸಂ), ೧೯೬೧, **ಪ್ರವಾಸಿ ಕಂಡ ಇಂಡಿಯಾ** (ಸಂ-೧ ಮತ್ತು ೨,೩), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೯. ಪುರುಷೋತ್ತಮ ಬಿಳಿಮಲೆ, ೧೯೯೩, **ಜಾನಪದ ಕ್ಷೇತ್ರಕಾರ್ಯ**, ಆಧುನಿಕ ವಿಧಾನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೦. ಭಾರತಿ ಜೀವಿ, ೨೦೦೬, **ದೇವದಾಸಿ ಪ್ರಸಂಗ ದೀಪ್ತಿ**, ಎಸ್ .ಜಿ. ಭಾರತಿ, ಧಾರವಾಡ

೨೧. ಬೆಳಗಲಿ ದು.ನಿಂ., ೧೯೯೧, **ದೇವದಾಸಿ - ಕಾದಂಬರಿ**, ವಿಮೋಚನ ಪ್ರಕಾಶನ, ಅಥಣಿ.

೨೨. ಬೆಳಗಲಿ ದು.ನಿಂ., ೧೯೯೯, **ದೇವದಾಸಿ - ಒಂದು ಅವಲೋಕನ** ವಿಮೋಚನ ಪ್ರಕಾಶನ, ಅಥಣಿ.

೨೩. ಮರುಳ ಸಿದ್ಧಯ್ಯ ಎಚ್.ಎಂ., ೧೯೯೪, **ಭಾರತ ಸಮಾಜಕಾರ್ಯ**, ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ರೋಹಿಣಿ ಬಿ.ಎಂ., ೨೦೦೦, **ಸಂಸ್ಕೃತಿ ಶಿಕ್ಷಣ**, ಹೇಮಾಂಶು ಪ್ರಕಾಶನ, ಮಂಗಳೂರು.

೨೫. ಲಕ್ಷ್ಮಣ ತೆಲಗಾವಿ, ೧೯೯೧, **ಸಂಶೋಧನ**, ಡಾ.ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು.

೨೬. ವೀರೇಶ ಬಡಿಗೇರ, ೧೯೯೯, **ಉತ್ತರ ಕರ್ನಾಟಕದ ಜನಪದ ಗೀತ ಮೇಳಗಳು**, ವಿಮೋಚನ ಪ್ರಕಾಶನ, ಅಥಣಿ.

೨೭. ವೆಂಕಟೇಶ ಜೋಯಿಸ್ ಕೆ.ಜಿ., ೧೯೯೬, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೮. ವೆಂಕಟರತ್ನಂ ಎ.ವಿ., ೧೯೭೪, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೯. ವೆಂಕಟಸುಬ್ಬಯ್ಯ ಜಿ.(ಸಂ), **ಕನ್ನಡ ನಿಘಂಟು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೦. ವೇಣು ಬಿ.ಎಲ್., **ಕ್ರಾಂತಿಯೋಗಿ ಮರುಳ ಸಿದ್ಧ** ಶಿರಗೇರಿ ತರಳಬಾಳು ಜಗದ್ಗುರು ಬೃಹನ್ಮಠ ಮಠ, ೨೦೦೦

೩೧. ಶಾರದಶಾಮಣ್ಣ, ೧೯೯೩, **ಜಾನಪದ ನೆಲೆಯಲ್ಲಿ ಮಹಿಳೆ,** ಕಳಶ ಪ್ರಕಾಶನ, ಶಂಕರಪುರ, ಬೆಂಗಳೂರು.

೩೨. ಶೈಲಜ ಹಿರೇಮಠ, ೧೯೯೯, **ಪಾತರದವರು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೩. ಶ್ರೀಕಂಠಯ್ಯ ಕೆ., ೧೯೮೩, **ವಿಜಯನಗರ ಕಾಲದ ಕನ್ನಡ ಸಾಹಿತ್ಯ ಜನಜೀವನ ಚಿತ್ರ,** ಗೀತಾ ಬುಕ್ ಹೌಸ್, ಮೈಸೂರು.

೩೪. ಶ್ರೀಕಂಠಶಾಸ್ತ್ರೀ ಎಸ್., ೧೯೫೪, **ಭಾರತೀಯ ಸಂಸ್ಕೃತಿ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩೫. ಸಿದ್ಧಲಿಂಗಯ್ಯ, ೧೯೯೭, **ಗ್ರಾಮದೇವತೆಗಳು,** ಮೂಲ ಭಾರತಿ ಪ್ರಕಾಶನ, ಬೆಂಗಳೂರು.

ಆಂಗ್ಲ ಗ್ರಂಥಗಳು

೧. Kali prasad goswami, 2000, **Devadasi Dancing damsel,** A.P.H. Publishing corportations, Delhi.

೨. Konduri sarojini Devi, 1990, **Religion in vijayanagara Errpire,** sterling publishers pvt.Ltd, New Delhi.

೩. Mohammed Hussain Nainar, 1942, **Geographers Knowledge of south India,** madras.

೪. Robert sewell, 1971, **A forgotten Errpire,** National book trust, India

೫. Saraswathi Nanaiah N., 1992, **The position of women during vijayanagara period (133-1646),** Saraswathi publications, Mysore.

ದಿನಪತ್ರಿಕೆಗಳು

೧. ರಾಜಶೇಖರ್ ಎಸ್., ಬಲಪ್ರಯೋಗವೊಂದೆ ಪರಿಹಾರವಲ್ಲ, ಚಂದ್ರಗುತ್ತಿ ಬೆತ್ತಲೆ ಸೇವೆ, ಪ್ರಜಾವಾಣಿ, ೨೯-೦೩-೧೯೮೭

೨. ವಿಜಯ ಪೂಣಚ್ಚ, ಚಂದ್ರಗುತ್ತಿ ಜಾತ್ರೆ, ೩ ವರ್ಷ ನಿಷೇಧ ಸಂಭವ, ಮುಂಗಾರು, ೨೩-೩-೧೯೮೬

೩. ದೇವದಾಸಿ ಅಂತ್ಯಕ್ಕೆ ಸರ್ಕಾರದ ಎಲ್ಲ ಕ್ರಮ, ಪ್ರಜಾವಾಣಿ, ೫-೩-೧೯೭೦

೪. ರಂಜನಾ, ದೇವದಾಸಿ ಪದ್ಧತಿ ಈಗಲೂ ಜೀವಂತ, ಕನ್ನಡ ಪ್ರಭ, ೧-೩-೧೯೮೧

೫. ಚಂದ್ರಶೇಖರ ಪ್ರಾತಃಕಾಲ, ದೇವದಾಸಿಯರು, ಪ್ರಜಾವಾಣಿ, ೨೧-೧೨-೧೯೮೦

೬. ಯಶವಂತ ಡಿ., ಕೃಷ್ಣಪ್ಪ ಎಚ್ ., ಮಾನವತೆ ಮರುಗಬೇಕಾದ ಹೇಯ ಪರಂಪರೆ ಚಂದ್ರಗುತ್ತಿಯ ಕುಖ್ಯಾತ ಬೆತ್ತಲೆ ಸೇವೆ, ಮುಂಗಾರು, ೨೧-೩-೧೯೮೬

೭. ವಿಜು ಪೂಣಚ್ಚ, ಬೆತ್ತಲೆ ಭಕ್ತರಿಂದ ಭೀಕರ ದೌರ್ಜನ್ಯ, ದೊಂಬಿ, ಮುಂಗಾರು, ೨೧-೩-೧೯೮೬

೮. ಅರುಣ, ಚಂದ್ರಗುತ್ತಿಯಲ್ಲಿ ಭಕ್ತರ ಕೋಪ ಪೋಲೀಸರಿಗೆ ಬೆತ್ತಲೆ ಸೇವೆ, ಕನ್ನಡ ಪ್ರಭ, ೨೧-೩-೧೯೮೬

೯. ರಾಮಕೃಷ್ಣ ಶಾಸ್ತ್ರೀ ಪ., ಮಳೆಯನ್ನು ತರಿಸುವ ಬೆತ್ತಲೆ ಮಹಿಳೆಯರು, ಕನ್ನಡ ಪ್ರಭ, ೨೨-೩-೧೯೮೩

೧೦. ನಾಗರಾಜ್ ಬಡದಾಳ್ , ನಾಯಿಗಿಂತಲೂ ಕಡೆಯಾದ `ದೇವದಾಸಿ'ಯರ ಬದುಕು, ಕನ್ನಡಪ್ರಭ, ೧-೨-೨೦೦೭

೧೧. ರಾಜ್ಯದಲ್ಲಿ ದೇವದಾಸಿ ಪದ್ಧತಿ ಜೀವಂತ, ವಿಜಯ ಕರ್ನಾಟಕ, ೧೭-೦೨-೨೦೦೭

೧೨. ಕೇಶವ ಪ್ರಸಾದ್ ಬಿ.ಕಿದೂರು, ದೇವದಾಸಿ ಪದ್ಧತಿ ದೂರಾಗುವುದು ಯಾವಾಗ, ವಿಜಯ ಕರ್ನಾಟಕ, ೨೦-೦೨-೨೦೦೨

೧೩. ಪ್ರಕಟಣೆ, ದೇವದಾಸಿ ಮಹಿಳೆಯರ ಪ್ರತಿಭಟನಾ ಧರಣಿ, ಕೊಪ್ಪಳ, ೨೩-೦೪-೨೦೦೨


೧೪. ಪ್ರಕಟಣೆ, ದೇವದಾಸಿ ಮಹಿಳೆಯರ ವಿಮೋಚನೆಗಾಗಿ ರಾಜ್ಯ ಮಟ್ಟದ ಸಮಾವೇಶ, ಗುಲ್ಬರ್ಗಾ ೧೨-೨-೨೦೦೭

ಅನುಬಂಧ ೩

ಛಾಯಾಚಿತ್ರಗಳು



ಬಿಸರಳ್ಳಿ, ಮರುಳಸಿದ್ದೇಶ್ವರ ಮಠ



ಬಿಸರಳ್ಳಿ, ಮರುಳಸಿದ್ದೇಶ್ವರ ಮಠ ಪ್ರಾರಂಭವಾದ ದಿನಾಂಕ




[illegible]

[illegible]




ಬಿಸರಳ್ಳಿ ಮರುಳಸಿದ್ದೇಶ್ವರ ಮಠದ ಪಕ್ಕದಲ್ಲಿರುವ ಹಿರೇಕರ್ತ




ಬಿಸರಳ್ಳಿ ಹಿರಿಯ ದೇವದಾಸಿಯಾದ ಹುಲಿಗೆವ್ವ









ಬಿಸರಳ್ಳಿ ಮರುಳಸಿದ್ಧೇಶ್ವರ ಮಠದ ಹಿಂದಿನ ಪೂಜಾರಿ



ಬಿಸರಳ್ಳಿಯ ದೇವದಾಸಿಯರು




ಬಿಸರಳ್ಳಿ ಮರುಳಸಿದ್ಧೇಶ್ವರ ಮಠದ ಪೂಜಾರಿ ಮತ್ತು ದೇವದಾಸಿ



ಬಿಸರಳ್ಳಿ ಜನತಾ ಮನೆಯಲ್ಲಿ ಚಳ್ಳಮ್ಮನಗುಡಿ







ಬಿಸರಳ್ಳಿ ಮರಳುಸಿದ್ಧೇಶ್ವರ ಮಠದ ಒಳಭಾಗದ ಬೃಹತ್ ಕಂಬಗಳು



ಬಿಸರಳ್ಳಿ, ಮರಳುಸಿದ್ಧೇಶ್ವರ ಮಠದ ಮುಂಭಾಗ







ಬಿಸರಳ್ಳಿ ಮರಳುಸಿದ್ಧೇಶ್ವರ ಮಠದ ಸ್ತೂಪ



ಬಿಸರಳ್ಳಿ ಮರಳುಸಿದ್ದೇಶ್ವರ ಮಠದ ಹತ್ತಿರದಲ್ಲಿ ಇರುವ ದೇವದಾಸಿಯರ ಮನೆಗಳು







ಬಿಸರಳ್ಳಿ ಮರಳುಸಿದ್ಧೇಶ್ವರ ಮಠದ ಹತ್ತಿರದಲ್ಲಿ ಇರುವ ಹಿರೇಕರ್ತೃ



ಬಿಸರಳ್ಳಿ ಮರಳುಸಿದ್ಧೇಶ್ವರ ಮಠದ ಗರ್ಭಗುಡಿ



